

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಫೆಬ್ರವರಿ 24 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 305 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಶೇ.30 ಶಾಸಕರು ಭ್ರಷ್ಟರು!

■ ಮುಖ್ಯಮಂತ್ರಿ ಕೇಳಿದರೆ ಪಟ್ಟಿ ನೀಡಲು ಸಿದ್ಧ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಸವಾಲು ■ ಮಾ.6ಕ್ಕೆ ಫ್ರೀಡಂಪಾರ್ಕ್‌ನಲ್ಲಿ 35 ಸಾವಿರ ಗುತ್ತಿಗೆದಾರರು ಕುಟುಂಬ ಸಮೇತ ಪ್ರತಿಭಟನೆ

ಚಿತ್ರದುರ್ಗ: ರಾಜ್ಯದ ಶೇಕಡಾ 30ರಷ್ಟು ಚುನಾಯಿತ ಪ್ರತಿನಿಧಿಗಳು ಭ್ರಷ್ಟರಾಗಿದ್ದಾರೆ ಎಂದು ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಆರೋಪಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಳಿದರೆ ಭ್ರಷ್ಟರ ಪಟ್ಟಿಯನ್ನು ನೀಡಲು ಸಿದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಚಿತ್ರದುರ್ಗದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಂಜುನಾಥ್, ರಾಜ್ಯಾದ್ಯಂತ ಗುತ್ತಿಗೆದಾರರಿಗೆ ಪಾವತಿಸಬೇಕಿರುವ 37,000 ಕೋಟಿ ರೂಪಾಯಿ ಬಾಕಿ ಇದೆ. ಸರ್ಕಾರ ತಕ್ಷಣವೇ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ರಾಜ್ಯದ 30 ಶೇಕಡಾ ಚುನಾಯಿತ ಪ್ರತಿನಿಧಿಗಳು ಭ್ರಷ್ಟರು. ಮುಖ್ಯಮಂತ್ರಿ ಕೇಳಿದರೆ ಅವರ ಹೆಸರಿನ ಪಟ್ಟಿಯನ್ನು ನೀಡಲು ನಾನು ಸಿದ್ಧನಿದ್ದೇನೆ ಎಂದು ಮಂಜುನಾಥ್ ಪುನರುಚ್ಚರಿಸಿದ್ದಾರೆ. ಗುತ್ತಿಗೆದಾರರ ಸಂಘದ ಬಾಕಿ ಪಾವತಿ ಸಮಸ್ಯೆ ಸಂಬಂಧ ಹಲವು ಸಭೆಗಳು ನಡೆದಿದ್ದರೂ ಮುಖ್ಯಮಂತ್ರಿ ಪರಿಹರಿಸಿಲ್ಲ ಎಂದು ಟೀಕಿಸಿದರು.


ರಾಜ್ಯದ ಗುತ್ತಿಗೆದಾರರಿಗೆ 37,000 ಕೋಟಿ ರೂಪಾಯಿ ಬಾಕಿಯಿದೆ. ಇದನ್ನು ಹಿಂದಿನ ಸರ್ಕಾರ ಪಾವತಿ ಮಾಡದೆ ಬಾಕಿ ಉಳಿಸಿದೆ ಎಂದು ಸಿದ್ದರಾಮಯ್ಯ ಹೇಳಬಾರದು. ಸರ್ಕಾರ ಎಂದರೆ ಎಲ್ಲರೂ ಹೊಣೆಗಾರರು. ಮುಖ್ಯಮಂತ್ರಿ ಬಾಕಿ ಹಣವನ್ನು ಬಿಡುಗಡೆ ಮಾಡಬೇಕು. ಈ ಸಂಬಂಧ ಈಗಾಗಲೇ ಅನೇಕ ಸಭೆಗಳು ನಡೆದಿವೆ. ಆದರೆ ಯಾವುದೇ ಫಲಿತಾಂಶ ಇಲ್ಲ ಎಂದು ಹೇಳಿದರು.

ಭಾರೀ ಪ್ರತಿಭಟನೆ ಎಚ್ಚರಿಕೆ: ಮಾರ್ಚ್ 6ರಂದು ರಾಜ್ಯದ 35,000 ಗುತ್ತಿಗೆದಾರರು ತಮ್ಮ ಕುಟುಂಬ ಸದಸ್ಯರೊಂದಿಗೆ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ಮಂಜುನಾಥ್ ಘೋಷಿಸಿದರು. ಜಲ್ ಜೀವನ ಮಿಷನ್ (ಎಎಜ) ಕಾಮಗಾರಿಗಳ ವಿಳಂಬದ ವಿಷಯದಲ್ಲಿಯೂ ಆತಂಕ ವ್ಯಕ್ತಪಡಿಸಿ, ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಹಣ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಎಎಜ ಕಾಮಗಾರಿಗಳೂ ವಿಳಂಬವಾಗುತ್ತಿವೆ. ಸರ್ಕಾರ ಕೇಂದ್ರದೊಂದಿಗೆ ಮಾತನಾಡಿ, ಹಣ ಬಿಡುಗಡೆ ಮಾಡಬೇಕು ಎಂದು ಹೇಳಿದರು. ಈ ಆರೋಪಗಳು, ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಜಾತಿ, ಆಡಳಿತ, ಭ್ರಷ್ಟಾಚಾರ ಮತ್ತು ಹಣಕಾಸು ನಿರ್ವಹಣೆ, ನಾಯಕತ್ವ ಬದಲಾವಣೆ ಕುರಿತು ರಾಜಕೀಯದಲ್ಲಿ ತೀವ್ರ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಹೊರಬಿದ್ದಿವೆ.

ಸರ್ಕಾರದ ವಿರುದ್ಧ ಸಿಡಿದೆದ್ದ ವೈದ್ಯರು

ಮಾ.11ರಿಂದ ಒಪಿಡಿ ಸೇವೆ ಬಂದ್



ಬೆಂಗಳೂರು: ಮುಂದಿನ ತಿಂಗಳು ರಾಜ್ಯದಲ್ಲಿ ಹೆಲ್ತ್ ಎಮರ್ಜೆನ್ಸಿ ಉಂಟಾಗುವ ಸಾಧ್ಯತೆ ದಟ್ಟವಾಗಿದೆ. ರಾಜ್ಯ ಸರ್ಕಾರದ ವಿರುದ್ಧ ವೈದ್ಯರು ಸಿಡಿದೆದ್ದಿದ್ದಾರೆ. ಔಷಧ ಸರಬರಾಜು, ವೈದ್ಯರ ನೇಮಕ, ಬಡ್ತಿ ಸಹಿತ ನಾನಾ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.

ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಮಾರ್ಚ್ 11 ರಿಂದ ಮುಷ್ಕರ ಆರಂಭಿಸಲಿದೆ. ಮಾರ್ಚ್ 11ರಿಂದ 15ರವರೆಗೆ ಎಲ್ಲಾ ಜಿಲ್ಲಾ, ತಾಲೂಕು ಆಸ್ಪತ್ರೆ, ಸಮುದಾಯ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಪ್ಪು ಪಟ್ಟಿ ಧರಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ. ಈ ವೇಳೆ ಹೊರರೋಗಿಗಳ ಚಿಕಿತ್ಸೆ ಸ್ಥಗಿತಗೊಳಿಸಿ ತುರ್ತು ಸೇವೆ ಮಾತ್ರ ನೀಡಲು ನಿರ್ಧರಿಸಲಾಗಿದೆ.

ಆನಂತರವೂ ಸರ್ಕಾರ ತಮ್ಮ ನಿಲುವಿನಲ್ಲಿ ಬದಲಾವಣೆ ಕಾಣದಿದ್ದರೆ ಮಾ.16ರಿಂದ ಗೈರಾಗುವ ಮೂಲಕ ಮುಷ್ಕರ ತೀವ್ರಗೊಳಿಸಲು ನಿರ್ಧರಿಸಲಾಗಿದೆ. ಇಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ್ ಮೇಟಿ, ■ 6ನೇ ಪುಟಕ್ಕೆ

ನಮಗೂ ಸಚಿವ ಸ್ಥಾನ ಕೊಡಿ...!

ನಾಯಕತ್ವ ಬದಲಾವಣೆ ಗೊಂದಲ, ಗದ್ದಲದ ನಡುವೆ ಹೈಕಮಾಂಡ್‌ಗೆ ಪತ್ರ ಬರೆದ 31 ಮಂದಿ ಯುವ ಶಾಸಕರು

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಗೊಂದಲ, ಗದ್ದಲದ ನಡುವೆ ಕೈ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. ರಾಜ್ಯ ಸಂಪುಟ ಪುನಾರಚನೆ ಮಾಡಿ, ನಮಗೂ ಸಚಿವ ಸ್ಥಾನ ನೀಡಿ ಕೂಗು ಕೇಳಿಬಂದಿದೆ.

ಮೊದಲ ಬಾರಿಗೆ ಗೆದ್ದಿರುವ ಕಾಂಗ್ರೆಸ್‌ನ 31 ಶಾಸಕರು ಕಾಂಗ್ರೆಸ್ ಹೈಕಮಾಂಡ್ ನಾಯಕರಿಗೆ ಪತ್ರ ಬರೆದಿದ್ದು, ಸಂಪುಟ ವಿಸ್ತರಣೆ ಮಾಡಿ, ನಮಗೂ ಅವಕಾಶ ಕೊಡಿ ಎಂದು ಧ್ವನಿ ಎತ್ತಿದ್ದಾರೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲ ಕರ್ನಾಟಕ ಪ್ರವಾಸದಲ್ಲಿರುವಾಗಲೇ ಸಂಪುಟ ಪುನರ್ ರಚನೆ ಬೇಡಿಕೆ ಬಂದಿದೆ.

ಶಾಸಕರು ಬರೆದಿರುವ ಪತ್ರದ ಸಾರಾಂಶ: ಕಾಂಗ್ರೆಸ್‌ನಿಂದ ಮೊದಲ ಬಾರಿ 38 ಶಾಸಕರು ಆಯ್ಕೆಯಾಗಿದ್ದಾರೆ. ಈ ಮೂಲಕ ಯುವಕರ ಅವಶ್ಯಕತೆ ಇದೆ ಎಂದು ಜನ ಹೇಳಿದ್ದಾರೆ. ಮೊದಲ ಬಾರಿ ಗೆದ್ದವರಿಗೆ ಸಚಿವ ಸ್ಥಾನ ನೀಡಿ ಜನಾದೇಶಕ್ಕೆ ಮನ್ನಣೆ ನೀಡಿ. ಯುವಕರಿಗೆ ಅವಕಾಶ ನೀಡುವುದು ಈ ಕ್ಷಣದ ಬೇಡಿಕೆಯಾಗಿದೆ.

ಮೊದಲ ಬಾರಿ ಗೆದ್ದಿರುವ ಐವರು ಶಾಸಕರಿಗೆ ಸಚಿವ ಸ್ಥಾನ ನೀಡಿ. ಬೇರೆ ಸರ್ಕಾರದಲ್ಲಿ ಮೊದಲ ಬಾರಿಯ ಶಾಸಕರು ಸಿಎಂ ಆಗಿದ್ದಾರೆ. ಹೊಸಬರಿಗೆ ಅವಕಾಶ ನೀಡಿದರೆ ಮುಂದಿನ ಚುನಾವಣೆ ಗೆಲ್ಲಲು ಸಹಕಾರಿಯಾಗಲಿದೆ. ಪಕ್ಷ ನಿಷ್ಠೆ, ಸೈದ್ಧಾಂತಿಕವಾಗಿ ಗಟ್ಟಿಯಾಗಿರುವವರಿಗೆ ಅವಕಾಶ ನೀಡಿ ಎಂದು ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. ■ 6ನೇ ಪುಟಕ್ಕೆ

ಎಫ್‌ಎಸ್‌ಎಲ್ ವರದಿಯಿಂದ ಆತಂಕಕಾರಿ ವಿಚಾರ ಬಯಲು

ಮೈಸೂರಿನ ಯಾಂದಳ್ಳಿಯ ಮನೆಯಲ್ಲೂ ಡ್ರಗ್ಸ್ ತಯಾರಿಕೆ

- ಡ್ರಗ್ಸ್ ತಯಾರಿಕೆಗೆ ಅವಶ್ಯವಿರುವ ಕಚ್ಚಾ ರಾಸಾಯನಿಕ ವಸ್ತುಗಳು ಪತ್ತೆ
- ಮೈಸೂರಿನಲ್ಲಿ ಪತ್ತೆಯಾದ ಮೂರನೆ ಡ್ರಗ್ಸ್ ತಯಾರಿಕಾ ಘಟಕವಿದು
- ಗುಜರಾತ್‌ನಲ್ಲಿ ಮೈಸೂರು ಪೊಲೀಸರ ಬೇಟೆ; ಐವರ ಬಂಧನ

ಮೈಸೂರು, ಫೆ.23(ಬಿಎಲ್‌ಯು)– ಮೈಸೂರಿನ ಹೊರವಲಯದ ಯಾಂದಳ್ಳಿಯ ಮನೆಯೊಂದರ ಮೇಲೆ ಪೊಲೀಸರು ದಾಳಿ ಮಾಡಿ ವಶಪಡಿಸಿಕೊಂಡ ರಾಸಾಯನಿಕ ವಸ್ತುಗಳು ಡ್ರಗ್‌ಗೆ ಸಂಬಂಧಿಸಿದವು ಎಂಬುದು ಪ್ರಯೋಗಾಲಯದ ವರದಿಯಿಂದ ಧೃಡಪಟ್ಟಿದೆ. ಈ ಮೂಲಕ ಮೈಸೂರಿನ ಡ್ರಗ್ಸ್ ತಯಾರಿಕೆಯ ಮೂರನೆ ಅತಿ ದೊಡ್ಡ ಜಾಲ ಬಯಲಾಗಿದೆ.



ಯಾಂದಳ್ಳಿಯ ಮನೆ

ಮೈಸೂರಿನಲ್ಲಿ ಸರಣಿ ಡ್ರಗ್ಸ್ ತಯಾರಿಕಾ ಘಟಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಪೊಲೀಸರು ಮನೆ ಮನೆಗೆ ಪೊಲೀಸ್ ಅಭಿಯಾನದಲ್ಲಿ ಪ್ರತಿ ಮನೆ ಶೋಧನೆ ನಡೆಸುತ್ತಿದ್ದರು.

ಆ ವೇಳೆ ಜನವರಿ 28ರಂದು ಯಾಂದಳ್ಳಿ ಬಳಿಯ ವಸತಿ ಬಡಾವಣೆಯ ಮೂರು ಅಂತಸ್ತಿನ ಮನೆಯ ಬಗ್ಗೆ ಶಂಕೆ ವ್ಯಕ್ತವಾಗಿತ್ತು. ತಕ್ಷಣವೇ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸಿಬ್ಬಂದಿ ಮಾಹಿತಿ ನೀಡಿದರು. ಅಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದ ಹಿರಿಯ ಪೊಲೀಸ್ ಅಧಿಕಾರಿಗಳು ಅಲ್ಲಿ ಮನೆಯ ಪರಿಶೀಲನೆ ನಡೆಸಿದರು.

ದಾಳಿ ವೇಳೆ ಆ ಮನೆಯಲ್ಲಿ ಹಲವು ಘನ ರಾಸಾಯನಿಕ ವಸ್ತುಗಳು ಹಾಗೂ 10 ಬ್ಯಾರಲ್ ರಾಸಾಯನಿಕ ದ್ರವ್ಯ ಪತ್ತೆಯಾಗಿತ್ತು. ಅಲ್ಲಿ ದೊರೆತ ರಾಸಾಯನಿಕ ವಸ್ತುಗಳು ಹಾಗೂ ■ 6ನೇ ಪುಟಕ್ಕೆ





ಮೈಸೂರು ಮಿತ್ರ ಮಂಗಳವಾರ 24 ಫೆಬ್ರವರಿ 2026

ಕೆ.ಬಿ.ರೋಶ್ನಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆ



ಕೆ.ಬಿ.ರೋಶ್ನಿ

ಮೈಸೂರು,ಫೆ.23–ಇತ್ತೀಚೆಗೆ ನಡೆದ ಸಿವಿಲ್ ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆಯಲ್ಲಿ ಕೆ.ಬಿ.ರೋಶ್ನಿ ಅವರು ರಾಜ್ಯದಲ್ಲೇ ಐದನೇ ಸ್ಥಾನದೊಂದಿಗೆ ಆಯ್ಕೆಯಾಗಿದ್ದಾರೆ.

ನ್ಯಾಯಾಂಗ ಸೇವಾ ಪರೀಕ್ಷೆ ಪೂರ್ವಭಾವಿ, ಮುಖ್ಯ ಪರೀಕ್ಷೆಗಳು ಹಾಗೂ ಸಂದರ್ಶನ ಹಂತಗಳನ್ನು ಸಮರ್ಥವಾಗಿ ಎದುರಿಸಿದ ಅವರು, ಕಾನೂನು ಜ್ಞಾನ, ತಾರ್ಕಿಕ ಚಿಂತನೆ, ನ್ಯಾಯಬದ್ಧ ದೃಷ್ಟಿಕೋನ ಮತ್ತು ವ್ಯಕ್ತಿತ್ವದ ದೃಢತೆಯಿಂದ ಈ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದಾರೆ.

ಮೂಲತಃ ಕೊಡಗು ಜಿಲ್ಲೆಯ ಗೋಣಿಕೊಪ್ಪದ ಹಾತೂರು ಗ್ರಾಮದವರು. ತಂದೆ ಬಿದ್ದಪ್ಪ, ನಿವೃತ್ತ ಬಿಎಸ್ಎಫ್ ಅಧಿಕಾರಿ. ತಾಯಿ ರೇಣು ಎಲ್ಐಸಿಯಲ್ಲಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಹಾಲಿ ಬೋಗಾದಿಯಲ್ಲಿ ವಾಸವಾಗಿದ್ದಾರೆ.


ಇವರು ತಮ್ಮ ಪ್ರಾರಂಭಿಕ ಶಾಲಾ ಶಿಕ್ಷಣವನ್ನು ಮಡಿಕೇರಿಯ ಭಾರತೀಯ ವಿದ್ಯಾ ಭವನ, ಪಿ.ಯು. ಶಿಕ್ಷಣವನ್ನು ಶಿವಮೊಗ್ಗದ ಅರಬಿಂದೊ ಪಿ.ಯು.ಕಾಲೇಜಿನಲ್ಲಿ, ಮೈಸೂರಿನ ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ BA, LLB ಮತ್ತು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದಲ್ಲಿ ಐಐಒ ಪದವಿಯನ್ನು ಪಡೆದರು. ಹಾಲಿ ಮೈಸೂರಿನಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ಅಧ್ಯಯನ ಶೀಲತೆ, ಶಿಸ್ತು ಹಾಗೂ ಸಮಾಜದ ದುರ್ಬಲ ವರ್ಗಗಳ ಬಗ್ಗೆ ಕಾಳಜಿ ಹೊಂದಿದ್ದ ರೋಶ್ನಿ ಅವರ ಈ ಸಾಧನೆ, ನಿರಂತರ ಪರಿಶ್ರಮಕ್ಕೆ ದೊರೆತ ಫಲವೆಂದು ಅವರ ಪೋಷಕರು ಅಭಿಪ್ರಾಯಪಟ್ಟಿದ್ದಾರೆ.

ಬಿಪಿಎಲ್ ಪಡಿತರ ಚೀಟಿ ವಿತರಣೆ...




ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ತಮ್ಮ ಶಿಫಾರಸ್ಸು ಮೂಲಕ ಮಂಜೂರಾದ ಮೈಸೂರು ನಗರ ವಾರ್ಡ್ ನಂ.5 ಕುಂಬಾರ ಕೊಪ್ಪಲಿನ ಫಲಾನುಭವಿಗಳಿಗೆ ಹೊಸ ಬಿಪಿಎಲ್ ಪಡಿತರ ಚೀಟಿ ವಿತರಿಸಿದರು. ಈ ವೇಳೆ ಪ್ರವೀಣ್, ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ಲಕ್ಷ್ಮಕ್ಕ, ಕುಂಬಾರಕೊಪ್ಪಲು ಅಭ್ಯುದಯ ಸಂಘದ ಉಪಾಧ್ಯಕ್ಷ ಮಹದೇವಣ್ಣ, ಕಾರ್ಯದರ್ಶಿ ಭೈರಪ್ಪ, ಆರ್.ಮಂಜು, ಲೋಕೇಶ್, ವಿಷಕಂಠ, ಶಂಕರ್, ಪೈ.ಕೃಷ್ಣಕುಮಾರ್, ನವೀನ್, ಎಂ.ಚಿಕ್ಕವೆಂಕಟು, ಆರ್.ಸೋಮಣ್ಣ, ಕೆ.ಗಿರೀಶ್, ಅರುಣ್, ಕೇಬಲ್ ವೆಂಕಟೇಶ, ದೇವೇಂದ್ರಪ್ಪ, ಎಲ್.ಬಿ.ಜಗದೀಶ್ ಮತ್ತಿತರರು ಇದ್ದರು.

ಗಾಯತ್ರಿ ಸೌಹಾರ್ದ ಬ್ಯಾಂಕ್‌ನ ಅಧ್ಯಕ್ಷರಾಗಿ ಕೆ.ಆರ್.ಸತ್ಯನಾರಾಯಣ್ ಪುನರಾಯ್ಕೆ



ಮೈಸೂರಿನ ವಿದ್ಯಾರಣ್ಯಪುರಂನ ಗಾಯತ್ರಿ ಸೌಹಾರ್ದ ಬ್ಯಾಂಕ್‌ನ ಅಧ್ಯಕ್ಷರಾಗಿ ಪುನರಾಯ್ಕೆಗೊಂಡ ಕೆ.ಆರ್.ಸತ್ಯನಾರಾಯಣ್, ಉಪಾಧ್ಯಕ್ಷ ಬಿ.ಟಿ.ರಾಮಚಂದ್ರ, ಖಜಾಂಜಿ ಕೆ.ಆರ್.ಮಂಜುನಾಥ್ ಅವರಿಗೆ ಚುನಾವಣಾಧಿಕಾರಿ ರಾಜು ಶುಭ ಹಾರೈಸಿದರು. ಈ ವೇಳೆ ನಿರ್ದೇಶಕರಾದ ಎಚ್.ವಿ.ರಾಜೀವ್, ವೆಂಕಟೇಶ್, ಎಚ್ಎಸ್.ಶ್ರೀಕಂಠ ಶರ್ಮ, ರೇಣುಕಾ ವಿಶ್ವನಾಥ್, ಅನುಸೂಯ ಚಂದ್ರಶೇಖರ್, ಉದಯ್‌ಕುಮಾರ್, ಶಿವಕುಮಾರ್, ತೇಜರಾಜ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಸಿದ್ದಪ್ಪಾಜಿ ಕಂಡಾಯ ಮಹೋತ್ಸವ



ಮೈಸೂರಿನ ಜೆಪಿನಗರ ಹೊಸೂರು ಗ್ರಾಮದಲ್ಲಿ ಶ್ರೀ ಸಿದ್ದಪ್ಪಾಜಿ ಕಂಡಾಯ ಮಹೋತ್ಸವದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿ, ಆಶೀರ್ವಾದ ಪಡೆದರು. ಈ ವೇಳೆ ಮುಖಂಡರಾದ ಶಂಕರ್, ಮಹದೇವಶೆಟ್ಟಿ, ರಂಗಸ್ವಾಮಿ, ಶಿವಣ್ಣ, ಮಹದೇವು, ಸೋಮಣ್ಣ, ಜಗದೀಶ್, ಮಂಜು, ರಘು, ಮಲ್ಲೇಶ್, ಮಹೇಂದ್ರಗೌಡ, ಗ್ರಾಮಸ್ಥರು ಉಪಸ್ಥಿತರಿದ್ದರು.



ಪ್ರಶಸ್ತಿ ಪ್ರದಾನ...

ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾವ್ಯೋತ್ಸವದಲ್ಲಿ ಜಾನಪದ ಸಾಹಿತಿ, ಜಾನಪದ ಗಾಯಕ ದುಗ್ಗಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಡಾ.ಬಿ.ಶಂಕರ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಪ್ರದಾನ ಮಾಡಿದರು.

ಭಾರತೀಯ ಸಂತರ ದರ್ಶನ ಸಂಗೀತ ನೃತ್ಯ ಮಹೋತ್ಸವ



ಭಾರತೀಯ ಸಂತರ ದರ್ಶನ ಸಂಗೀತ ನೃತ್ಯ ಮಹೋತ್ಸವದ ತಂಡ.

ಮೈಸೂರು, ಫೆ. 23– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ 69ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದಲ್ಲಿ ಭಾರತೀಯ ಸಂತರ ದರ್ಶನ ಸಂಗೀತ ನೃತ್ಯ ಮಹೋತ್ಸವ ಹಮ್ಮಿಕೊಳ್ಳಲಾಗಿತ್ತು.

ಕುಮಾರಿಯರಾದ ಚೈತ್ರ ಮತ್ತು ಪ್ರೇರಣ ಇವರ ಸುಶ್ರಾವ್ಯ ಕಂಠ ಸಿರಿಯಿಂದ ಪುರಂದರದಾಸರ ದೇವರನಾಮದೊಂದಿಗೆ ಪ್ರಾರ್ಥನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ನೃತ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರುವ ಹೆಸರಾಂತ ನೃತ್ಯ ಗುರುಗಳಾದ "ಪ್ರೊಫೆಸರ್ ಸಿಕ್ಕಿಲ್ ವಸಂತ ಕುಮಾರಿ" ಆರ್ಟಿಸ್ಟಿಕ್ ಡೈರೆಕ್ಟರ್, ಬಾಲ ನಾಟ್ಯ ಮಂಜರಿ ಟ್ರಸ್ಟ್, ಚೆನ್ನೈ ಅವರಿಗೆ ಕಲೆಮನೆ ಕಲಾಶ್ರೀ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ಶ್ರೀಮತಿ ಗುರು ಸಂಜಿ ಪಿರಂತಂಪನ್ ಆರ್ಟಿಸ್ಟಿಕ್ ಡೈರೆಕ್ಟರ್, ನಾಟ್ಯಕಲಾ ಮಂಜರಿ, ಟೊರೆಂಟೊ, ಕೆನಡಾ ಅವರಿಗೆ ಕಲೆಮನೆ ಕಲಾಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ವಿ.ರಂಗನಾಥ್, ಶ್ರೀಮತಿ ನಂದಿನಿ, ಡಾ. ಜಮುನಾ ರಾಣಿ ವಿ.ಮಿರ್ಲೆ, ಸೀತಾ ರಾಮ್, ಆರ್ ಜಿ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ನಾಲ್ವಡಿ ಸ್ಮರಣಾರ್ಥ ಬೃಹತ್ ಉದ್ಯೋಗ ಮೇಳ

ನೂರಾರು ಅಭ್ಯರ್ಥಿಗಳಿಗೆ ಉದ್ಯೋಗ ಭಾಗ್ಯ

ಮೈಸೂರು,ಫೆ23(ಎಂಕೆ)–ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣಾರ್ಥ ಕರ್ನಾಟಕ ರಾಜ್ಯ ಭೀಮ್ ಸೇನೆ ವತಿಯಿಂದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಸಹಯೋಗದೊಂದಿಗೆ ಸೋಮವಾರ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿತ್ತು.

ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ 25 ವಿವಿಧ ಕಂಪನಿಯ ಸ್ಟಾಲ್‌ಗಳಲ್ಲಿ 2000ಕ್ಕೂ ಹೆಚ್ಚು ಪದವಿ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳ ಸಂದರ್ಶನ ನಡೆಸಲಾಯಿತು. ಆಯ್ಕೆಯಾದ ನೂರಾರು ವಿದ್ಯಾರ್ಥಿಗಳಿಗೆ ಶೀಘ್ರದಲ್ಲಿಯೇ ನೇಮಕಾತಿ ಪತ್ರ ನೀಡಲು ನಿರ್ಧರಿಸಲಾಯಿತು.

ಇದಕ್ಕೂ ಮುನ್ನ ಉದ್ಯೋಗ ಮೇಳ ಉದ್ಘಾಟಿಸಿದ ಸಂಸದ ಯದುವೀರ್ ಒಡೆಯರ್ ಮಾತನಾಡಿ, ಸಮಸ್ತ ಭಾರತೀಯರು ಒಂದೇ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಅವರು ಕೊಟ್ಟ ಸಂವಿಧಾನವೇ ಮುಖ್ಯ ಕಾರಣ. ಈ ನಿಟ್ಟಿನಲ್ಲಿ ನಾವೆಲ್ಲರೂ ಅವರಿಗೆ ಚಿರಋಣಿಯಾಗಿರಬೇಕು. ನಾವೆಲ್ಲರೂ ಡಾ.ಬಿ.ಆರ್.ಅಂಬೇಡ್ಕರ್ ಅವರು ಕಂಡಿದ್ದ ಕನಸನ್ನು ನನಸು ಮಾಡಲು ದುಡಿಯಬೇಕಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತೆಗೆದುಕೊಂಡಿದ್ದ ಕ್ರಾಂತಿಕಾರಿ ತೀರ್ಮಾನಗಳ ಬಗ್ಗೆ ಮೈಸೂರಿನ ನಾಗರಿಕರಿಗೆ ತಿಳಿದಿದೆ. ಮೈಸೂರು ಎಂದಿಗೂ ಪ್ರಗತಿಪರವಾಗಿದೆ. ಆದರೆ ಹಿಂದೆ ಇದ್ದ ಇತಿಹಾಸ, ಪರಂಪರೆ ಮುಂದುವರೆಯಬೇಕಿದೆ. ಹಿಂದೆ ಮಹಾರಾಜರು ಧರ್ಮಕ್ಕೆ ತಕ್ಕಂತೆ ಸಮಾನವಾದ ಸಮಾಜವನ್ನು ಸೃಷ್ಟಿ ಮಾಡಿದ್ದರು. ಆ ಸಮಾಜದ ವಾರಸುದಾರರು ನಾವು. ಅವರ ಆಶಯದಂತೆ ಮುಂದುವರೆಯಬೇಕಿದೆ ಎಂದು ತಿಳಿಸಿದರು.



ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣಾರ್ಥ ನಡೆದ ಬೃಹತ್ ಉದ್ಯೋಗ ಮೇಳವನ್ನು ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಿದರು.

ಉದ್ಯೋಗ ಸೃಷ್ಟಿಯಾಗುತ್ತಿಲ್ಲ: ಮಾಜಿ ಮಹಾಪೌರ ಪುರುಷೋತ್ತಮ್ ಮಾತನಾಡಿ, ಉದ್ಯೋಗ ಪಡೆಯುವುದು ಪ್ರತಿಯೊಬ್ಬರ ಕನಸಾಗಿದೆ. ಮೊದಲು ಎಸ್‌ಎಸ್‌ಎಲ್‌ಸಿ, ಪಿಯುಸಿ ಮಾಡಿದವರಿಗೆಲ್ಲ ಉದ್ಯೋಗ ಸಿಗುತ್ತಿತ್ತು. ಆದರೆ, ಇಂದು ಡಿಗ್ರಿ, ಮಾಸ್ಟರ್ ಡಿಗ್ರಿ ಮಾಡಿದವರು ಹೋಟೆಲ್‌ಗಳಲ್ಲಿ, ಬೇರೆ ಬೇರೆ ಸಣ್ಣ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣ ಸಾಕ್ಷರತೆ ಶೇ.80ರಷ್ಟಿದೆ. ಆದರೆ, ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಈ ನಿಟ್ಟಿನಲ್ಲಿ ಇಂತಹ ಉದ್ಯೋಗ ಮೇಳಗಳ ಅವಶ್ಯಕತೆ ಇದೆ ಎಂದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಕರ್ನಾಟಕ ರಾಜ್ಯ ಭೀಮ್ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್.ಸರ್ವೇಶ್, ಮಹಿಳಾ ರಾಜ್ಯಾಧ್ಯಕ್ಷೆ ಪದ್ಮಾವತಿ, ಅಲ್ಪ ಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ನಯಾಜ್ ಪಾಷಾ, ಉಪಾಧ್ಯಕ್ಷ ಅಜ್ಮಲ್, ರಾಜ್ಯ ಪದಾಧಿಕಾರಿಗಳಾದ ಮಲ್ಲೇಶ್, ಸಿದ್ದರಾಜ್, ಮಾದೇಶ್, ರವಿಚಂದ್ರ, ನಾಗರಾಜು, ಜಿಲ್ಲಾಧ್ಯಕ್ಷ ರಾಜು ಮತ್ತಿತರರು ಉಪಸ್ಥಿತರಿದ್ದರು.

ದೇವಯ್ಯನಹುಂಡಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ...



ಕೆಆರ್ ಕ್ಷೇತ್ರದ ವಾರ್ಡ್ ನಂ.65ರ ದೇವಯ್ಯನಹುಂಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕಮ್ಯುನಿಟಿ ಹಾಲ್, ಮಾರಮ್ಮ ದೇವಸ್ಥಾನದ ರಸ್ತೆಗೆ ಡಾಂಬರ್ ಅಭಿವೃದ್ಧಿ ಕಾಮಗಾರಿ ಒಳಗೊಂಡಂತೆ ಡೆಕ್‌ಲೈನ್ ಪಾದಚಾರಿ ಮಾರ್ಗ, ಸಿಸಿ ಚರಂಡಿ ನಿರ್ಮಿಸಿ, ಸ್ಲಾಬ್ ಅಳವಡಿಸುವ ಸುಮಾರು 82 ಲಕ್ಷ ರೂ. ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯೆ ಗೀತಾ ಯೋಗಾನಂದ, ಬಂಧಿ ನಿಂಗೇಗೌಡ, ದೇವಯ್ಯನಹುಂಡಿಯ ಶಿವರಾಜ್, ನಾಗರಾಜ್, ಶಿವಣ್ಣ, ಎಳನೀರು ಮಹದೇವು, ಚಂದ್ರು, ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ವಾರ್ಡ್ ಅಧ್ಯಕ್ಷ ಸತೀಶ್, ಬಿಜೆಪಿ ಮುಖಂಡರಾದ ಗಿರೀಶ್, ಗಿರಿಗೌಡ, ಟ್ರಾವಲ್ಸ್ ಸತೀಶ್ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಜನಾಂಗದವರಿಗೆ ಗುರುತಿನ ಚೀಟಿಗೆ ಅರ್ಜಿ ಆಹ್ವಾನ

ಮೈಸೂರು, ಫೆ.23(ಬಿಎಲ್‌ಯು)– ಮೈಸೂರಿನ ಕೆ.ಟಿ.ರಸ್ತೆಯ ಶ್ರೀ ಕಾಳಿಕಾಂಬ ಕಮಠೇಶ್ವರ ಸ್ವಾಮಿ ದೇವಸ್ಥಾನದ ಸದಸ್ಯತ್ವದ ಗುರುತಿನ ಚೀಟಿಗಾಗಿ ವಿಶ್ವಕರ್ಮ ಜನಾಂಗದವರಿಗೆ ಅವಕಾಶ ಕಲ್ಪಿಸಲಾಗಿದೆ. ದೇವಸ್ಥಾನದ ಕಚೇರಿಯಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30 ಹಾಗೂ ಸಂಜೆ 6.30ರಿಂದ 8.30 ಗಂಟೆವರೆಗೆ ಅರ್ಜಿ ಪಡೆಯಬಹುದು. ಫೆ.25ರಿಂದ ಮಾರ್ಚ್ 7ರವರೆಗೆ ಅರ್ಜಿ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಮಾ.9ರಿಂದ 14ರವರೆಗೆ ದೇವಸ್ಥಾನದ ಕಚೇರಿ ಯಲ್ಲಿ ಸಲ್ಲಿಸಬೇಕು. ಅರ್ಜಿ ಶುಲ್ಕ 100 ರೂ. ಜೊತೆಗೆ ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರದ ಜೆರಾಕ್ಸ್, 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ಜೊತೆಗೆ ನೀಡಬೇಕು. ಗುರುತಿನ ಚೀಟಿ ಪಡೆಯಲಿಚ್ಛಿಸುವವರು ಮೈಸೂರು ನಗರಪಾಲಿಕೆ ವ್ಯಾಪ್ತಿ ನಿವಾಸಿಯಾಗಿರಬೇಕು. ಮಾಹಿತಿಗೆ 94809 65858 ಸಂಪರ್ಕಿಸಬಹುದು.

ಉಚಿತ ಮೂಳೆ ಖನಿಜ ಸಾಂದ್ರತಾ ತಪಾಸಣಾ ಶಿಬಿರ

ಮೈಸೂರು,ಫೆ.23–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನಾಳೆ (ಫೆ.24) ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉಚಿತ ಮೂಳೆ ಖನಿಜ ಸಾಂದ್ರತಾ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಮೂಳೆ ಸವೆತ, ನೋವು ಮುಂತಾದ ಮೂಳೆ ಸಂಬಂಧಿತ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ನುರಿತ ಕೀಲು, ಮೂಳೆ ತಜ್ಞವೈದ್ಯರಿಂದ ಉಚಿತ ಸಮಾಲೋಚನೆಗೆ ಅವಕಾಶವಿರುತ್ತದೆ. ಮಾಹಿತಿಗೆ 0821–2533600, 9986399862 ಸಂಪರ್ಕಿಸಬಹುದು.

ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ಮಡೆ ಉತ್ಸವ

ಮೈಸೂರು, ಫೆ. 23– ನಂಜನಗೂಡು ತಾಲೂಕಿನ ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ಶತಮಾನೋತ್ಸವ ಮಡೆ ಉತ್ಸವ, ಪೂಜಾ ಕೈಂಕರ್ಯಗಳು ಫೆ. 25ರಂದು ನೆರವೇರಲಿದೆ. ಶ್ರೀ ಅಮ್ಮನವರಿಗೆ ಸಂಜೆ 5.30ರ ನಂತರ ಅಭಿಷೇಕ, ಮೈಸೂರಿನ ವಿದ್ವಾನ್ ವಿ.ಪ್ರಕಾಶ್ ಮತ್ತು ವೃಂದದವರಿಂದ ನಾದಸ್ವರ ವಾದನ, ಶ್ರೀ ಅಮ್ಮನವರ ಉತ್ಸವ, ಶತಮಾನೋತ್ಸವದ ಮಡೆ ಸೇವೆ ಆಚರಣೆ ನಡೆಯಲಿದೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಫೆ. 23– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆಬ್ರವರಿ 26ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕಾಯಕ ಸಮಾಜಗಳ ಕಾಯಕಲ್ಪಕ್ಕೆ ರಾಜ್ಯಾದ್ಯಂತ ಉಗ್ರ ಹೋರಾಟ ನಿರ್ಧಾರ

ಇಂತಹ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಘೋಷಣೆ

ಮೈಸೂರು, ಫೆ.23(ಎಂಕೆ)– ಕಾಯಕ ಸಮಾಜಗಳ ಕಾಯಕಲ್ಪಕ್ಕಾಗಿ 'ಸ್ವಾವಲಂಬನೆ' ಮತ್ತು 'ಸ್ವಾಭಿಮಾನ' ಘೋಷವಾಕ್ಯದೊಂದಿಗೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಹೇಳಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್ ಸರ್ಕಾರಗಳು 2008ರಿಂದಲೂ ಪ್ರವರ್ಗ–2ಎ ಮತ್ತು ಪ್ರವರ್ಗ–1 ರಲ್ಲಿನ 197 ಜಾತಿಗಳ ಅಭಿವೃದ್ಧಿಗಾಗಿ ಏನನ್ನೂ ಮಾಡಿಲ್ಲ ಎಂದು ಹರಿಹಾಯ್ದರು.


ರಾಜ್ಯದಲ್ಲಿನ 2.65 ಕೋಟಿ ಶ್ರಮಿಕ ವರ್ಗವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಚುನಾವಣೆ ಸಂದರ್ಭದಲ್ಲಿ ಬಲಿಷ್ಠರ ಮೂಲಕ ಹೆದರಿಸಿ–ಬೆದರಿಸಿ ಮತ ಹಾಕಿಸಿಕೊಳ್ಳುತ್ತಿದ್ದಾರೆಯೇ ಹೊರತು, ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ವಿಧಾನಸಭೆಯಲ್ಲಿ ಅಭಿವೃದ್ಧಿ ಕುರಿತು ಯಾವುದೇ ಚರ್ಚೆಯಾಗಿಲ್ಲ. ಕಳೆದ 30 ವರ್ಷಗಳಿಂದ ಖಾಲಿ ಇರುವ ಸರ್ಕಾರಿ ಹುದ್ದೆಗಳು ಭರ್ತಿಯಾಗಿಲ್ಲ. ಹಾಗಾಗಿ ಬೀದಿಗಿಳಿದು ಹೋರಾಟ ಮಾಡಲು ಮುಂದಾಗಿದ್ದೇವೆ ಎಂದು ಎಚ್ಚರಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾತನಾಡುತ್ತಿರುವುದು.

ಅನುದಾನಕ್ಕೆ ಒತ್ತಾಯ: ಮುಂಬರುವ ರಾಜ್ಯ ಬಜೆಟ್‌ನಲ್ಲಿ ದೇವರಾಜ ಅರಸು ಹಿಂದುಳಿದ ವರ್ಗಗಳ ಇಲಾಖೆಗೆ 10 ಸಾವಿರ ಕೋಟಿ ರೂ., ನಿಗಮ ಮಂಡಳಿಗಳಿಗೆ ತಲಾ 1 ಸಾವಿರ ಕೋಟಿ ರೂ. ಅನುದಾನ ಮೀಸಲಿಡಬೇಕು. ಕುಶಲಕರ್ಮಿಗಳಿಗೆ ಪ್ರತೀ ತಾಲೂಕಿನಲ್ಲಿ ಕೌಶಲ್ಯ ತರಬೇತಿ ಕೇಂದ್ರ ಸ್ಥಾಪನೆ ಮಾಡುವಂತೆ ಒತ್ತಾಯಿಸಿದರಲ್ಲದೆ ಗುತ್ತಿಗೆದಾರರ ಹಾವಳಿಗೆ ನಿಯಂತ್ರಣ ಹಾಗೂ ಪರಿಷ್ಕೃತ ಜಾತಿಗಣತಿ ವರದಿ ಬಿಡುಗಡೆ ಮಾಡುವಂತೆ ಆಗ್ರಹಿಸಿದರು. ರಾಜ್ಯ ಕಾರ್ಯಾಧ್ಯಕ್ಷ ಶಿವಪುತ್ರಪ್ಪ ಇಟಗಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಬೋರಪ್ಪಶೆಟ್ಟಿ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.2.2026 ಮಂಗಳವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್, ಪಾರ್ಕಿನ್ ಸನ್ಸ್, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಿಳಿಮುಟ್ಟು, ಯಾವುದೇ ವಿಧವಾದ ತ್ವಚೆಯ ಸಮಸ್ಯೆ ಬಗ್ಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮಹಾಸಂಸ್ಥಾನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಸುಬ್ಬರಾಯನಕೆರೆ:** ಗುರು ವೈಭವೋತ್ಸವ 2026, ಶ್ರೀ ರಾಘವೇಂದ್ರಸ್ವಾಮಿಗಳವರ 431ನೇ ಜನ್ಮದಿನೋತ್ಸವ, ಶ್ರೀ ರಾಘವೇಂದ್ರ ಅಷ್ಟಾಕ್ಷರ ಹೋಮ (ಮಂತ್ರ, ಯಂತ್ರ ಸರ್ವಸಿದ್ಧಿ, ಗುರುಪ್ರಸಾದ ಸಿದ್ಧಿ), ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರೀ ರಸ್ತೆ, ಬೆಳಗ್ಗೆ 7 ಗಂಟೆಗೆ
- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ಬೆಳಗ್ಗೆ ಧ್ವಜಾರೋಹಣ, ರಾತ್ರಿ ಸಿಂಹವಾಸನಾರೋಹಣ, ಸ್ಥಳ: ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಹಳೇ ಸಂತೇಪೇಟೆ.
- **ಜನ ಸ್ಪಂದನ ಟ್ರಸ್ಟ್ :** ಒಂದು ವಿಚಾರ ಮಂಡನೆ ಕಾರ್ಯಕ್ರಮ, ವಿಷಯ: ಪ್ರಸ್ತುತ ರಾಜಕಾರಣ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಎಷ್ಟು ಮಾರಕ, ಎಷ್ಟು ಪೂರಕ, ಪ್ರಾಸ್ತಾವಿಕ ನುಡಿ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಂಡನೆ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ರಾಜಪ್ಪ ದಳವಾಯಿ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು:** ರಾಜ್ಯಮಟ್ಟದ ಸೈನ್ಸ್ ಫೆಸ್ಟ್, ಸೈನ್ಸ್ ರೆಸ್ಟೋರಮ್, ವಿಸ್ತಾರ–2026, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಅಧ್ಯಕ್ಷತೆ: ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಪ್ರತಿಮಾ, ಮುಖ್ಯ ಅತಿಥಿಗಳು: ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ತನುಜಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಎಸ್. ಲಕ್ಷ್ಮೀಶ ಮತ್ತು ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ವಿಷಯ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉರ್ದು ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಮ್ಮದ್ ನಸ್ರುಲ್ಲಾ ಖಾನ್ ಅವರೊಂದಿಗಿನ ಸಂದರ್ಶನದ ಮೊದಲ ಭಾಗ ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ. ಎನ್. ಗಿರೀಶ್ ಮತ್ತು ಎಂ. ಎಸ್. ಪುಟ್ಟರಾಜು–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ ಬಿ.ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ–ಚರ್ಚೆ–ಸಾಮಾಜಿಕ ಜಾಲತಾಣದ ಅತಿಯಾದ ಬಳಕೆ ಕೌಟುಂಬಿಕ ನೆಮ್ಮದಿಯನ್ನು ಕಲಕುತ್ತಿದೆಯೇ ಭಾಗವಹಿಸಿದ್ದಾರೆ –ಕೆ.ಎಸ್.ಓ.ಯು. ಪತ್ರಿಕೋದ್ಯಮ ವಿಭಾಗದ ಸಹಪ್ರಾಧ್ಯಾಪಕರಾದ ಹೇಮಲತಾ, ಉದ್ಯಮಿ ಶ್ರೀವಿದ್ಯಾ ಕಾಮತ್, ಹಾಗೂ ಲೇಖಕಿ ಕುಸುಮ ಆಯರಹಳ್ಳಿ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ. ಪದ್ಮಾವತಿ – ವೀಣಾವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ ಶ್ರೀ ರಾಘವೇಂದ್ರವಿಜಯ, ಪ್ರಸ್ತುತಿ–ಬೇಲೂರು ಹೆಚ್.ಎ. ವಸಂತಲಕ್ಷ್ಮಿ ,5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಡಾ. ಶಶಿರೇಖಾ ಡಿ., ವಿಷಯ–ಮಹಿಳೆಯರ ಹೃದಯದ ಕಾಯಿಲೆಗಳು ತಪ್ಪು ಕಲ್ಪನೆಗಳು ಮತ್ತು ವಾಸ್ತವಾಂಶ, ಪ್ರಸ್ತುತಿ– ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಅಕ್ವೇರಿಯಂ ಮೀನು ನಿರ್ವಹಣೆ, ವಂಶಾಭಿವೃದ್ಧಿ ಮತ್ತು ಮಾರುಕಟ್ಟೆ ಈ ಕುರಿತು ಮೈಸೂರಿನ ಪ್ಲಾನೆಟ್ ಅರ್ತ್ ಸಂಸ್ಥೆಯ ನಿರ್ದೇಶಕರಾದ ಎಂ.ಪ್ರದೀಪ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್.ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಬಿಸ್ಮಿಲ್ಲಾಖಾನ್ – ಶೆಹನಾಯ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್.ಸಿ. ವಿಜೇಶ್–ಹಾಡುಗಾರಿಕೆ, 10.00 ಆಕಾಶವಾಣಿ ಸಂಗೀತ ಸಮ್ಮೇಳನ–ಶ್ರೀಮತಿ ಅರುಣ್ ಸುಬ್ಬರಾವ್–ಜನಪದ ಸಂಗೀತ, ಪತ್ರಿ ಕುಮಾರಸ್ವಾಮಿ – ಲಘುಸಂಗೀತ

ನರೆಡ್ಕೊ ಮೈಸೂರು ಘಟಕದಿಂದ 'ಗ್ರೇಟರ್ ಮೈಸೂರು–ವೇ ಫಾರ್ವರ್ಡ್' ಕುರಿತು ವಿಚಾರ ಸಂಕಿರಣ

ಗ್ರೇಟರ್ ಮೈಸೂರು ಯೋಜನೆ ಪ್ರಜಾಸತ್ತಾತ್ಮಕ ರೀತಿ ಅನುಷ್ಠಾನಕ್ಕೆ ಮೊದಲು ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಯಬೇಕು

ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಮೈಸೂರು,ಫೆ.23(ಪಿಎಂ)– 'ಗ್ರೇಟರ್ ಮೈಸೂರು' ಯೋಜನೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಅನುಷ್ಠಾನಗೊಳ್ಳಲು ಮೊದಲು ಮೈಸೂರು ಮಹಾನಗರ ಪಾಲಿಕೆಯ ಚುನಾವಣಾ ಪ್ರಕ್ರಿಯೆ ನಡೆಯಬೇಕೆಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ನರೆಡ್ಕೊ ಮೈಸೂರು ಘಟಕದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ಗ್ರೇಟರ್ ಮೈಸೂರು–ವೇ ಫಾರ್ವಡ್' ಕುರಿತು ವಿಚಾರ ಸಂಕಿರಣ ಉದ್ಘಾಟಿಸಿ, ಪ್ಯಾನೆಲ್ ಚರ್ಚೆಯಲ್ಲಿ ಅವರು ಪ್ರತಿಕ್ರಿಯಿಸಿದರು. 'ಗ್ರೇಟರ್ ಮೈಸೂರು' ಅಗತ್ಯವಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಯೋಜನೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಜಾರಿಗೊಳ್ಳಲು ಪಾಲಿಕೆ ಚುನಾವಣೆ ಆಗಬೇಕು ಎಂದರು.

ಪಾಲಿಕೆಯಲ್ಲಿ ಚುನಾಯಿತ ಸದಸ್ಯರು ಇಲ್ಲವಾದ ಕಾರಣ ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಡಳಿತ ನಡೆಯದಾಗಿದೆ. ಹಾಗೆಂದ ಮಾತ್ರಕ್ಕೆ ಆಡಳಿತ ವರ್ಗ ಸಮರ್ಥವಾಗಿ ಜವಾಬ್ದಾರಿ ನಿರ್ವಹಿಸುತ್ತಿಲ್ಲ ಎಂದು ಹೇಳುತ್ತಿಲ್ಲ. ಆದರೆ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಆಡಳಿತ ನಡೆಯುವುದು ಮುಖ್ಯ. ಯಾವುದೇ ವಿಷಯವಾದರೂ ಸಾರ್ವಜನಿಕರು, ಸಂಘ ಸಂಸ್ಥೆಗಳ ಮೂಲಕ ಅಭಿಪ್ರಾಯಗಳು ಪಾಲಿಕೆ ಸದಸ್ಯರಲ್ಲಿಗೆ ತಲುಪುವಂತಾಗಬೇಕು. ಅವರು ಕೌನ್ಸಿಲ್‌ನಲ್ಲಿ ಚರ್ಚೆ ಮಾಡುವಂತೆ ಇರಬೇಕು. ಅದೇ ಪ್ರಜಾಪ್ರಭುತ್ವದ ಸರಿಯಾದ ಕ್ರಮ. ಆದರೆ ಪ್ರಸ್ತುತ ಆ ರೀತಿಯ ವ್ಯವಸ್ಥೆ ಇಲ್ಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಯೊಂದು ವಾರ್ಡ್‌ಗೂ, ಪ್ರತಿಯೊಂದು ಬೀದಿಗೂ ಸಂಸದರು ಮತ್ತು ಶಾಸಕರು ಭೇಟಿ ನೀಡಲು ಸಾಧ್ಯವಿಲ್ಲ. ಹಾಗಾಗಿ ಈಗ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಯುವುದು ಅಗತ್ಯವಾಗಿದೆ. ಆ ಮೂಲಕ ಪರಿಣಾಮಗಳನ್ನು ಅರ್ಥ ಮಾಡಿಕೊಂಡು ಗ್ರೇಟರ್ ಮೈಸೂರು ರೂಪಿಸುವ ಕಾರ್ಯವನ್ನು ಆರಂಭಿಸಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆಯಬೇಕು. ಸಂವಿಧಾನದ 74ನೇ ತಿದ್ದುಪಡಿಯ ಸಂಪೂರ್ಣ ಅನುಷ್ಠಾನಕ್ಕೂ ಚುನಾವಣೆಗಳು ಅವಶ್ಯಕ. ಆದ್ದರಿಂದ 2026ರಲ್ಲಿ ಈ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.



ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಗ್ರೇಟರ್ ಮೈಸೂರು–ವೇ ಫಾರ್ವಡ್' ಕುರಿತು ವಿಚಾರ ಸಂಕಿರಣವನ್ನು ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಿದರು.

ಗ್ರೇಟರ್ ಮೈಸೂರು ಸಂಬಂಧ ಎಲ್ಲಾ ಪಾಲುದಾರರು, ವಿಶೇಷವಾಗಿ ನರೆಡ್ಕೊದಂತಹ ಸಂಸ್ಥೆಗಳು ವಿಸ್ತೃತವಾಗಿ ಚರ್ಚಿಸುವುದು ಅಗತ್ಯ. ಎಲ್ಲರ ಅಭಿಪ್ರಾಯಗಳನ್ನು ಒಟ್ಟುಗೂಡಿಸಲು ಸಾಕಷ್ಟು ಸಮಯ ಆಗಬಹುದು. ಭವಿಷ್ಯದ ಯೋಜನೆ ರೂಪಿಸಲು ನಾವೆಲ್ಲರೂ ವಿಶೇಷವಾಗಿ ಮೈಸೂರಿನವರು ಬಹುಮುಖ್ಯ ಘಟ್ಟದಲ್ಲಿದ್ದೇವೆ. ನನ್ನ ಪೂರ್ವಜರು ಮೈಸೂರು ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅಂದು ಜನರ ಸಹಭಾಗಿತ್ವವೂ ಅದಕ್ಕೆ ಸಹಕಾರಿಯಾಯಿತು. ಆ ಮೂಲಕ ಮೈಸೂರು ವ್ಯವಸ್ಥಿತವಾಗಿ ರೂಪಿತಗೊಂಡಿತು ಎಂದರು.

ಅಭಿವೃದ್ಧಿಗೊಳಿಸುವ ಭರದಲ್ಲಿ ಅವೈಜ್ಞಾನಿಕ ನಡೆಯತ್ತ ಸಾಗುವುದು ಅಭಿವೃದ್ಧಿಯಲ್ಲ. ಅನಾನುಕೂಲದ ಅಭಿವೃದ್ಧಿಗೆ ಆದ್ಯತೆ ನೀಡಬಾರದು. ಉದಾಹರಣೆಗೆ ಮೆಟ್ರೋ ಪೋಲ್ ವೃತ್ತದಿಂದ ಹಿನಕಲ್‌ವರೆಗೆ ಫ್ಲೈಓವರ್ ನಿರ್ಮಿಸಬೇಕೆಂಬ ಪ್ರಸ್ತಾವನೆಯಾಗಿದೆ. ಈ ಯೋಜನೆ ಅನುಷ್ಠಾನಗೊಂಡರೆ ಮರಗಳ ಹನನ ನಡೆಯುವ ಜೊತೆಗೆ ಪಾರಂಪರಿಕ ನಿರ್ಮಾಣಗಳಿಗೆ ಹಾನಿಯಾಗಲಿದೆ. ಇಂತಹ ಸನ್ನಿವೇಶದಲ್ಲಿ ಕೇವಲ ಒಬ್ಬರು ವಿರೋಧ ವ್ಯಕ್ತಪಡಿಸಿದರೆ ಸಾಲದು, ಇಡೀ ಸಮಾಜ ಎದ್ದು ನಿಲ್ಲಬೇಕು. ನೈಜ ಅಭಿವೃದ್ಧಿ ಯಾವುದು ಎಂದು ಅರ್ಥ ಮಾಡಿಕೊಳ್ಳುವ ಅಗತ್ಯತೆ ಇದೆ. ಪರಿಸರ ಮತ್ತು ಪರಂಪರೆಗೆ ಹಾನಿಯಾಗದಂತೆ ಹಾಗೂ ಸಮರ್ಪಕ ಮೂಲ ಸೌಲಭ್ಯ ಕಲ್ಪಿಸುವ ಮಾದರಿಯಲ್ಲಿ ಅಭಿವೃದ್ಧಿ ನಮಗೆ ಅಗತ್ಯವಾಗಿದೆ ಎಂದು ತಿಳಿಸಿದರು.

ಪಿಪಿಟಿ ಮೂಲಕ ವಿಷಯ ಮಂಡಿಸಿದ ಮೈಸೂರಿನ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಉಪನ್ಯಾಸಕ ನೆಲ್ಸನ್ ಜೋ ವಿಜೈ ಪಯಾಸ್, ಭವಿಷ್ಯದ ಮೈಸೂರು ಹೇಗೆ ರೂಪುಗೊಳ್ಳಬೇಕು. ಅದಲ್ಲದೇ ಸಾರ್ವನಿಕರು, ವಿಷಯ ತಜ್ಞರ ಪಾತ್ರವೇನು, ಅದಕ್ಕಾಗಿ ಏನೆಲ್ಲಾ ಸಿದ್ಧತೆ ಮಾಡಿಕೊಳ್ಳಬೇಕಿದೆ, ನಗರ ವಿಸ್ತರಣೆ ವೇಳೆ ಅನುಸರಿಸಬೇಕಾದ ನಿಯಮಗಳೇನು ಎಂಬ ಬಗ್ಗೆ ವಿವರಿಸಿದರು.

ಪ್ರತಿಯೊಂದು ನಗರಕ್ಕೂ ತನ್ನದೇ ಆದ ಮೂಲ ಗುಣಗಳಿರುತ್ತವೆ. ಅದರ ಆಧಾರದಲ್ಲಿಯೇ ಆ ನಗರ ಬೆಳವಣಿಗೆಯಾಗಿರುತ್ತದೆ. ಈ ರೀತಿಯ ಅಂಶಗಳು ನೂರಾರು ವರ್ಷಗಳ ನಂತರವೂ ಮುಂದುವರಿಯುತ್ತವೆ. ಹಾಗಾಗಿ ನಾವು ನಗರ ವಿಸ್ತರಣೆಗೂ ಮುನ್ನ ನಗರವನ್ನು ಅರ್ಥ ಮಾಡಿಕೊಳ್ಳಬೇಕು. ಯೋಜನೆ ಎಂದರೆ ಕೇವಲ ಮ್ಯಾಪ್ ಸಿದ್ಧಪಡಿಸುವುದಲ್ಲ. ವ್ಯವಸ್ಥೆಯ ಆಲೋಚನೆಗಳು, ಸಾಮರ್ಥ್ಯ ತಿಳಿದುಕೊಳ್ಳಬೇಕು. ನಗರವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಬೇಕು. ನಂತರ ಯೋಜನೆ ರೂಪಿಸಲು ಬೇಕಾದ ಕರಾರುವಾಕ್ಕಾದ ಸರಕು ಸಿದ್ಧಪಡಿಸಿಕೊಳ್ಳಬೇಕು ಎಂದು ಹೇಳಿದರು.

ಮಹಾರಾಜರ ಮಾದರಿ ಅನುಸರಿಸಿ: ದೇಶಕ್ಕೆ ಮಾದರಿಯಾಗಿರುವ ಮೈಸೂರನ್ನು ಸಂಸ್ಥಾನದ ಮಹಾರಾಜರು, ನಿರ್ಮಿಸುವಲ್ಲಿ ಅನುಸರಿಸಿದ ಯೋಜನೆ ಮಾದರಿಯಲ್ಲಿಯೇ ಗ್ರೇಟರ್ ಮೈಸೂರು ಅನುಷ್ಠಾನಗೊಳ್ಳಬೇಕೆಂದು ಪರಿಣಿತರು ಅಭಿಪ್ರಾಯಪಟ್ಟರು. ಹಿಂದಿನ ಮಹಾರಾಜರ ದೂರದೃಷ್ಟಿಯ ಫಲವಾಗಿ ನಮಗೆ ಸ್ವಚ್ಛ ಮೈಸೂರು, ವಿಶಾಲ ರಸ್ತೆ, ಕುಡಿಯುವ ನೀರು ಸೇರಿದಂತೆ ಇನ್ನಿತರ ಮೂಲಸೌಕರ್ಯಗಳು ವ್ಯವಸ್ಥಿತವಾಗಿ ದೊರೆಯುತ್ತಿವೆ. ಮುಂದುವರೆದ ನಗರಗಳಲ್ಲಿ ಉಂಟಾಗಿರುವಂತೆ ತೀವ್ರವಾದ ವಾಯು ಮಾಲಿನ್ಯ, ಜಲ ಮಾಲಿನ್ಯವಿಲ್ಲ. ಹಾಗಾಗಿ ಇದೇ ಮಾದರಿಯಲ್ಲಿ ನಗರವನ್ನು ವಿಸ್ತರಣೆ ಮಾಡಬೇಕಿದೆ ಎಂದು ಪ್ರತಿಪಾದಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಉಪ ಆಯುಕ್ತ (ಕಂದಾಯ) ಜಿ.ಎಸ್. ಸೋಮಶೇಖರ್, ನರೆಡ್ಕೊ ಕರ್ನಾಟಕ ಘಟಕದ ಅಧ್ಯಕ್ಷ ಮನೋಜ್ ಲೋಧಾ, ಮೈಸೂರು ಘಟಕದ ಪ್ರೆಸಿಡೆಂಟ್ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಛೇರ್ಮನ್ ವಿ.ಸಿ.ರವಿಕುಮಾರ್, ಉಪಾಧ್ಯಕ್ಷ ಎ.ಪಿ.ನಾಗೇಶ್, ಕಾರ್ಯದರ್ಶಿ ಪಿ.ಎಸ್.ಗಗನ್‌ದೀಪ್, ಖಜಾಂಚಿ ಎಸ್.ಹೆಚ್.ಜಗದೀಶ್, ಜಿಸಿ ಸದಸ್ಯರಾದ ಎನ್.ದಿವ್ಯೇಶ್, ಮ.ವಿ.ರಾಮಪ್ರಸಾದ್ ಮತ್ತಿತರರು ಹಾಜರಿದ್ದರು.

ಡಾ.ಮಹದೇವಪ್ಪ ನಮ್ಮ ರಾಷ್ಟ್ರೀಯ ನಾಯಕರು... ಅವರಿಗೆ ಇಲ್ಲಿಂದಲೇ ನಮಸ್ಕಾರ...!

ಬೆಂಗಳೂರು: ಡಾ.ಹೆಚ್.ಸಿ.ಮಹದೇವಪ್ಪನವರು ನಮ್ಮ ರಾಷ್ಟ್ರೀಯ ನಾಯಕರು. ಅವರಿಗೆ ಇಲ್ಲಿಂದಲೇ ನಮಸ್ಕಾರ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಗಿ ತಿರುಗೇಟು ನೀಡಿದ್ದಾರೆ.



ಅಧಿಕಾರ ಹಸ್ತಾಂತರ ವಿಚಾರ ಮತ್ತೆ ಮುನ್ನೆಲೆಗೆ ಬಂದಿರುವ ಹೊತ್ತಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ದಲಿತ ಸಿಎಂ ದಾಳ ಉರುಳಿಸಿರುವ ಬಗ್ಗೆ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿಕೆಶಿ, ಅವರು(ಮಹದೇವಪ್ಪ) ನಮ್ಮ ರಾಷ್ಟ್ರೀಯ ನಾಯಕರು. ಅವರಿಗೆ ಇಲ್ಲಿಂದಲೇ ನಮಸ್ಕಾರ ಎಂದರು.

ಮೊಬೈಲ್ ಬ್ಯಾನ್ ಚರ್ಚೆಯಲ್ಲಿದೆ: ಇದೇ ವೇಳೆ ಶಾಲೆಗಳಲ್ಲಿ ಮೊಬೈಲ್ ಬ್ಯಾನ್ ಮಾಡುವ ವಿಚಾರ ಚರ್ಚೆಯಲ್ಲಿದೆ. ಪೋಷಕರಿಂದಲೂ ಈ ಬಗ್ಗೆ ಒತ್ತಡವಿದೆ. ಅನೇಕ ದೇಶಗಳಲ್ಲೂ ಈ ಕ್ರಮ ಕೈಗೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗುತ್ತಿದೆ ಎಂದು ಹೇಳಿದರು

ನಮ್ಮ ಶಾಲೆಗಳಲ್ಲೂ ಮೊಬೈಲ್ ಬ್ಯಾನ್ ಮಾಡಿದ್ದೇವೆ. ಯಾವ ರೀತಿ ಮೊಬೈಲ್ ಬಳಕೆ ದುರುಪಯೋಗವಾಗುತ್ತಿದೆ ಎಂದು ಬಹಿರಂಗಗೊಳಿಸಲು ಆಗುವುದಿಲ್ಲ. ಅದಕ್ಕೆ ಈ ವಿಚಾರವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕೆರೆ ನೀರು ಸ್ನಾನ, ಕುಡಿಯಲು ಅಲ್ಲ: ರಾಷ್ಟ್ರೀಯ ನೀರು ಗುಣಮಟ್ಟ ಪ್ರಮಾಣಿತ ಸಂಸ್ಥೆಯು ಬೆಂಗಳೂರು ಕೆರೆಗಳ ನೀರು ಕುಡಿಯಲು ಅರ್ಹವಲ್ಲ ಎಂದು ನೀಡಿರುವ ವರದಿ ಬಗ್ಗೆ ಪ್ರತಿಕ್ರಿಯಿಸಿ, ಬೆಂಗಳೂರಿನ ಕೆರೆ ನೀರನ್ನು ಕುಡಿಯಲು ಹಾಗೂ ಸ್ನಾನಕ್ಕೆ ಬಳಸಿ ಎಂದು ಸರ್ಕಾರ ಹೇಳಿಲ್ಲ. ಈ ಕೆರೆಗಳು ಇರುವುದು ಅಂತರ್ಜಲ ಹೆಚ್ಚಳ ಮಾಡಲು. ತಿಪ್ಪಗೊಂಡನಹಳ್ಳಿ ಕೆರೆ ನೀರನ್ನು ಬಿಡಬ್ಲ್ಯೂಎಸ್‌ಎಸ್‌ಬಿಯಿಂದ ಶುದ್ಧಿ ಮಾಡಲಾಗುತ್ತಿದೆ. ಬೆಂಗಳೂರಿನ ಕೆರೆಗಳ ನೀರು ಕುಡಿಯಲು, ಸ್ನಾನಮಾಡಲು ಅಲ್ಲ ಎಂದರು.

ಬಡವರ ಮೇಲೆ ದೌರ್ಜನ್ಯ: ವಿಬಿ–ಜಿ–ರಾಮ್–ಜಿ ವಿಚಾರವಾಗಿ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟನೆ ಹಾಗೂ ನಿರ್ದೇಶನ ನೀಡಿಲ್ಲ. ಈ ಹಿಂದೆ ಕೂಲಿ ಮಾಡಿದವರಿಗೂ ಹಣ ಬಿಡುಗಡೆ ಮಾಡಿಲ್ಲ. ಕಾಯ್ದೆಯನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಲಾಗಿದೆ. ಕೂಲಿ ಕಾರ್ಮಿಕರು, ಬಡವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಇದರ ವಿರುದ್ಧ ದೊಡ್ಡ ಹೋರಾಟ ನಡೆಸುತ್ತಿದ್ದೇವೆ ಎಂದು ಹೇಳಿದರು.

ದರ್ಶನ್ ಶಸ್ತ್ರಾಸ್ತ್ರ ಪರವಾನಗಿ ಅಮಾನತು ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಜೈಲಿನಲ್ಲಿರುವ ನಟ ದರ್ಶನ್ ಅವರ ಶಸ್ತ್ರಾಸ್ತ್ರ ಪರವಾನಗಿ ಅಮಾನತು ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಈ ಸಂಬಂಧ ದರ್ಶನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರ ಮತ್ತು ಆಡಳಿತ ವಿಭಾಗದ ಡಿಸಿಪಿ ಅವರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿದೆ.

ದರ್ಶನ್ 2008ರಿಂದ ಶಸ್ತ್ರಾಸ್ತ್ರ ಹೊಂದಲು ಪರವಾನಿಗೆ ಪಡೆದುಕೊಂಡಿದ್ದರು. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದ ಸಂದರ್ಭದಲ್ಲಿ, ಶಸ್ತ್ರಾಸ್ತ್ರ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂಬ ಕಾರಣಕ್ಕಾಗಿ 2025ರ ಜನವರಿ 20ರಂದು ಪರವಾನಗಿ ಅಮಾನತುಪಡಿಸಿ ಆದೇಶಿಸಲಾಗಿತ್ತು.

ಪಡುವಾರಹಳ್ಳಿ ಜೋಡಿ ಮಾರಮ್ಮನಿಗೆ 'ಬಾಯಿಬೀಗ ಸೇವೆ'; ಸಾವಿರಾರು ಭಕ್ತರಿಂದ ಭಕ್ತಿ ಸಮರ್ಪಣೆ



ಶ್ರೀ ಜೋಡಿ ಮಾರಮ್ಮ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿಂದು ಭಕ್ತಾದಿಗಳು 'ಬಾಯಿಬೀಗ ಹಾಕಿಕೊಂಡು ಹರಕೆ' ತೀರಿಸುವ ಧಾರ್ಮಿಕ ಕಾರ್ಯಕ್ರಮ ಭಕ್ತಿ–ಭಾವದಿಂದ ಸೋಮವಾರ ನೆರವೇರಿತು.

ಮೈಸೂರು, ಫೆ.23(ಎಸ್‌ಪಿಎನ್)– ಮೈಸೂರಿನ ವಿನಾಯಕ ನಗರ (ಪಡುವಾರಹಳ್ಳಿ) ಶ್ರೀ ಜೋಡಿ ಮಾರಮ್ಮ ದೇವಸ್ಥಾನದ ಜಾತ್ರಾ ಮಹೋತ್ಸವದ ನಾಲ್ಕನೆ ದಿನವಾದ ಇಂದು ಭಕ್ತಾದಿಗಳು 'ಬಾಯಿಬೀಗ ಹಾಕಿಕೊಂಡು ಹರಕೆ' ತೀರಿಸುವ ಧಾರ್ಮಿಕ ಕಾರ್ಯಕ್ರಮ ಭಕ್ತಿ–ಭಾವದಿಂದ ಸೋಮವಾರ ನೆರವೇರಿತು.

ದೇವಸ್ಥಾನದ ಅರ್ಚಕರಾದ ಶೇಷಾದ್ರಿ ಮತ್ತು ರೇವಣ್ಣ ನೇತೃತ್ವದಲ್ಲಿ ನಡೆದ ಬಾಯಿಬೀಗ ಧಾರ್ಮಿಕ ಮೆರವಣಿಗೆಯಲ್ಲಿ ವ್ರತ ಕೈಗೊಂಡಿದ್ದ ಒಂದೂವರೆ ಸಾವಿರಕ್ಕೂ ಅಧಿಕ ಭಕ್ತರು ಜೋಡಿ ಮಾರಮ್ಮಗೆ ಹರಕೆ ತೀರಿಸಿದರು.

ಮಧ್ಯಾಹ್ನ 3.30ಕ್ಕೆ ಆರಂಭವಾದ ಬಾಯಿಬೀಗ ಹಾಕಿದ ಭಕ್ತಾದಿಗಳು ಪಡುವಾರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಾಗಿ, ಜೋಡಿ ಮಾರಮ್ಮನ ಕೃಪೆಗೆ ಪಾತ್ರರಾದರು. ಈ ವೇಳೆ ವಿನಾಯಕನಗರ (ಪಡುವಾರಹಳ್ಳಿ) ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ, ಉಪಾಧ್ಯಕ್ಷರಾದ ರಾಮಣ್ಣ, ಸೋಮಣ್ಣ, ಕಾರ್ಯದರ್ಶಿ ಭೈರಪ್ಪ, ಜಂಟಿ ಕಾರ್ಯದರ್ಶಿ ಉಗ್ರಯ್ಯ, ಎನ್.ರಾಮಸ್ವಾಮಿ, ಖಜಾಂಚಿ ಸೋಮಣ್ಣ, ಸಂಚಾಲಕ ಲೋಕೇಶ್ವರ್, ಗೌರವಾಧ್ಯಕ್ಷ ವೆಂಕಟಗಿರಿಗೌಡ ಸೇರಿದಂತೆ ಪದಾಧಿಕಾರಿಗಳು, 41 ಸದಸ್ಯರು ಶ್ರೀ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಮಾರಮ್ಮನ ಕೃಪೆಗೆ ಪಾತ್ರರಾದರು.

ಅಂತೆಯೇ ಗ್ರಾಮದೇವತೆ ಜೋಡಿ ಮಾರಮ್ಮನ ಜಾತ್ರಾ ಮಹೋತ್ಸವದ ಪ್ರಯುಕ್ತ ದೇವಸ್ಥಾನ ಆವರಣದ ಬಯಲು ರಂಗ ಮಂದಿರದಲ್ಲಿ ಶ್ರೀ ಜೋಡಿಮಾರಮ್ಮ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕ ಪ್ರದರ್ಶನಗೊಂಡಿತು.

ಪಡುವಾರಹಳ್ಳಿ ಗ್ರಾಮಸ್ಥರು ಮಾತ್ರವಲ್ಲದೆ, ಹೊರಗಡೆಯಿಂದ ಅಧಿಕ ಸಂಖ್ಯೆಯ ಭಕ್ತರು ಬಾರೀ ಸಂಖ್ಯೆಯಲ್ಲಿ ನೆರೆದಿದ್ದು, ಹಬ್ಬದ ವಾತಾವರಣ ಕಳೆಕಟ್ಟಿದೆ.

ಮಾರ್ಚ್ 2ಕ್ಕೆ ತಂಬಾಕು ಮಂಡಳಿ ಸಭೆ

ಬೆಲೆ ಇಳಿಕೆ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚೆ; ಸಂಸದ ಯದುವೀರ್ ಮಾಹಿತಿ

ಮೈಸೂರು, ಫೆ.23– ತಂಬಾಕು ಬೆಳೆಗಾರರ ಸಮಸ್ಯೆ ಪರಿಹರಿಸುವ ಸಂಬಂಧ ತಂಬಾಕು ಮಂಡಳಿ ಮಾರ್ಚ್ 2ರಂದು ಸಭೆ ಆಯೋಜಿಸಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ತಮ್ಮ ನಿರಂತರ ಒತ್ತಾಯದ ಮೇರೆಗೆ ಈ ಸಭೆ ಕರೆಯಲಾಗಿದ್ದು, ತಂಬಾಕು ಬೆಳೆಗಾರರು ಎದುರಿಸುತ್ತಿರುವ ಪ್ರಸ್ತುತ ಬೆಲೆ ಬಿಕ್ಕಟ್ಟು ಸೇರಿದಂತೆ ತಂಬಾಕು ವಲಯದಲ್ಲಿನ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು. ತಂಬಾಕು ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಐಟಿಸಿ ಮುಖ್ಯಸ್ಥರು ಮತ್ತು ಪ್ರಮುಖ ತಂಬಾಕು ಖರೀದಿ ಕಂಪನಿಗಳ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಪ್ರಸ್ತುತ ಮಾರುಕಟ್ಟೆ ಪರಿಸ್ಥಿತಿ ಸುಧಾರಣೆ, ರೈತರ ಕಳವಳ ನಿವಾರಣೆ, ತಂಬಾಕು ವ್ಯಾಪಾರದಲ್ಲಿನ ಸ್ಥಿರತೆ ಹಾಗೂ ನ್ಯಾಯಯುತ ಬೆಲೆ ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅಂದಿನ ಸಭೆಯಲ್ಲಿ ಸಮಾಲೋಚನೆ ನಡೆಸುವ ನಿರೀಕ್ಷೆ ಇದೆ. ಒಟ್ಟಾರೆ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ನಾವು ಬದ್ಧರಾಗಿದ್ದೇವೆ ಎಂದು ಸಂಸದ ಯದುವೀರ್ ಸ್ಪಷ್ಟಪಡಿಸಿದ್ದಾರೆ.

ನನ್ನ ಅತ್ತೆ ಮಗಳ ಸಹವಾಸ ಬೇಡ ಎಂದವನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆ ಮುಂದಾದ ಮೂವರು ಅಂದರ್

ಕ್ರೈಂ ಬಾಕ್ಸ್

ಮೈಸೂರು,ಫೆ.23(ಪಿಎಂ)– ಪ್ರೀತಿ–ಪ್ರೇಮ ವಿಷಯಕ್ಕೆ ಸಂಬಂಧಿಸಿದಂತೆ ಯುವಕನ ಮೇಲೆ ಹಲ್ಲೆ ನಡೆಸಲು ಯತ್ನಿಸಿದ್ದ ಮೂವರು ಯುವಕರನ್ನು ಆಲನಹಳ್ಳಿ ಪೊಲೀಸ್ ಠಾಣೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ.

ಕ್ಯಾತಮಾರನಹಳ್ಳಿಯ ವಿನೋದ್, ರಾಕೇಶ್ ಹಾಗೂ ಮತ್ತೊಬ್ಬ ಯುವಕ ಬಂಧನಕ್ಕೊಳಗಾದವರು. ಈ ಮೂವರು ಲಲಿತಾದ್ರಿಪುರದ ಒಕ್ಕಲಿಗರ ಬೀದಿಯ ಗಗನ್ ಎಂಬ ಯುವಕನ ಮೇಲೆ ಹಲ್ಲೆ ನಡೆಸಲು ಯತ್ನಿಸಿದ್ದ ಸಂಬಂಧ ಪ್ರಕರಣ ದಾಖಲಾಗಿತ್ತು. ಫೆ.19ರಂದು ರಾತ್ರಿ 9.45ರ ವೇಳೆಯಲ್ಲಿ ಈ ಮೂವರು ಆಟೋದಲ್ಲಿ ಮಾರಕಾಸ್ತ್ರಗಳೊಂದಿಗೆ ತಮ್ಮ ಮನೆ ಬಳಿಗೆ ಬಂದು ನನ್ನ ಪುತ್ರ ಗಗನ್ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದ್ದರು ಎಂದು ಗಗನ್ ತಾಯಿ ಸುಧಾ ದೂರು ನೀಡಿದ್ದರು.

ಆಟೋದಲ್ಲಿದ್ದವರನ್ನು ನಾನು ಮತ್ತು ನನ್ನ ಮಗ ಗಗನ್ ನೋಡಿದ್ದು, ಆಗ ಗಗನ್‌ನನ್ನು ಕೇಳಿದಾಗ, ರಾಕೇಶ್ ಎಂಬುವವನು ನನಗೆ ಪರಿಚಯವಿರುತ್ತಾನೆ. ಅವನು ನಿನ್ನ ಅತ್ತೆ ಮಗಳನ್ನು ನಾನು ಲವ್ ಮಾಡುತ್ತೇನೆಂದು ಹೇಳಿದ್ದ. ಅದಕ್ಕೆ ನಾನು ಇದೆಲ್ಲಾ ಬೇಡ ಎಂದು ಹೇಳಿದ್ದೆ ಎಂದು ತಿಳಿಸಿದ ಎಂದು ಸುಧಾ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಬುದ್ಧ, ಬಸವ, ಡಾ.ಅಂಬೇಡ್ಕರ್ ಆದರ್ಶಗಳಿಂದ ಜೀವನ ಸುಂದರವಾಗುತ್ತೆ...

ವಿದ್ಯಾರ್ಥಿಗಳಿಗೆ ಹಿರಿಯ ಜಾನಪದ ವಿದ್ವಾಂಸ ಪ್ರೊ.ಹಿ.ಶಿ.ರಾಮಚಂದ್ರಗೌಡ ಕಿವಿಮಾತು



ರಂಗಭೂಮಿ ಮತ್ತು ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದಲ್ಲಿ ಹಿರಿಯ ಜಾನಪದ ವಿದ್ವಾಂಸ ಪ್ರೊ.ಹಿ.ಶಿ. ರಾಮಚಂದ್ರಗೌಡ, ಅಖಿಲ ಕರ್ನಾಟಕ ಸರ್ಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷರಾದ ಡಾ.ಕಾವೇರಿ ಪ್ರಕಾಶ್, ಮೈಸೂರು ನಾಲ್ವಡಿ ಟ್ರಸ್ಟ್ ಸಂಸ್ಥಾಪಕ ದಿನೇಶ್ ಚಮ್ಮಾಳಿಗೆ, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಉಪಸ್ಥಿತರಿದ್ದರು.

ಮೈಸೂರು, ಫೆ.23(ಎಸ್‌ಪಿಎನ್)– ಕಾಲೇಜು ವಿದ್ಯಾರ್ಥಿಗಳು ಬುದ್ಧ, ಬಸವ ಹಾಗೂ ಡಾ.ಬಿ. ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ನಿಮ್ಮ ಮುಂದಿನ ಜೀವನ ಸುಖಕರವಾಗಿರುತ್ತದೆ ಎಂದು ಹಿರಿಯ ಜಾನಪದ ವಿದ್ವಾಂಸ ಪ್ರೊ.ಹಿ.ಶಿ.ರಾಮಚಂದ್ರಗೌಡ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಬಿ.ವಿ.ಕಾರಂತರ ಚಾವಡಿಯಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ರಂಗಭೂಮಿ ಮತ್ತು ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ನಾನು ಒಕ್ಕಲಿಗ ಜಾತಿಯಲ್ಲಿ ಹುಟ್ಟಿದ್ದೇನೆ. ಅದೊಂದು ಹುಟ್ಟಿನ ಸಂಕೇತ. ಆದರೆ, ಬದುಕು ರೂಪಿಸಿಕೊಳ್ಳಲು ಜಾತಿ ಅನಿವಾರ್ಯವಲ್ಲ ಎಂಬುದನ್ನು ನನ್ನ ಬದುಕಿನುದ್ದಕ್ಕೂ ಪ್ರತಿಪಾದಿಸಿಕೊಂಡು ಬಂದಿದ್ದೇನೆ. ನಾನು ಪ್ರತಿಪಾದಿಸಿದ ತತ್ವವನ್ನೇ ಇಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳಿಗೂ ಹೇಳುತ್ತಿದ್ದೇನೆ. ವೃತ್ತಿ ಜೀವನದಲ್ಲಿ ಕ್ರಿಯಾಶೀಲರನ್ನು ಪ್ರೀತಿಸಿದ್ದೇನೆ. ಪ್ರಜ್ಞಾವಂತರನ್ನು ಅಪ್ಪಿಕೊಂಡಿದ್ದೇನೆ. ನಾನು ಎಂದಿಗೂ ಮತೀಯವಾದಿಗಳನ್ನು ಪ್ರೀತಿಸಿಲ್ಲ. ಅವರನ್ನು ಹತ್ತಿರಕ್ಕೂ ಬಿಟ್ಟುಕೊಂಡಿಲ್ಲ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿದರು.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಧರ್ಮವಿದೆ. ಆದರೆ, ಪ್ರತಿಯೊಬ್ಬರ ಬದುಕಿಗೆ ಧರ್ಮ ಅನಿವಾರ್ಯವಲ್ಲ. ಆದರೆ, ನಾನು ಎಲ್ಲಾ ಧರ್ಮದ ಸ್ವಾಮೀಜಿಗಳ ಅಸ್ತಿತ್ವವನ್ನು ಗೌರವಿಸುತ್ತೇನೆ. ಆದರೆ, ಅದನ್ನೇ ಬದುಕಿನ ಭಾಗವಾಗಿಸಿಕೊಂಡಿಲ್ಲ. ಅಂತೆಯೇ ಮೈಸೂರು ವಿವಿ ಪ್ರಾಧ್ಯಾಪಕನಾಗಿದ್ದಾಗ ವಿದ್ಯಾರ್ಥಿಗಳನ್ನು, ದಲಿತ ಮತ್ತು ರೈತ ಚಳುವಳಿಗಳಲ್ಲಿ ಭಾಗವಹಿಸುವಂತೆ ಸಲಹೆ ನೀಡುತ್ತಿದ್ದೆ. ವಿದ್ಯಾರ್ಥಿಗಳು ಚಳವಳಿ, ಚಿಂತನಾ ಸಭೆ, ರಂಗಭೂಮಿ ಚಟುವಟಿಕೆಗಳಲ್ಲಿ ಭಾಗವಹಿಸಿದರೆ, ನಿಮ್ಮ ವ್ಯಕ್ತಿತ್ವ ಕ್ರಿಯಾಶೀಲವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಕಾಲೇಜು ವಿದ್ಯಾರ್ಥಿಗಳು ಉತ್ತಮ ನಡವಳಿಕೆ ರೂಪಿಸಿಕೊಳ್ಳಬೇಕಾದರೆ, ಕಲೆ, ಸಾಹಿತ್ಯ, ನಾಟಕ ಹಾಗೂ ಜಾನಪದ ಕಲೆಗಳ ಕಲಿಕೆಗೆ ಮೊದಲ ಆದ್ಯತೆ ನೀಡಬೇಕು. ನಾನು, ಚಿಕ್ಕವನಾಗಿದ್ದಾಗ ನನ್ನ ಅಮ್ಮ ಹೇಳಿಕೊಟ್ಟ ಜನಪದ ಗೀತೆ, ನೃತ್ಯಗಳನ್ನು ಕಲಿತುಕೊಂಡೆ, ತದನಂತರ ಉನ್ನತ ವ್ಯಾಸಂಗದಲ್ಲೂ ಜಾನಪದ ವಿಷಯದಲ್ಲಿ ತೊಡಗಿಸಿಕೊಂಡು ಜೀವನ ಕಟ್ಟಿಕೊಂಡಿದ್ದೇನೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಅಖಿಲ ಕರ್ನಾಟಕ ಸರ್ಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷರಾದ ಡಾ.ಕಾವೇರಿ ಪ್ರಕಾಶ್, ಮೈಸೂರು ನಾಲ್ವಡಿ ಟ್ರಸ್ಟ್ ಸಂಸ್ಥಾಪಕ ದಿನೇಶ್ ಚಮ್ಮಾಳಿಗೆ, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಉಪಸ್ಥಿತರಿದ್ದರು.

ಟಿ20 ವಿಶ್ವಕಪ್: ಜಿಂಬಾಬ್ವೆ ವಿರುದ್ಧ ವೆಸ್ಟ್ ಇಂಡೀಸ್ ಭರ್ಜರಿ ಗೆಲುವು

ಮುಂಬೈ, ಫೆ.23– ಶಿಮ್ರಾನ್ ಹೆಟ್ಮೆಯರ್, ರೋವ್ಮನ್ ಪೋವೆಲ್ ಅವರುಗಳ ಬಿರುಸಿನ ಅರ್ಧಶತಕದ ನೆರವಿನಿಂದ ಜಿಂಬಾಬ್ವೆ ವಿರುದ್ಧ ವೆಸ್ಟ್ ಇಂಡೀಸ್ 107 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಬೃಹತ್ ಗೆಲುವಿನೊಂದಿಗೆ ವೆಸ್ಟ್ ಇಂಡೀಸ್ ಸೂಪರ್ 8 ಗ್ರೂಪ್ 1ರ ಅಂಕಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ಆರಂಭದಲ್ಲೇ 9 ರನ್ ಗಳಿಸಿದ್ದ ಬ್ರೆಂಡನ್ ಕಿಂಗ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಇವರ ಹಿಂದೆಯೇ ಶೈ ಹೋಪ್ 14 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಶಿಮ್ರಾನ್ ಹೆಟ್ಮೇಯರ್ ಹಾಗೂ ರೋವ್ಮನ್ ಪೊವೆಲ್ ಜಿಂಬಾಬ್ವೆ ಬೌಲಿಂಗ್ ದಾಳಿಯನ್ನು ಧೂಳೀಪಟ ಮಾಡಿ 3ನೇ ವಿಕೆಟ್‌ಗೆ 122 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಸಿಕ್ಕ ಜೀವದಾನಗಳನ್ನು ಬಳಸಿಕೊಂಡ ಹೆಟ್ಮೇಯರ್ 34 ಎಸೆತಗಳಲ್ಲಿ ತಲಾ 7 ಸಿಕ್ಸರ್, ಬೌಂಡರಿ ಒಳಗೊಂಡ 85 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ರೋವ್ಮನ್ ಪೋವೆಲ್ 35 ಎಸೆತಗಳಲ್ಲಿ ತಲಾ 4 ಬೌಂಡರಿ, ಸಿಕ್ಸರ್ ಒಳಗೊಂಡ 59 ರನ್ ಗಳಿಸಿ ಔಟಾದರು. ನಂತರ ಬಂದ ಶೆರ್ಫೋನ್ ರುದರ್ಫೋರ್ಡ್ 31, ರೊಮಾರಿಯೋ ಶೆಫರ್ಡ್ 21, ಜೇಸನ್ ಹೋಲ್ಡರ್ 13 ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು 250ರ ಗಡಿ ದಾಟಿಸಿದರು. ಅಂತಿಮವಾಗಿ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 254 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಜಿಂಬಾಬ್ವೆ ಪರ ಬೌಲಿಂಗ್‌ನಲ್ಲಿ ಬ್ಲೆಸ್ಸಿಂಗ್ ಮುಜರಬಾನಿ,



ರಿಚರ್ಡ್ ನಾಗರವ ತಲಾ 2, ಬ್ರಾಡ್ ಇವಾನ್ಸ್, ಗ್ರೇಮ್ ಕ್ರೇಮರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ವೆಸ್ಟ್ ಇಂಡೀಸ್ ನೀಡಿದ 255 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಜಿಂಬಾಬ್ವೆ 17.4 ಓವರ್‌ಗಳಲ್ಲಿ 147ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಡಿಯೋನ್ ಮೈಯರ್ಸ್ 28, ನಾಯಕ ಸಿಕಂದರ್ ರಾಜಾ 27, ಟೋನಿ ಮುನ್ಯೊಂಗ 14, ಬ್ರಾಡ್ ಇವಾನ್ಸ್ 43 ರನ್ ಗಳಿಸಿದರು. ವೆಸ್ಟ್ ಇಂಡೀಸ್ ಪರ ಮಾರಕ ಬೌಲಿಂಗ್ ದಾಳಿ ನಡೆಸಿದ ಗುಡಕೇಶ್ ಮೋಟಿ 4, ಅಕೀಲ್ ಹೊಸೇನ್ 3, ಮ್ಯಾಥ್ಯೂ ಫೋರ್ಡ್ 2, ಜೇಸನ್ ಹೋಲ್ಡರ್ ಒಂದು ವಿಕೆಟ್ ಉರುಳಿಸಿದರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಶಿಮ್ರಾನ್ ಹೆಟ್ಮೆಯರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಮದುವೆ ಆಗಿರೋ ಗಂಡಸರು ಒಂದು ರೀತಿ ಮೊಬೈಲ್ ಇದ್ದಂಗೆ.
ತಿಮ್ಮ : ಹೇಗಪ್ಪಾ?
ಗುಂಡ : ಹೆಂಡ್ತಿ ಮುಂದೆ ಸೈಲೆಂಟ್, ಸಾಲ ಕೊಟ್ಟವರಿಗೆ ನಾಟ್ ರಿಚೇಬಲ್, ಅತ್ತೆ–ಸೊಸೆ ಜಗಳ ಮಾಡುವಾಗ ಬ್ಯಾಟರಿ ಲೋ, ತಿಂಗಳ ಕೊನೆಯಲ್ಲಿ ನೋ ಬ್ಯಾಲೆನ್ಸ್, ಬಾರಿನಲ್ಲಿ ಇದ್ದಾಗ ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ....!!

ಮೈಸೂರು ಮಿತ್ರ
ಮಂಗಳವಾರ, ಫೆಬ್ರವರಿ 24, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮಾತಾಡಿದಂತೆ ಜೀವಿಸಲು ಆಗೋದಿಲ್ಲ. ಬರೆದಿಟ್ಟಂತೆ ಬದುಕಲೂ ಆಗೋದಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಂತೆ ಬದುಕಿದರೆ ಸಾಕು ಅದೇ ಸಂತೃಪ್ತ ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕದ್ದು ತಿಂದ ಹಣ್ಣು, ಪಕ್ಕದ ಮನೆ ಊಟ ಎಂದೂ ರುಚಿ ಹೆಚ್ಚು

ನಿಮ್ಮ ಪತ್ರಗಳು

ಬಸ್ಸಿನಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ ಕಂಡಕ್ಟರ್, ಡ್ರೈವರ್!



ಮಾನ್ಯರೇ,

ಸರ್ಕಾರಿ ಕೆಲಸ ಎಂದಾಕ್ಷಣ ಕೆಲವರಲ್ಲಿ ದರ್ಪ, ದೌಲತ್ತು ಎದ್ದು ಕಾಣುತ್ತದೆ. ಅಲ್ಲದೆ ತಮ್ಮ ಬಳಿಗೆ ಬರುವ ಸಾರ್ವಜನಿಕರನ್ನು ಅಸಡ್ಡೆಯಿಂದ ಕಾಣುವ ಈ ಕಾಲದಲ್ಲಿ ಕೆಲವರು ಮಾತ್ರ ಸರ್ಕಾರಿ ಕೆಲಸ ದೇವರ ಕೆಲಸ ಎಂದುಕೊಂಡು ತಮ್ಮ ಬಳಿಗೆ ಬರುವ ಸಾರ್ವಜನಿಕರನ್ನು ಗೌರವದಿಂದ ಕಾಣುತ್ತಾರೆ. ಇಂತಹವರು ಇಂದು ಸಿಗುವುದು ಅಪರೂಪದಲ್ಲಿ ಅಪರೂಪ. ಇಂತಹವರ ಸಾಲಿಗೆ ಕರ್ನಾಟಕ ಸಾರಿಗೆ ಬಸ್ (ನಂ.ಕೆ.ಎ.57 ಎಫ್3753)ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಡಕ್ಟರ್ ಲಕ್ಷ್ಮೀಶ ಹಾಗೂ ಡ್ರೈವರ್ ಹೇಮಂತ್ ಸೇರಿದ್ದಾರೆ.

ಇವರು ಕಾರ್ಯನಿರ್ವಹಿಸುವ ಸಾರಿಗೆ ಬಸ್ ಟಿ.ನರಸೀಪುರದಿಂದ ಬನ್ನೂರು ಮಾರ್ಗವಾಗಿ ಮಂಡ್ಯ ತಲುಪಿ, ಮತ್ತೆ ಅದೇ ಮಾರ್ಗವಾಗಿ ಟಿ.ನರಸೀಪುರಕ್ಕೆ ಬರುತ್ತದೆ. ಈಗ ಬೇಸಿಗೆ ಕಾಲ ಆರಂಭವಾಗಿದ್ದು, ತುಂಬಾ ಬಿಸಿಲಿನ ತಾಪದಿಂದ ಪ್ರಯಾಣಿಕರು ದಣಿಯುತ್ತಿರುವುದನ್ನು ಕಂಡು ಈ ಬಸ್‌ನ ಕಂಡಕ್ಟರ್ ಹಾಗೂ ಡ್ರೈವರ್ ತಮ್ಮ ಬಸ್‌ನ ಒಳಗಡೆ ನೀರಿನ ಕ್ಯಾನ್ ಅನ್ನು ಇಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವರನ್ನು ನಾನು ಈ ಬಗ್ಗೆ ಕೇಳಿದಾಗ, ಸರ್, ದಿನಕ್ಕೆ 2 ರಿಂದ 3 ಕ್ಯಾನ್ ಖರ್ಚಾಗುತ್ತದೆ. ಬಿಸಿಲಿನ ಝಳ ಹೆಚ್ಚಾಗಿರುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗಲೆಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ನಾವು ಪ್ರಯಾಣಿಸುವ ಬಸ್ ನಿಲ್ದಾಣ ಹಾಗೂ ನಿಲುಗಡೆ ಸ್ಥಳಗಳಲ್ಲಿ ಸಿಗುವ ಶುದ್ಧ ನೀರನ್ನು ಹಿಡಿದು ಬಸ್‌ನಲ್ಲಿ ಇಡುತ್ತೇವೆ. ಇದರಿಂದ ಜನರ ದಣಿವು ನೀಗುತ್ತೆ ಎಂದು ಖುಷಿಯಿಂದಲೇ ತಿಳಿಸಿದರು. ಮಾನವೀಯತೆ ಮರೆಯಾಗುತ್ತಿರುವ ಈ ಕಾಲದಲ್ಲಿ ಸಾರಿಗೆ ಬಸ್ ಸಿಬ್ಬಂದಿಗೆ ಮಾದರಿಯಾದ ಇವರ ಸಮಾಜಮುಖಿ ಕಾರ್ಯವನ್ನು ಇತರರು ಅನುಸರಿಸಲಿ ಎಂಬುದು ನಮ್ಮ ಆಶಯ.

–ಎಂ.ಮಹೇಶ್ ನಿಲಸೋಗೆ, ಗಿರಿದರ್ಶಿನಿ ಬಡಾವಣೆ, ಮೈಸೂರು.

ಪಾದಚಾರಿಗಳಿಗೆ ಅನುಕೂಲ ಮಾಡಿಕೊಡಿ

ಮಾನ್ಯರೆ,



ಮೈಸೂರಿನ ಒಂಟಿಕೊಪ್ಪಲು ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಬಳಿ ಕೆಆರ್‌ಎಸ್ ರಸ್ತೆ ಹಾಗೂ ವಿವಿ ಮೊಹಲ್ಲಾ ಟೆಂಪಲ್ ರಸ್ತೆ ಫುಟ್‌ಪಾತ್‌ನಲ್ಲಿ ಪಾದಚಾರಿಗಳ ಓಡಾಟಕ್ಕೆ ಅವಕಾಶವೇ ಇಲ್ಲದಂತಾಗಿದೆ. ದೇವಾಲಯದ ಬಳಿ ಪೂಜಾ ಸಾಮಗ್ರಿಗಳನ್ನು ಮಾರುವವರು ನೆರಳಿಗಾಗಿ ಟಾರ್ಪಲ್‌ಗಳನ್ನು ಕಟ್ಟಿಕೊಂಡಿದ್ದು, ಕೆಲವರು ಶಾಮಿಯಾನವನ್ನೇ ಅಳವಡಿಸಿಕೊಂಡಿದ್ದಾರೆ. ಆದರೆ ಇದರಿಂದ ಹೆಚ್ಚು ತೊಂದರೆಯಾಗದಿದ್ದರೂ ಉದ್ದವಾದ ಬೊಂಬುಗಳಿಗೆ ದೊಡ್ಡದಾದ ಹಾರಗಳನ್ನು ನೇತು ಹಾಕುವುದರಿಂದ ಫುಟ್‌ಪಾತ್‌ನಲ್ಲಿ ಪಾದಚಾರಿಗಳಿಗೆ ಓಡಾಡಲು ತೀವ್ರ ಅಡ್ಡಿಯಾಗುತ್ತಿದೆ.

ದೇವಸ್ಥಾನದ ಪಕ್ಕದಲ್ಲೇ ಬಸ್ ನಿಲುಗಡೆ ಸ್ಥಳವಿರುವುದರಿಂದ ಹೆಬ್ಬಾಳು, ಮೇಟಗಳ್ಳಿ, ಕೆಆರ್‌ಎಸ್, ಶ್ರೀರಂಗಪಟ್ಟಣ, ಪಾಂಡವಪುರ ಇನ್ನಿತರ ಊರುಗಳಿಗೆ ಸಂಚರಿಸುವ ಪ್ರಯಾಣಿಕರು ಫುಟ್‌ಪಾತ್‌ನಲ್ಲಿ ಸಾಧ್ಯವಾಗದೆ ರಸ್ತೆಯಲ್ಲೇ ನಡೆದು ಹೋಗುವಂತಾಗಿದೆ. ಬಸ್ ಹಿಡಿಯುವ ದಾವಂತದಲ್ಲಿ ರಸ್ತೆಯಲ್ಲಿ ಓಡುವುದರಿಂದ ಅಪಘಾತವಾಗುವ ಸಾಧ್ಯತೆಯೂ ಇದೆ. ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗದಂತೆ ಹೂವಿನ ಹಾರಗಳನ್ನು ಇಟ್ಟುಕೊಳ್ಳುವಂತೆ ಕೇಳಿದರೆ ಕೆಲ ವ್ಯಾಪಾರಿಗಳು ಸಾರ್ವಜನಿಕರನ್ನೇ ನಿಂದಿಸುತ್ತಾರೆ. ದೇವಸ್ಥಾನದ ಬಳಿ ಪೂಜಾ ಸಾಮಗ್ರಿಗಳನ್ನು ಮಾರಾಟ ಮಾಡುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಆದರೆ ಫುಟ್‌ಪಾತ್‌ನಲ್ಲಿ ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಬೇಕು. ಈ ಬಗ್ಗೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಗಮನಹರಿಸಿ, ವ್ಯಾಪಾರಿಗಳನ್ನು ದೇವಸ್ಥಾನದ ಪಕ್ಕದ ರಸ್ತೆಗೆ ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

– ತೊಂದರೆ ಅನುಭವಿಸಿದ ಪಾದಚಾರಿ, ಮೈಸೂರು

ಟಿಕೆಟ್ ದರ ವಾಪಸ್ ನೀಡುವ ವ್ಯವಸ್ಥೆಯಾಗಲಿ

ಮಾನ್ಯರೆ,


ವಿಶ್ವ ವಿಖ್ಯಾತ ಕೆಆರ್‌ಎಸ್‌ನ ಬೃಂದಾವನ ಗಾರ್ಡನ್‌ನಲ್ಲಿ ಫೆ. 22ರ ಸಂಜೆ ಸಂಗೀತ ನೃತ್ಯ ಕಾರಂಜಿ ತಾಂತ್ರಿಕ ಕಾರಣದಿಂದ ಚಾಲನೆಗೊಳ್ಳದ ಕಾರಣ ಅಲ್ಲಿ ಸಂಗೀತ ಕಾರಂಜಿ ನೋಡಲು ಸೇರಿದ್ದ ದೇಶ, ವಿದೇಶಗಳ ಸಾವಿರಾರು ಪ್ರವಾಸಿಗರಿಗೆ ನಿರಾಸೆಯಾಗಿದೆ. ಇದರಿಂದ ಬೇಸತ್ತು ಅವರು ಟಿಕೆಟ್ ದರ ವಾಪಸ್ ನೀಡುವಂತೆ ಪ್ರತಿಭಟನೆ ನಡೆಸಿರುವುದು, ಇಲಾಖೆ ಹಾಗೂ ಸಿಬ್ಬಂದಿಗಳು ವಾಪಸ್ ಹಣ ನೀಡಲು ನಿರಾಕರಿಸಿರುವುದು, ಕರ್ನಾಟಕ ಕೈಗಾರಿಕಾ ಪಡೆ ಹಾಗೂ ಸಿವಿಲ್ ಪೊಲೀಸ್ ಸಿಬ್ಬಂದಿಗಳು ಜನರನ್ನು ಹೊರದಬ್ಬಿರುವುದು ಕೂಡ ವರದಿಯಾಗಿದೆ.

ಸಿನಿಮಾ ಷೋ, ಕ್ರಿಕೆಟ್ ಪಂದ್ಯ ರದ್ದಾದರೆ ಅಥವಾ ಸೇವೆಯಲ್ಲಿ ಲೋಪವಾದರೆ ಹಣ ವಾಪಸ್ ನೀಡುವ ನಿಯಮವಿದೆ. ಆದರೆ ಸರ್ಕಾರಿ ಇಲಾಖೆಯೇ (ಅಥವಾ ಗುತ್ತಿಗೆದಾರರು) ಇಂತಹ ಸಂದರ್ಭದಲ್ಲಿ ಹಣ ವಾಪಸ್ ನೀಡದೆ ಜನರನ್ನು ವಂಚಿಸಿರುವುದು ಖಂಡನೀಯ.

ಇನ್ನು ಮುಂದಿನ ದಿನಗಳಲ್ಲಾದರೂ ಇಂತಹ ಲೋಪಗಳಾದಾಗ ಜನರಿಗೆ ಟಿಕೆಟ್ ಹಣ ಹಿಂದಿರುಗಿಸುವ ವ್ಯವಸ್ಥೆಯನ್ನು ಇಲಾಖೆ ನೀಡುವಂತೆ ಸರ್ಕಾರ ಆದೇಶ ಮಾಡಲಿ. ಆ ಮೂಲಕ ಪ್ರವಾಸಿಗರ ವಿಶ್ವಾಸ ಗಳಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮರೆಯಲಾಗದ ಮೈಸೂರಿನ ಅಸಾಮಾನ್ಯರು





ಜನಪ್ರಿಯ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಪ್ರತಿ ವಾರ ಮೈಸೂರಿನ ಮಹಾಮಹಿಮರ ಕುರಿತಾಗಿ ಹಿರಿಯ ಪತ್ರಕರ್ತರು, ಮಹಾ ಚಿಂತಕರೂ ಆದ ಶ್ರೀ ಗೌರಿ ಸತ್ಯ ಅವರು ಸತತವಾಗಿ 50 ಲೇಖನಗಳನ್ನು ಬರೆದಿದ್ದರು. ಅವೆಲ್ಲವುಗಳನ್ನೊಳಗೊಂಡ ಶ್ರೀಯುತ ಗೌರಿ ಸತ್ಯ ಅವರ 'ಮೈಸೂರಿನ ಅಸಾಮಾನ್ಯರು' ಕೃತಿಯು ಇತ್ತೀಚೆಗೆ ಬಿಡುಗಡೆಯಾಯಿತು. ಇದೊಂದು ಅಮೋಘ ಕೃತಿ. ಈ ಕೃತಿಯ ಪರಿಚಯಾತ್ಮಕ ಲೇಖನವಿದು.

– ಡಾ. ಸಿ.ಜಿ. ಬೆಟಸೂರಮಠ,

ಡಾ. ಸಿ.ಜಿ.ಬೆಟಸೂರಮಠ
ಶಿಕ್ಷಣ ತಜ್ಞರು, ಕಾರ್ಯನಿರ್ವಾಹಕ ಕಾರ್ಯದರ್ಶಿ
ಜೆಎಸ್‌ಎಸ್ ಮಹಾ ವಿದ್ಯಾಪೀಠ, ಮೈಸೂರು

(ನಿನ್ನೆ ಸಂಚಿಕೆಯಿಂದ)

ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರ್‌ರವರ ಆಸ್ಥಾನದಲ್ಲಿ ಪಂಡಿತರಾಗಿದ್ದ, ಚಿಕ್ಕ ವಯಸ್ಸಿಗೆ ಹೆಚ್ಚಿನ ಪ್ರತಿಭೆ, ವಾಕ್ ಸಾಮರ್ಥ್ಯವನ್ನು ಸಾಧಿಸಿದ್ದ **ಚಾಮರಾಜನಗರದ ಶ್ರೀ ಶ್ರೀಕಂಠ ಶಾಸ್ತ್ರಿಗಳು** ಮೈಸೂರು ಅರಮನೆಯ ಧರ್ಮಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದರು.

ಮೈಸೂರಿನ ಐತಿಹಾಸಿಕ ಸುಬ್ಬರಾಯನಕೆರೆಯ ನಿರ್ಮಾತೃ ಶ್ರೀ **ಭಾಗವತ ಸುಬ್ಬರಾಯರು** ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಭಾಗವತ ಪ್ರವಚನ ಮಾಡಿ ವಿವರಿಸುತ್ತಿದ್ದರು ಹಾಗೂ ಮೈಸೂರು ಅರಮನೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದರು.

ಶ್ರೇಷ್ಠ ಮಟ್ಟದ ಸಂಸ್ಕೃತ ಪಂಡಿತರಾದ ಆಸ್ಥಾನ **ವಿದ್ವಾನ್ ಕವಿರತ್ನ ಮಂಡಿಕಲ್ ಶ್ರೀ ರಾಮಾ ಶಾಸ್ತ್ರಿಗಳು** ಕೌಟಿಲ್ಯನ ಅರ್ಥಶಾಸ್ತ್ರವನ್ನು ಜಗತ್ತಿಗೆ ಕೊಟ್ಟು ಕೀರ್ತಿ ಪಡೆದ **ಶಾಮಾಶಾಸ್ತ್ರಿ**ಗಳ ಗುರುಗಳು, ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದವರು.

ಶಿಶು ಸಾಹಿತ್ಯದ ಆದ್ಯ ಪ್ರವರ್ತಕರಾಗಿ, ಬಾಲ ಕವನಗಳನ್ನು ರಚಿಸಿದ ಪ್ರಮುಖರು, ಕವಿಗಳಾಗಿ, ಅನುವಾದಕರಾಗಿ, ವಿಮರ್ಶಕರಾಗಿ, ಸಂಶೋಧಕರೂ ಆಗಿದ್ದ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಕಲಿತ ಗೋವಿನ ಹಾಡು, ಇಟ್ಟರೆ ಸಗಣಿಯಾದೆ.. ಎಂಬ ಸುಲಭ, ಸುಂದರ ಬಾಲಕವನವನ್ನು ರಚಿಸಿ ಕೊಟ್ಟವರು ಶ್ರೀ **ಎಸ್.ಜಿ.ನರಸಿಂಹಾಚಾರ್**ರವರು ಹಳಗನ್ನಡ ಮತ್ತು ಹೊಸಗನ್ನಡ ಸಾಹಿತ್ಯಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು.

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದ, ಮೈಸೂರು ಸಂಸ್ಥಾನದ ಗೀತೆಯಾದ ಕಾಯೌ ಶ್ರೀಗೌರಿ ಗೀತೆಯನ್ನು ರಚಿಸಿದವರು ಇದೇ ಅಭಿನವ **ಕಾಳಿದಾಸ ಶ್ರೀ ಬಸವಪ್ಪ ಶಾಸ್ತ್ರಿ**ಗಳು.

ಶ್ರೀ ಹತ್ತನೇ ಚಾಮರಾಜ ಒಡೆಯರ್‌ರವರ ಆಶ್ರಯದಲ್ಲಿ ದಶಾವತಾರ ನಾಟಕ ಕಂಪನಿಯನ್ನು ಆರಂಭಿಸಲು ಕಾರಣೀಭೂತರಾಗಿದ್ದ, ಕನ್ನಡ ವೃತ್ತಿ ರಂಗಭೂಮಿಯ ಆಚಾರ್ಯ ಪಟ್ಟ ಪಡೆದ ಕೀರ್ತಿ ಕನ್ನಡ ರಂಗದ ಆಚಾರ್ಯ **ಮಂಡ್ಯ ರಂಗಾಚಾರ್ಯ**ರಿಗೆ ಸಲ್ಲುತ್ತದೆ.

ಕನ್ನಡ ರಂಗಭೂಮಿಯ ಉನ್ನತಿಗಾಗಿ ಅಪಾರವಾಗಿ ಶ್ರಮಿಸಿ ತಪಸ್ಸಾಧನೆ ಮಾಡಿದ ನಾಟಕದ ನರಸಿಂಹಯ್ಯನವರು ನಟರಾಗಿ, ನಿರ್ಮಾಪಕರಾಗಿ, ಗಮಕಿಯಾಗಿ, ಸಾಹಿತ್ಯ ಪಂಡಿತರಾಗಿ ತಮ್ಮ ಬಾಳಿನುದ್ದಕ್ಕೂ ರಂಗಭೂಮಿಗಾಗಿಯೇ ಸೇವೆ ಸಲ್ಲಿಸಿದರು.

12. ಮಹಾರಾಜರಷ್ಟೇ ಹಲವಾರು ಮಹನೀಯರು ಸಮಾಜ ಸೇವೆಯಲ್ಲಿ ಹಾಗೂ ಪರೋಪಕಾರದಲ್ಲಿ ಹೆಸರುವಾಸಿಯಾಗಿದ್ದಾರೆ.

ತಾವು ಶ್ರೀಮಂತರಲ್ಲದಿದ್ದರೂ ಪರೋಪಕಾರ ಮಾಡಿ ಸಮಾಜದ ಉನ್ನತಿಗಾಗಿ ದುಡಿದವರು, ಅಪಾರ ದೈವಭಕ್ತರು, ಅರಮನೆಗೆ ತುಂಬೆಹೂವು ನೀಡುತ್ತಿದ್ದರಿಂದ ಇವರಿಗೆ **ತುಂಬೆ ಹೂವು ರಾಮಾಶಾಸ್ತ್ರಿ**ಗಳು.

ಹೈಕೋರ್ಟ್‌ನಲ್ಲಿ ವಕೀಲರಾಗಿದ್ದ, ಸೇವೆ, ದಾನ ಧರ್ಮಗಳನ್ನು ಮಾಡಿ, ಹೊರಗಿನಿಂದ ಶಿಕ್ಷಣಕ್ಕೆ ಬರುತ್ತಿದ್ದವರಿಗೆ ಆಶ್ರಯ ನೀಡುತ್ತಿದ್ದ, ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ರಾಜಸೇವಾಸಕ್ತ ಎಂಬ ಬಿರುದು ಪಡೆದವರು **ಸಿ.ನರಸಿಂಹಯ್ಯ**ನವರು.

'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಒಂದು ವರ್ಷ ಸತತವಾಗಿ ಪ್ರತಿ ವಾರ ಪ್ರಕಟಗೊಂಡ ಐವತ್ತು ಲೇಖನಗಳನ್ನು ಪ್ರಕಟಣೆಯ ಪ್ರಾರಂಭದಿಂದಲೇ ಶ್ರೀ ಗೌರಿ ಸತ್ಯ ಅವರನ್ನು ಪರಿಚಯ ಮಾಡಿಕೊಂಡು, ಅವರಿಂದ ಅನುಮತಿ ಪಡೆದು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಸಾರ್ವಜನಿಕರಿಗೆ ಓದಲು, ತಿಳಿದುಕೊಳ್ಳಲು ಅನುಕೂಲ ಮಾಡಿಕೊಟ್ಟ ಮೈಸೂರಿನ ಮಹಿಮಾ ಪ್ರಕಾಶನದ ಶ್ರೀ ಕೆ.ವಿ. ಶ್ರೀನಿವಾಸ್‌ರವರು ಅಭಿನಂದನಾರ್ಹರು.



ಗೌರಿ ಸತ್ಯ

ಆಡಳಿತದ ಪ್ರಮುಖ ಸ್ಥಾನಗಳಲ್ಲಿದ್ದುಕೊಂಡು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ, ಎಲೆಮರೆಕಾಯಿಗಳಂತೆ ಇದ್ದ ಈ ಎಲ್ಲಾ ಐವತ್ತೂ ಮಹನೀಯರ ಜನನ–ಮರಣ, ಬದುಕಿನ ಅವಧಿ, ಸೇವೆಯ ಪ್ರಾರಂಭದಿಂದ ಅಂತ್ಯದವರೆಗಿನ ಸಾಧನೆಗಳ ಬಗ್ಗೆ ಭಾವಚಿತ್ರ, ಕೃತಿಗಳ ಚಿತ್ರಗಳೊಂದಿಗೆ ಪ್ರಕಟಿಸಿರುವುದು ಹೆಮ್ಮೆಯ ವಿಷಯ. ಡಿವಿಜಿಯವರ ಜ್ಞಾಪಕ ಚಿತ್ರಶಾಲೆ ಸಂಪುಟಗಳಿಂದ, ಪ್ರೊ.ಸಿ.ವಿ.ರವಿಶಂಕರ್ ಅವರ ಸನ್ಸ್ ಆಫ್ ಸರಸ್ವತಿ ಆಂಗ್ಲ ಪುಸ್ತಕದಿಂದ, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳ ಮುಲುಕನಾಡು ಮಹನೀಯರು ಗ್ರಂಥದಿಂದ ಹಾಗೂ ಇನ್ನು ಕೆಲವರ ಬಗ್ಗೆ ಅವರ ಸಂಬಂಧಿಕರಿಂದ ಮಾಹಿತಿ ಹಾಗೂ ಛಾಯಾಚಿತ್ರ ಸಂಗ್ರಹಿಸಿ ಹಲವಾರು ಕಡೆಯಿಂದ ಮಾಹಿತಿಯನ್ನು ಹೆಕ್ಕಿ ಒಂದು ರೀತಿಯಲ್ಲಿ ಸಂಶೋಧನೆ ಮಾಡಿದ ಶ್ರೀ ಗೌರಿ ಸತ್ಯ ಅವರ ಪರಿಶ್ರಮ ಮೆಚ್ಚತಕ್ಕದ್ದು. ಒಂದರ್ಥದಲ್ಲಿ ಶ್ರೀ ಗೌರಿ ಸತ್ಯ ಅವರೂ **ಅಸಾಮಾನ್ಯರು** ಅಂದರೆ ತಪ್ಪಾಗಲಿಕ್ಕಿಲ್ಲ. ಸುಂದರವಾಗಿ ಹೊರಬಂದ ಕೃತಿಯು ಸಂಗ್ರಹಯೋಗ್ಯವಾಗಿದ್ದು, ಶ್ರೀ ಗೌರಿ ಸತ್ಯ ಅವರಿಗೆ ಅಭಿನಂದನೆ ತಿಳಿಸುತ್ತ, ಕೃತಿಯನ್ನು ಸಹೃದಯ ಓದುಗರು ಸ್ವೀಕರಿಸಲೆಂದು ಹಾರೈಸುತ್ತೇವೆ. **(ಮುಗಿಯಿತು)**



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಅಂತರಂಗದ ಕೂಗಿಗೂ ಬೆಲೆ ಕೊಡಬೇಕು...!

ಮಾರ್ಚ್, ಏಪ್ರಿಲ್ ಬಂದರೆ ಮಕ್ಕಳ ಪರೀಕ್ಷಾ ಅವಧಿ. ಮಾಸರಿ ಸುಮಾರು ಜನವರಿಯಿಂದಲೇ ಈ ಪರೀಕ್ಷಾ ಭಯ ಆರಂಭವಾಗುತ್ತದೆ. ಪರೀಕ್ಷೆ ಮುಗಿದಂತೆ ಮಕ್ಕಳಲ್ಲಿ ಪರೀಕ್ಷಾ ಜ್ವರ ತಣ್ಣಗಾಗುತ್ತದೆ. ಆದರೆ, ಏಳನೇ, ಹತ್ತನೇ ಹಾಗೂ ಪಿಯುಸಿಯಲ್ಲಿ ಓದುತ್ತಿರುವ ಮಕ್ಕಳ ತಂದೆ–ತಾಯಿಯಂದಿರಿಗೆ ಆ ನಂತರ ಪರೀಕ್ಷೆ ಆರಂಭವಾಗುತ್ತದೆ. ಮಗುವಿನ ಮುಂದಿನ ವಿದ್ಯಾಭ್ಯಾಸ ಎಲ್ಲಿ ಹಾಗೂ ಹೇಗೆ ಎಂಬ ಬಗ್ಗೆ ಅವರಲ್ಲಿ ಆತಂಕ ಮನೆ ಮಾಡುತ್ತದೆ.

ಇತ್ತೀಚೆಗೆ ದ್ವಿತೀಯ ಪಿಯುಸಿಯಲ್ಲಿ ಓದುತ್ತಿರುವ ಹುಡುಗನ ಪೋಷಕರ ಭೇಟಿಯಾಗಿದ್ದೆ. ಇನ್ನೂ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿಲ್ಲ. ಆದರೆ, ಅವರಲ್ಲಿ ಪಿಯುಸಿ ನಂತರ ಮಗನನ್ನು ಯಾವ ಕೋರ್ಸಿಗೆ ಸೇರಿಸಬೇಕು, ಯಾವುದು ಒಳ್ಳೆಯದು, ಯಾವುದು ಸರಿ ಎಂಬ ಆತಂಕ ಮನೆಮಾಡಿತ್ತು. ಇಂದು ಕಂಪ್ಯೂಟರ್ ಸೈನ್ಸ್‌ಗೆ ಬೆಲೆ ಇಲ್ಲವಂತೆ, ಸಿವಿಲ್ ಸರಿಯಾಗದು, ಮೆಕ್ಯಾನಿಕಲ್ ನಮ್ಮ ಮಗನಿಗೆ ಸರಿಯಾಗುವುದಿಲ್ಲ.

ಹಾಗಾಗಿ ಏನು ಮಾಡುವುದೋ ತಿಳಿಯುತ್ತಿಲ್ಲ ಎಂಬ ಆತಂಕದಲ್ಲಿ ಅವರಿದ್ದರು. ಅಂದರೆ, ಅವರು ಮಗನನ್ನು ಇಂಜಿನಿಯರಿಂಗ್‌ಗೆ ಸೇರಿಸಲು ತೀರ್ಮಾನಿಸಿದ್ದಾರೆ. ಆದರೆ ಯಾವ ವಿಭಾಗ ಗೊತ್ತಿಲ್ಲ. ಇನ್ನೂ ಪರೀಕ್ಷೆಯಾಗಿ, ಸಿಇಟಿ ಆದ ಮೇಲೆ ಯೋಚಿಸಬಾರದೇಕೇ ಎಂದರೆ, ಇಲ್ಲ ಈಗಲೇ ತೀರ್ಮಾನ ಮಾಡಿದರೆ ಒಳ್ಳೆಯದು ಎಂಬುದು ಅವರ ಅಭಿಪ್ರಾಯ.

ಮಕ್ಕಳಿಗೆ ಇಂಜಿನಿಯರಿಂಗ್ನ್ನೇ ಏಕೆ ಆರಿಸಿಕೊಳ್ಳುತ್ತಾರೆ ಎಂಬುದು ಒಂದು ಪ್ರಶ್ನೆಯಾಗಿ ಕಾಡುತ್ತದೆ. ಇನ್ನೂ ಹಲವಾರು ವಿಭಾಗಗಳ ಶಿಕ್ಷಣ ಇದೆ. ಮಕ್ಕಳು ಸ್ನಾತಕೋತ್ತರ ಪದವಿ ಗಳಿಸಿ ಶಿಕ್ಷಕರಾಗಬಹುದು, ಸೈಂಟಿಸ್ಟ್ ಆಗಬಹುದು. ಸ್ಪೀಚ್ ಅಂಡ್ ಹಿಯರಿಂಗ್ ಇದೆ, ಕಲಾ ಪ್ರಕಾರಗಳಿವೆ ಎಲ್ಲಾದರೂ ಓದಬಹುದಲ್ಲ ಎಂದರೆ ಈ ಹಂತದಲ್ಲಿ ಅವರ ತಲೆಯಲ್ಲಿ ಇಂಜಿನಿಯರಿಂಗ್ ಬಗ್ಗೆಯೇ ಆಲೋಚನೆ. ಮಗ ಏನು ಹೇಳುತ್ತಾನೆ. ಅವನಿಗೆ ಯಾವ ಶಿಕ್ಷಣ ಇಷ್ಟ ಎಂದರೆ, ಅವನಿಗೆ ಏನೂ ತಿಳಿಯುವುದಿಲ್ಲ, ಇನ್ನೂ ಚಿಕ್ಕವನು, ನಾವೇ ನಿರ್ಧಾರ ಮಾಡಬೇಕು ಎಂಬುದು ಅವರ ವಾದ. ಮನಸ್ಸಿನಲ್ಲಿ ಈ ಆಲೋಚನೆ ಇರುವಾಗ ಅವರಿಗೆ ಬೇರೆ ವಿಭಾಗಗಳ ಬಗ್ಗೆ ಗಮನವೇ ಹೋಗುವುದಿಲ್ಲ. ಮಕ್ಕಳಿಗೆ ಯಾವ ವಿಭಾಗ ಇಷ್ಟ ಎಂಬುದನ್ನೂ ಅವರು ಪರಿಗಣಿಸಲು ಹೋಗುವುದಿಲ್ಲ.

ಇದನ್ನು ತಪ್ಪು ಎಂದು ಹೇಳಲಾಗುವುದಿಲ್ಲ. ತಮ್ಮ ಮಕ್ಕಳ ಓದು ಎಂದರೆ, ಮುಂದೆ ಅವರು ಕೈತುಂಬಾ ಸಂಪಾದಿಸಿ, ಆರಾಮವಾದ ಜೀವನ ನಡೆಸಬೇಕು ಎಂಬುದು ಅವರ ಇಚ್ಛೆಯಾಗಿರುತ್ತದೆ. ಇದಕ್ಕಾಗಿ ಅವರು ತಮ್ಮ ಹತ್ತಿರದ ಸಂಬಂಧಿಗಳು, ಸ್ನೇಹಿತರ ಮಕ್ಕಳ ಜೊತೆಗೆ ಹೋಲಿಕೆ ಮಾಡಿಕೊಂಡಿರುತ್ತಾರೆ. ಅವರಿಗಿಂತ ನಮ್ಮ ಮಗ ಇನ್ನೂ ಹೆಚ್ಚಿನ ಸಂಬಳದ ವೇತನ ಪಡೆಯಬೇಕು ಎಂಬುದಷ್ಟೇ ಅವರ ಮನಸ್ಸಿನಲ್ಲಿ ಓಡುತ್ತಿರುತ್ತದೆ. ಇದೊಂದು ರೀತಿಯ ಮಾಯಾಜಾಲ. ಒಮ್ಮೆ ಅದರಲ್ಲಿ ಸಿಲುಕಿಕೊಂಡರೆ ಅದರಿಂದ ಆಚೆಗೂ ದೊಡ್ಡದಾದ ಪ್ರಪಂಚವಿದೆ ಎಂಬುದೇ ಗಮನಕ್ಕೆ ಬರುವುದಿಲ್ಲ.

ಈ ಕಾರಣಕ್ಕೇ ಹೇಳುವುದು, ಮಕ್ಕಳನ್ನು ಬೆಳೆಸುವುದು ಒಂದು ಕಲೆ ಎಂದು. ಮಗುವಿಗೆ ಯಾವುದು ಇಷ್ಟ ಎಂಬುದನ್ನು ಮೊದಲಿನಿಂದಲೇ ಗಮನಿಸಬೇಕು. ಅವನ ಇಷ್ಟದಂತೆ ಅದರಲ್ಲಿ ಮುಂದುವರೆಯುವಂತೆ ಮಾಡಬೇಕು. ಅವನಿಗೆ ಚಿತ್ರ ಬಿಡಿಸುವುದು ಇಷ್ಟ ಎಂದಾದರೆ ಅದನ್ನೇ ಪ್ರೋತ್ಸಾಹಿಸಬೇಕು, ಅವನಿಗೆ ಸಂಗೀತ ಇಷ್ಟ ಎಂದಾದರೆ ಅದನ್ನೇ ಹೆಚ್ಚಾಗಿ ಕಲಿಸಬೇಕು. ಹೀಗೆ ಅವರ ಇಷ್ಟವನ್ನು ಗಮನಿಸಿದಲ್ಲಿ ಹಾಗೂ ಅದಕ್ಕೆ ಪ್ರೋತ್ಸಾಹ ನೀಡಿದಲ್ಲಿ ಖಂಡಿತಾ ಪಿಯುಸಿ ಹಂತದಲ್ಲಿ ಇಂತಹ ಸಂದಿಗ್ಧ ಪರಿಸ್ಥಿತಿ ಬರುವುದಿಲ್ಲ. ಆದರೆ ನಾವು ಹಾಗೆ ಮಾಡುವುದಿಲ್ಲ. ನಮಗೆ ಮಕ್ಕಳು ಹೇಗಿರಬೇಕು ಎಂಬ ಬಗ್ಗೆಯೇ ಸರಿಯಾದ ಕಲ್ಪನೆಯಿಲ್ಲ. ಅವರು ಹಣ ಸಂಪಾದಿಸುವ ಯಂತ್ರವಾಗಬೇಕು ಎಂಬುದಷ್ಟೇ ಪೋಷಕರ ತಲೆಯಲ್ಲಿ ಇರುವ ವಿಚಾರ.

ಪ್ರತಿವರ್ಷ ಬೇಸಿಗೆ ರಜೆಯಲ್ಲಿ ಹಲವು ಕಡೆ ಬೇಸಿಗೆ ಶಿಬಿರಗಳು ನಡೆಯುತ್ತವೆ. ಕೆಲವು ಪೋಷಕರು ಅದಕ್ಕೆ ಮಕ್ಕಳನ್ನು ದಾಖಲಿಸುತ್ತಾರೆ. ಮತ್ತಷ್ಟು ಜನರು ಅದಕ್ಕೇಕೆ ಹಣ ಖರ್ಚು! ಮನೆಯಲ್ಲೇ ಇರಲಿ ಎಂಬಂತಹವರನ್ನೂ ಕಾಣುತ್ತೇವೆ. ಇಂತಹ ಬೇಸಿಗೆ ಶಿಬಿರಕ್ಕೆ ಸೇರಿದ ಮಕ್ಕಳು ಸುಮಾರು ಒಂದು ತಿಂಗಳಲ್ಲಿ ಹಲವು ವಿಷಯಗಳನ್ನು ಕಲಿಯುತ್ತಾರೆ. ಅವೆಲ್ಲಾ ಪಠ್ಯಪುಸ್ತಕಕ್ಕೆ ಹೊರತಾದಂತಹುದು. ಕೊನೆಯಲ್ಲಿ ಆ ಮಕ್ಕಳಿಂದ ನಾಟಕ, ಹಾಡು ಇತ್ಯಾದಿ ಪ್ರದರ್ಶನವಾದಾಗ ಪೋಷಕರಿಗೆ ಆಶ್ಚರ್ಯವಾಗುತ್ತದೆ. ನಮ್ಮ ಮಗುವಿಗೆ ಇದೆಲ್ಲದರಲ್ಲಿ ಆಸಕ್ತಿ ಇದೆ ಎಂಬುದೇ ನಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಅಂದರೆ ಮಕ್ಕಳಲ್ಲಿ ಸುಪ್ತಪ್ರತಿಭೆ ಇರುತ್ತದೆ. ಅದನ್ನು ಪೋಷಕರು ಆರಂಭದಿಂದಲೇ ಗುರುತಿಸುವ ಕೆಲಸ ಮಾಡಬೇಕು. ಅದನ್ನು ಪ್ರೋತ್ಸಾಹಿಸಬೇಕು.



ಶ್ರೀರಂಗ್ ದೇವಬಾ ಲಾಡ್



ಅರಿಣಿಮಾ ಸಿನ್ಹಾ

> “ ಮಕ್ಕಳಿಗೆ ನಾವು ಏನೆಲ್ಲಾ ಸವಲತ್ತುಗಳನ್ನು ಕೊಡಬಹುದು. ಆದರೆ ಪರಿಸ್ಥಿತಿ ನಮ್ಮ ವಿರುದ್ಧವಾಗುತ್ತದೆ ಎಂದಾದಾಗ ಅದನ್ನು ಎದುರಿಸುವ ಮನೋಭಾವ ಕೊಟ್ಟಿದ್ದೇವೆಯಾ? ಎಂಬುದನ್ನೂ ಗಮನಿಸಬೇಕು. ಮಕ್ಕಳಿಗೆ ಹಣದ ಹಿಂದೆ ಹೋಗದೆ, ಜೀವನ ಬೇರೆ ರೀತಿಯಲ್ಲೂ ಸಾಧ್ಯವಿದೆ ಎಂಬುದನ್ನೂ ಕಲಿಸಬೇಕು. ಜೀವನ ನಾವು ಅಂದುಕೊಂಡತೇ ಆಗುವುದಿಲ್ಲ ಎಂಬುದನ್ನು ತಿಳಿಸಿ ಅವರನ್ನು ಮಾನಸಿಕವಾಗಿ ತಯಾರು ಮಾಡಬೇಕು. ಒಂದಷ್ಟಾದರೂ ಅವರಲ್ಲಿ ಸಾಧನಾ ಮನೋಭಾವ ಬೆಳೆಯುವಂತೆ ಮಾಡಬೇಕು. ಹಾಗಾದಾಗ ಅವರು ತಮ್ಮ ಜೀವನದ ನೆಲೆಯನ್ನು ತಾವೇ ಕಂಡುಕೊಳ್ಳುತ್ತಾರೆ.

ನಮ್ಮಲ್ಲಿ ಅನೇಕ ಸಂಘಸಂಸ್ಥೆಗಳು ಹಲವು ಪ್ರತಿಭಾವಂತರನ್ನು ಗುರುತಿಸಿ ಆಗಾಗ್ಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸುತ್ತವೆ. ಅಲ್ಲಿ ಇವನು ಇಂಜಿನಿಯರ್, ಇವನು ಹೆಚ್ಚು ಸಂಪಾದಿಸುತ್ತಾನೆ. ಇವನು ಡಾಕ್ಟರ್ ಇವನು ಹೆಚ್ಚು ದುಡಿಯುತ್ತಾನೆ ಎಂದು ಯಾರನ್ನೂ ಗುರುತಿಸಿರುವುದಿಲ್ಲ. ಬದಲಾಗಿ ವಿವಿಧ ಕ್ಷೇತ್ರಗಳಲ್ಲಿ ಒಂದಷ್ಟು ಸಾಧನೆ ಮಾಡಿದವರನ್ನು ಗುರುತಿಸಿ ಸನ್ಮಾನ ಮಾಡಿ ಅವರನ್ನು ಹಾಡಿ ಹೊಗಳುತ್ತಾರೆ. ಆ ಸಭೆಯಲ್ಲಿ ನಾವೂ ಏನಾದರೂ ಭಾಗವಹಿಸಿದ್ದರೆ, ಈ ಗುಂಪಿನಲ್ಲಿ ನಮ್ಮ ಮಗುವಿಗೂ ಸನ್ಮಾನವಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಳ್ಳುತ್ತೇವೆ. ಆದರೆ ಒಳಗಿನ ಮನಸ್ಸು ಮಗು ಹೆಚ್ಚಾಗಿ ಸಂಪಾದಿಸಿ ಆರಾಮವಾಗಿರಬೇಕು ಎಂದು ಬಯಸುತ್ತಿರುತ್ತದೆ. ಹೀಗೆ ಹಣದ ಹಿಂದೆ ಮಗು ಹೋಗುವಂತೆ ಮಾಡುವುದು ಪೋಷಕರೇ ಆಗಿರುತ್ತಾರೆ. ಅಂತಹ ಹಣದಾಹಿಯನ್ನು ಯಾರು ಹುಡುಕಿ ಸನ್ಮಾನ ಮಾಡುತ್ತಾರೆ?

ನಮ್ಮ ದೇಶದಲ್ಲಿ ಪ್ರತಿ ವರ್ಷ ಪದ್ಮ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸಂಪ್ರದಾಯವಿದೆ. ಇತ್ತೀಚಿನ ವರ್ಷಗಳಲ್ಲಿ ಯಾರೂ ಹೆಸರೇ ಕೇಳಿರದ ವ್ಯಕ್ತಿಗಳಿಗೆ ಈ ಪ್ರಶಸ್ತಿಗಳು ಸಿಗುತ್ತಿವೆ. ಇಂದು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಬೇಕಾದ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರವೇ ವರ್ಷಪೂರ್ತಿ ಅಂತಹ ವ್ಯಕ್ತಿಗಳನ್ನು ಹುಡುಕುವ ಕೆಲಸ ಮಾಡುತ್ತದೆ.

ಅಂತಹವರ ಪಟ್ಟಿ ಬಿಡುಗಡೆಯಾದಾಗ ಇವರಲ್ಲಿ ಕೆಲವರನ್ನು ಬಿಟ್ಟರೆ ಉಳಿದವರ ಬಗ್ಗೆ ನಮಗೆ ಗೊತ್ತೇ ಇರುವುದಿಲ್ಲ. ಅವರಿಗೆ ಪ್ರಶಸ್ತಿ ಬಂದ ನಂತರ ಅವರ ವಿವರ ಓದಿದರೆ ಆಶ್ಚರ್ಯವಾಗುತ್ತದೆ. ಅವರು ಯಾರೂ ಪ್ರಶಸ್ತಿಗೆ ಎಂದು ಕೆಲಸ ಮಾಡಿದವರಲ್ಲ. ಕೆಲವರು ತಮ್ಮ ಕುಲಕಸುಬನ್ನೇ ಮುಂದುವರೆಸಿರುತ್ತಾರೆ. ಕೆಲವರು ತಮ್ಮ ಮನೆತನಕ್ಕೆ ಬಳುವಳಿಯಾಗಿ ಬಂದಿದ್ದ ಗಿಡಮೂಲಿಕೆಗಳ ಔಷಧ ನೀಡಿ ನೂರಾರು ಜನರ ಪ್ರಾಣ ಉಳಿಸಿರುತ್ತಾರೆ.

ನಿಮಗೆ ಇಂತಹ ಪ್ರಶಸ್ತಿ ಬಂದಿದೆ ಎಂದರೆ, ಹಾಗೆಂದರೆ ಏನು ಎಂದು ಕೇಳುವಂತಹ ಮುಗ್ಧತನ ಅವರಲ್ಲಿ ಇರುತ್ತದೆ. ಆ ಪಟ್ಟಿಯಲ್ಲಿ ಬಹುತೇಕರು ಹಣದ ಹಿಂದೆ ಹೋದವರಲ್ಲ. ಅಂತಹವರನ್ನು ಪ್ರಶಸ್ತಿ ಅರಸಿಬರುತ್ತದೆ ಎಂಬುದನ್ನು ನಮ್ಮ ಪೋಷಕರು ಗಮನಿಸಬೇಕು. ಎಲ್ಲರೂ ಹಣದತ್ತಲೇ ಗಮನಹರಿಸಿದರೆ, ಈ ದೇಶದ ಬಗ್ಗೆ, ನಮ್ಮ ಸಮಾಜದ ಬಗ್ಗೆ ಯಾರು ಯೋಚಿಸುತ್ತಾರೆ!

ಇತ್ತೀಚೆಗೆ ಪದ್ಮಪ್ರಶಸ್ತಿ ಪಡೆದವರ ಪಟ್ಟಿಯನ್ನು ಅವಲೋಕಿಸಿದಾಗ ಅವರಲ್ಲಿ ಹಲವರು ವನವಾಸಿಗಳಾಗಿರುವುದು ಕಂಡುಬರುತ್ತದೆ. ಅವರಲ್ಲಿ ಶ್ರೀರಂಗ್ ದೇವಬಾ ಲಾಡ್ ಎನ್ನುವವರು ಮಹಾರಾಷ್ಟ್ರದವರು, ಅವರು ದುಡಿಯುತ್ತಿರುವುದು ಕೃಷಿ ಮತ್ತು ಪರಿಸರ ಕ್ಷೇತ್ರದಲ್ಲಿ, ಇಂತಹ ಸುಮಾರು 9 ವನವಾಸಿಗಳಿಗೆ ಈ ವರ್ಷದ ಪದ್ಮಶ್ರೀ ಪ್ರಶಸ್ತಿ ಬಂದಿದೆ. ವನವಾಸಿಗಳು ಎಂದರೆ ನಮಗೆ ಒಂದು ರೀತಿಯ ಅಸಡ್ಡೆ. ಅವರು ಕಾಡಿನಲ್ಲಿರುವವರು, ಅವರಿಗೆ ನಾಗರಿಕತೆ ಎಂಬುದೇ ತಿಳಿದಿಲ್ಲ ಎಂಬ ಸಾಮಾನ್ಯ ನಂಬಿಕೆ ನಮ್ಮದು. ಆದರೆ ಹೀಗೆ ಪದ್ಮ ಪ್ರಶಸ್ತಿ ಪಡೆದವರ ವಿವರ ಓದಿದಾಗ ಅವರ ನಿಸ್ವಾರ್ಥ ಸಾಧನೆ ನಮಗೆ ಅರಿವಾಗುತ್ತದೆ. ಯಾವ ಪ್ರತಿಫಲವನ್ನು ಬಯಸದೇ ತಮ್ಮ ಪಾಡಿಗೆ ತಾವು ತಮ್ಮ ಕ್ಷೇತ್ರದಲ್ಲಿ ಅವರು ದುಡಿಯುತ್ತಿರುತ್ತಾರೆ.

ಇಂತಹ ಪ್ರಶಸ್ತಿ ಪಡೆದವರು ಶ್ರೀಮಂತರಲ್ಲ, ಅವರ ಹಣಕಾಸು ಸ್ಥಿತಿ ಉತ್ತಮವಾಗಿರುವುದಿಲ್ಲ. ವಾಸಿಸುವುದೂ ಸಾಧಾರಣ ಗುಡಿಸಲು, ಮನೆಗಳಲ್ಲಿ. ಅಂತಹವರ ಸಾಧನೆ ನಮ್ಮ ಕಣ್ಣು ತೆರೆಸಬೇಕು. ಅದರಲ್ಲಿ ಕೆಲವರು ಅಂಗವೈಕಲ್ಯಕ್ಕೆ ಒಳಗಾದರೂ ಸಾಧನೆ ಮಾಡಿರುತ್ತಾರೆ. ನಮ್ಮ ಮಕ್ಕಳು ಸದೃಢ ವಾತಾವರಣದಲ್ಲಿಯೇ ಬೆಳೆದರೂ ಅವರಿಗೆ ನಾವು ಇಂತಹ ಆದರ್ಶಗಳನ್ನು ಹೇಳಿಕೊಡುವುದಿಲ್ಲ.

ಹೀಗೆ ಪದ್ಮಶ್ರೀ ಪಡೆದವರ ಹೆಸರುಗಳನ್ನು ಪರಿಶೀಲಿಸುತ್ತಿರುವಾಗ ಗಮನ ಸೆಳೆದ ಒಂದು ಹೆಸರು ಅರಿಣಿಮಾ ಸಿನ್ಹಾ. ಈಕೆಗೆ 2015ರಲ್ಲಿ ಪದ್ಮಶ್ರೀ ಪ್ರಶಸ್ತಿ ದೊರಕಿದೆ. ಈಕೆಯ ಕಥೆಯನ್ನು ಓದಿದರೆ ರೋಮಾಂಚನವಾಗುತ್ತದೆ ಹಾಗೂ ನಮಗೂ ಏನಾದರೂ ಮಾಡಬೇಕು ಎಂಬ ಪ್ರೇರಣೆಯೂ ಆಗುತ್ತದೆ. ಈ ಅರಿಣಿಮಾ ಸಿನ್ಹಾ 2013ರಲ್ಲಿ ಮೌಂಟ್ ಎವರೆಸ್ಟ್ ಏರಿದ ಮೊದಲ ವಿಕಲಾಂಗ ಮಹಿಳೆ ಎಂಬುದೇ ನಮಗೆ ಆಶ್ಚರ್ಯ ಉಂಟು ಮಾಡುತ್ತದೆ. ಆಕೆ ಏಳು ಖಂಡಗಳ ಏಳು ಮಹಾ ಶಿಖರಗಳನ್ನು ಏರಿಳಿದವಳು. ಅದರಲ್ಲಿ ಏಷಿಯಾದ ಮೌಂಟ್ ಎವರೆಸ್ಟ್, ಆಫ್ರಿಕಾದ ಕಿಲಿಮಂಜಾರೋ, ಯುರೋಪ್‌ನ ಎಲ್ಬ್ರಸ್, ಅಂಟಾರ್ಟಿಕಾದ ವಿನ್ಸನ್ ಸೇರಿವೆ.


ಒಂದು ಪರ್ವತ ಹತ್ತಿಳಿಯುವುದೇ ಒಂದು ಪವಾಡ. ಅಂತಹುದರಲ್ಲಿ ಆಕೆ ಏಳು ಮಹಾಶಿಖರಗಳನ್ನು ಏರಿದ್ದಾಳೆ ಎಂದರೆ ಪರಮಾಶ್ಚರ್ಯವಾಗುತ್ತದೆ. ಅದೂ ಅಂಗವಿಕಲಳಾಗಿ. ಆಕೆಯ ಜೀವನದ ಬಗ್ಗೆ ಒಮ್ಮೆ ಗಮನಿಸಬೇಕು. ಆಕೆ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಳು. 2011ರಲ್ಲಿ ಆಕೆ ರೈಲಿನಲ್ಲಿ ಚಲಿಸುತ್ತಿದ್ದಾಗ ಕೆಲವು ದರೋಡೆಕೋರರು ಆಕೆಯ ಬಳಿಯಿದ್ದ ಚೀಲ ಹಾಗೂ ಚಿನ್ನದ ಸರವನ್ನು ಕಸಿದದ್ದೇ ಅಲ್ಲದೆ ಆಕೆಯನ್ನು ಚಲಿಸುತ್ತಿದ್ದ ರೈಲಿನಿಂದ ಹೊರಗೆ ತಳ್ಳಿದರು. ಈ ಬಗ್ಗೆ ಆಕೆ ಒಂದು ಕಡೆ ಹೇಳಿಕೊಂಡಿದ್ದಾಳೆ: 'ನಾನು ಅದನ್ನು ವಿರೋಧಿಸಿದೆ, ಆದರೆ ಅವರು ನನ್ನನ್ನು ರೈಲಿನಿಂದ ಆಚೆ ತಳ್ಳಿದರು. ಆಗ ನಾನು ಪಕ್ಕದ ಹಳಿ ಮೇಲೆ ಬಿದ್ದೆ. ನನಗೆ ಏಳಲು ಸಾಧ್ಯವಾಗಲಿಲ್ಲ. ರೈಲು ಬರುತ್ತಿರುವುದನ್ನು ನಾನು ಗಮನಿಸಿದೆ. ಆದರೆ ಎದ್ದೇಳಲು ಆಗಲೇ ಇಲ್ಲ. ಅಷ್ಟರಲ್ಲಿ ಆ ರೈಲು ನನ್ನ ಕಾಲ ಮೇಲೇ ಹಾದು ಹೋಯಿತು. ಆ ನಂತರ ಏನಾಯಿತೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದರ ಪರಿಣಾಮವಾಗಿ ಆಕೆಯ ಎಡಗಾಲನ್ನು ಮೊಣಕಾಲಿನ ಭಾಗದಲ್ಲಿ ಕತ್ತರಿಸಬೇಕಾಯಿತು.

ಆದರೆ ಆಕೆ ಧೈರ್ಯ ಕಳೆದುಕೊಳ್ಳಲಿಲ್ಲ. ಕೃತಕ ಕಾಲು ಧರಿಸಿ ಅಭ್ಯಾಸ ಮುಂದುವರೆಸಿದಳು. ಕೃತಕ ಕಾಲಿನಿಂದಲೇ ಹಲವು ಪರ್ವತಗಳನ್ನು ಏರಿದರು. ಇಂತಹ ಸಾಹಸಿಯನ್ನು ಹಲವು ಪ್ರಶಸ್ತಿಗಳು ಅರಸಿ ಬಂದವು. ಪದ್ಮಶ್ರೀ ಸಹ ಆಕೆಯನ್ನು ಅರಸಿ ಬಂದಿತು. ಇದನ್ನು ನಾವು ಒಂದು ಕಥೆಯಾಗಿ ಮಾತ್ರ ಪರಿಗಣಿಸಬಾರದು. ಆಕೆಯಲ್ಲಿದ್ದ ದೃಢ ಸಂಕಲ್ಪದ ಬಗ್ಗೆ ಗಮನಿಸಬೇಕು. ನಮ್ಮ ಮಕ್ಕಳಿಗೆ ನಾವು ಏನೆಲ್ಲಾ ಸವಲತ್ತುಗಳನ್ನು ಕೊಡಬಹುದು. ಆದರೆ ಪರಿಸ್ಥಿತಿ ನಮ್ಮ ವಿರುದ್ಧವಾಗುತ್ತದೆ ಎಂದಾದಾಗ ಅದನ್ನು ಎದುರಿಸುವ ಮನೋಭಾವ ಕೊಟ್ಟಿದ್ದೇವೆಯಾ ಎಂಬುದನ್ನೂ ಗಮನಿಸಬೇಕು. ಮಕ್ಕಳಿಗೆ ಹಣದ ಹಿಂದೆ ಹೋಗದೆ, ಜೀವನ ಸಾಧನೆ ಬೇರೆ ರೀತಿಯಲ್ಲೂ ಸಾಧ್ಯವಿದೆ ಎಂಬುದನ್ನೂ ಕಲಿಸಬೇಕು. ಜೀವನ ನಾವು ಅಂದುಕೊಂಡತೇ ಸಾಗುವುದಿಲ್ಲ ಎಂಬುದನ್ನು ತಿಳಿಸಿ ಅವರನ್ನು ಮಾನಸಿಕವಾಗಿ ತಯಾರು ಮಾಡಬೇಕು. ಒಂದಷ್ಟಾದರೂ ಅವರಲ್ಲಿ ಸಾಧನಾ ಮನೋಭಾವ ಬೆಳೆಯುವಂತೆ ಮಾಡಬೇಕು. ಹಾಗಾದಾಗ ಅವರು ತಮ್ಮ ಜೀವನದ ನೆಲೆಯನ್ನು ತಾವೇ ಕಂಡುಕೊಳ್ಳುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕ್ರೀಡಾ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲು ಪ್ರೋತ್ಸಾಹ ಅಗತ್ಯ

ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಮತ



ಫುಟ್ಬಾಲ್ ಆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಜಿ.ಡಿ.ಹರೀಶ್‌ಗೌಡ.

ಮೈಸೂರು,ಫೆ.23–ಕೇಂದ್ರ ಸರ್ಕಾರದ ಯೋಜನೆಗಳಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಬಹಳಷ್ಟು ಅನುಕೂಲಗಳಾಗಿದ್ದು, ಕ್ರೀಡಾ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲು ಅನುಕೂಲವಾಗಿದೆ ಎಂದು ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ಇಂದು ಜವಾಹರ್ ದೊಡ್ಡ ಮಾರಗೌಡನಹಳ್ಳಿ ನವೋದಯ ವಿದ್ಯಾಲಯದಲ್ಲಿ ನಡೆದ ಕೇಂದ್ರ ಸರ್ಕಾರದ 2. FIFA(Federation International the Football Association) Football for Schools (F45) ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಫುಟ್ಬಾಲ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ, ಮಾತನಾಡಿದರು. ಇದೇ ವೇಳೆ ಜಿಲ್ಲಾದ್ಯಂತ 333 ಶಾಲೆಗಳಿಗೆ ಫುಟ್ಬಾಲ್ ವಿತರಿಸಲಾಯಿತು.

ಫುಟ್ಬಾಲ್ ಗೋಲ್ ಗಳಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕರು, ದೇಶಾದ್ಯಂತ ಜವಾಹರ್ ನವೋದಯ ವಿದ್ಯಾಲಯಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ಕ್ರೀಡೆಗೆ ನೀಡುತ್ತಿರುವ ಪ್ರೋತ್ಸಾಹವನ್ನು ಕೊಂಡಾಡಿದರು. ಶಾಸಕರ ಅನುದಾನದಲ್ಲಿ ಶಾಲೆಗೆ ಅಗತ್ಯವಿರುವ ಎರಡು ಕೊಠಡಿಗಳನ್ನು ನಿರ್ಮಿಸಿ ಕೊಡುವುದಾಗಿ ತಿಳಿಸಿ, ಕ್ರೀಡಾಂಗಣಕ್ಕೆ ಅಗತ್ಯವಿರುವ ಎರಡು ಹೈಮಾಸ್ ಲೈಟ್‌ಗಳನ್ನು ಅಳವಡಿಸಿ ಕೊಡುವುದಾಗಿ ಭರವಸೆ ನೀಡಿದರು. ಫುಟ್ಬಾಲ್ ನಂತಹ ಕ್ರೀಡೆಯಿಂದ ವಿದ್ಯಾರ್ಥಿಗಳ ದೈಹಿಕ ಸದೃಢತೆ ಜೊತೆಗೆ ಮಾನಸಿಕ ಆರೋಗ್ಯ ವೃದ್ಧಿಗೊಳ್ಳುತ್ತದೆ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪ ನಿರ್ದೇಶಕ ಉದಯ್‌ಕುಮಾರ್, ಪ್ರಾಂಶುಪಾಲ ವಿ.ಶ್ರೀನಿವಾಸನ್, ಉಪ ಪ್ರಾಂಶುಪಾಲ ಶಾಜು ಜೋಸೆಫ್, ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಣಾಧಿಕಾರಿ ಯೋಗಾನಂದ, ಶಾಲೆಯ ಶಿಕ್ಷಕರು, ಪೋಷಕ ಶಿಕ್ಷಕ ಸಮಿತಿ ಸದಸ್ಯರಾದ ಡಾ.ಯೋಗೀಂದ್ರ, ಅಂಜನಿ ಕುಮಾರ್ ಉಪಸ್ಥಿತರಿದ್ದರು.

ಇಂದು ಸಂಜೆಯೊಳಗೆ ತಂಬಾಕು ಬೆಳೆಗಾರರಿಗೆ ಉತ್ತಮ ದರ ನೀಡದಿದ್ದರೆ ತಂಬಾಕು ಕಂಪನಿ ಗೋದಾಮು ಜಪ್ತಿ

ತಂಬಾಕು ಕಂಪನಿ ಪ್ರತಿನಿಧಿಗಳಿಗೆ ಸಚಿವ ಕೆ.ವೆಂಕಟೇಶ್ ಎಚ್ಚರಿಕೆ



ಮೈಸೂರಿನ ಜಿಪಂ ಸಭಾಂಗಣದಲ್ಲಿ ಜಿಲ್ಲಾಡಳಿತ, ತಂಬಾಕು ಮಂಡಳಿ ಹಾಗೂ ಕಾರ್ಖಾನೆ ಪ್ರತಿನಿಧಿಗಳ ಸಭೆ ನಡೆಸಲಾಯಿತು.

ಮೈಸೂರು,ಫೆ.23(ಜಿಎ)–ಮೈಸೂರು ಜಿಲ್ಲೆಯ ತಂಬಾಕು ಬೆಳೆಗಾರರಿಗೆ ನ್ಯಾಯಯುತವಾದ ದರವನ್ನು ಮಂಗಳವಾರ ಸಂಜೆಯೊಳಗೆ ನಿಗದಿಪಡಿಸಬೇಕು. ಇಲ್ಲವಾದರೆ, ಕಂಪನಿಗಳ ಗೋದಾಮು ಜಪ್ತಿ ಮಾಡುತ್ತೇವೆ ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಎಚ್ಚರಿಕೆ ನೀಡಿದ್ದಾರೆ.

ತಂಬಾಕು ಬೆಳೆ ಖರೀದಿಯಲ್ಲಿ ದಿಢೀರ್ ದರ ಕುಸಿತ ಕಂಡ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ತಂಬಾಕು ಮಂಡಳಿ ಹಾಗೂ ಕಾರ್ಖಾನೆ ಪ್ರತಿನಿಧಿಗಳಿಗೆ ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಐಟಿಸಿ ಕಂಪನಿಯು ಮೈಸೂರು ಜಿಲ್ಲೆಯ ತಂಬಾಕು ಬೆಳೆಗಾರರಿಂದ ನ್ಯಾಯಯುತ ಬೆಲೆ ಮೂಲಕ ಹರಾಜಿನಲ್ಲಿ ಉತ್ಪನ್ನ ಕೊಳ್ಳಬೇಕು. ರೈತರಿಗೆ ಅನ್ಯಾಯವಾದರೆ ಕಂಪನಿಯ ಗೋದಾಮುಗಳನ್ನು ಜಪ್ತಿ ಮಾಡಲಾಗುವುದು ಎಂದು ಸಚಿವರು ಎಚ್ಚರಿಸಿದರು.

ಸಭೆ ಆರಂಭದಲ್ಲಿ ಕಂಪನಿಗಳ ಪ್ರತಿನಿಧಿಗಳಿಗೆ ಸಂಕ್ರಾಂತಿ ಮುನ್ನ 320 ರೂ. ಇದ್ದ ಬೆಲೆ ದಿಢೀರ್ ಹೇಗೆ ಕುಸಿತಗೊಂಡಿತು. ಅದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಐಟಿಸಿ ಕಂಪನಿ ಪ್ರತಿನಿಧಿ, ಈ ಬಾರಿ ತಂಬಾಕು ಬೆಳೆ ಖರೀದಿಗೆ 320 ರೂ. ನಿಗದಿಪಡಿಸಿ ಖರೀದಿಸಲಾಗುತ್ತಿತ್ತು. ಕೇಂದ್ರ ಬಜೆಟ್ ಸಂದರ್ಭದಲ್ಲಿ ಖರೀದಿ ನಿಲ್ಲಿಸಿ, ರಜೆ ಮಾಡಲಾಯಿತು. ಬಜೆಟ್‌ನಲ್ಲಿ ಸಿಗರೇಟ್‌ನ ಜಿಎಸ್‌ಟಿ ಹೆಚ್ಚಳವಾದ ಹಿನ್ನೆಲೆಯಲ್ಲಿ ತಂಬಾಕು ದರ ಕುಸಿದಿದೆ ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಹರಾಜಿನಲ್ಲಿ ಬೆಲೆ ಕುಸಿತದಿಂದ ಈಗಾಗಲೇ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಕಂಪನಿಯು ಉದ್ದೇಶಪೂರ್ವಕವಾಗಿ ಕಡಿಮೆ ಬೆಲೆಗೆ ಹರಾಜು ಮಾಡುವುದು, ಕಡಿಮೆ ಉತ್ಪನ್ನ ಕೊಳ್ಳುವುದು ಸರಿಯಲ್ಲ. ಹರಾಜು ಆರಂಭಗೊಂಡ ದಿನ ಇದ್ದ ಬೆಲೆ ಅಥಾ ಅದಕ್ಕಿಂತ ಹೆಚ್ಚಿನ ದರದಲ್ಲಿ ಹರಾಜು ನಡೆಸಬೇಕು ಎಂದು ಸೂಚಿಸಿದರು.

ಆಂಧ್ರದ ರೈತರಿಗೆ 400 ರೂ. ನೀಡುತ್ತಿದ್ದೀರಾ. ನಮ್ಮ ರೈತರು ಅಷ್ಟು ಕೇಳುತ್ತಿಲ್ಲ. ಆದರೆ, ನೀವು ನ್ಯಾಯಯುತವಾದ ದರ ನೀಡಲು ಏಕೆ ಹಿಂದೇಟು ಹಾಕುತ್ತಿದ್ದೀರಾ. ನೀವು ಇಂದು ಸಂಜೆ ನಿಮ್ಮ ಸಂಸ್ಥೆಯ ಮುಖ್ಯಸ್ಥರೊಂದಿಗೆ ಮಾತನಾಡಿ ನಾಳೆ(ಮಂಗಳವಾರ) ಸಂಜೆಯೊಳಗೆ ಉತ್ತಮ ದರ ನಿಗದಿಪಡಿಸಬೇಕು. ಇಲ್ಲವಾದರೆ ನಿಮ್ಮ ಗೋದಾಮುಗಳನ್ನು ಜಪ್ತಿ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸಂಸದ ಯದುವೀರ್ ಒಡೆಯರ್ ಮಾತನಾಡಿ, ಕೇಂದ್ರ ಸರ್ಕಾರವು ಅಂತರರಾಷ್ಟ್ರೀಯ ಮಟ್ಟದಲ್ಲಿ ತಂಬಾಕು ಉತ್ಪನ್ನಗಳಿಗೆ ಯಾವ ಪ್ರಮಾಣದ ತೆರಿಗೆ ಇದೆಯೋ ಅಷ್ಟೇ ಪ್ರಮಾಣದ ತೆರಿಗೆಯನ್ನು ದೇಶದಲ್ಲಿ ವಿಧಿಸುತ್ತಿದೆ. ಹೀಗಾಗಿ ತೆರಿಗೆಯಲ್ಲಿ ವ್ಯತ್ಯಾಸವಾಗದು. ರೈತರನ್ನು ತಂಬಾಕಿನಿಂದ ಬೇರೆ ಬೆಳೆಗಳಿಗೆ ಪರಿವರ್ತಿಸುವ ಕುರಿತು ಪೈಲಟ್ ಯೋಜನೆಗಳ ಅವಶ್ಯಕತೆ ಇದೆ. ಈ ಸಂಬಂಧ ಚರ್ಚೆಗೆ ಕೇಂದ್ರ ಸರ್ಕಾರದ ಬಳಿಗೆ ನಿಯೋಗ ಕರೆದೊಯ್ಯಲಾಗುವುದು ಎಂದರು.

ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ಅವರಿಗೆ ಬರೆದ ಮನವಿಪತ್ರವನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿ, ಹರಾಜಿನಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ರೈತರು ಜಿಲ್ಲಾಡಳಿತದ ಗಮನಕ್ಕೆ ತಂದರು.

ಈ ವೇಳೆ ಕೆಲ ರೈತರು ಮಾತನಾಡಿ, ನಾವು ಕಷ್ಟಪಟ್ಟು ತಂಬಾಕು ಬೆಳೆಯುತ್ತಿದ್ದೇವೆ. ಪ್ರತಿಬಾರಿಯೂ ಕಂಪನಿಗಳು ಕಡಿಮೆ ಬೆಲೆ ತಂಬಾಕು ಖರೀದಿ ಮಾಡುತ್ತಿವೆ. ಈ ಬಾರಿ ಸಂಕ್ರಾಂತಿ ನಂತರ ಬೆಲೆಯಲ್ಲಿ ಬಾರೀ ಇಳಿಕೆ ಕಂಡು ಬಂದಿದೆ. ರಾಜ್ಯ ಸರ್ಕಾರ ತಂಬಾಕು ಬೆಳೆಯನ್ನು ನಿಷೇಧಿಸಿ, ರೈತರಿಗೆ ಪರಿಹಾರ ಘೋಷಿಸಿ ನಾವು ಪರ್ಯಾಯವಾದ ಬೆಳೆಯನ್ನು ಬೆಳೆಯುತ್ತೇವೆ ಎಂದು ಸಭೆಯಲ್ಲಿ ಅಳಲು ತೋಡಿಕೊಂಡರು.

ಸಭೆಯಲ್ಲಿ ಶಾಸಕರಾದ ಜಿ.ಡಿ.ಹರೀಶ್‌ಗೌಡ, ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಒ ಯುಕೇಶ್ ಕುಮಾರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ರಾಜ್ಯ ರೈತ ಸಂಘ, ತಂಬಾಕು ಮಂಡಳಿ ಹಾಗೂ ಐಟಿಸಿ ಕಂಪನಿಯ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡರು.

ಗರಂ ಆದ ಡಿಸಿ

“ಐಟಿಸಿ ಕಂಪನಿಯ ಪ್ರತಿನಿಧಿ, ನಮ್ಮ ಮುಖ್ಯ ಕಚೇರಿ ಗುಂಟೂರಿನಲ್ಲಿದೆ. ನೀವು ಅಲ್ಲಿ ಸಭೆ ಮಾಡಿ ಎಂದು ಹೇಳುತ್ತಿದ್ದಂತೆ ಡಿಸಿ ಲಕ್ಷ್ಮೀಕಾಂತ ರೆಡ್ಡಿ ಗರಂ ಆಗಿ ನಿಮ್ಮ ಮುಖ್ಯಸ್ಥರು ಇಲ್ಲಿಗೆ ಬರಬೇಕು. ನಾವು ಏಕೆ ಅಲ್ಲಿ ಬರೋಣ ಎಂದು ಖಾರವಾಗಿ ಉತ್ತರಿಸಿದರು.

ರೈತರಿಗೆ ಎಷ್ಟು ಬೆಳೆ ಬೆಳೆಯಬೇಕು ಎಂದು ಟಾರ್ಗೆಟ್ ನೀಡಿ ಅವರಿಗೆ ಬಿತ್ತನೆ ಬೀಜವನ್ನು ವಿತರಿಸುತ್ತೀರಾ, ಈಗ ಅವರಿಗೆ ಅಗತ್ಯ ಬೆಲೆ ನೀಡಲು ಹಿಂದೇಟು ಹಾಕುತ್ತಿದ್ದೀರಾ ಎಂದರು.

ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ, ಸಿಎಂ ಆದರೆ ನನಗೆ ಖುಷಿ

ದಲಿತ ಸಿಎಂ ಕೂಗಿಗೆ ಸಚಿವ ವೆಂಕಟೇಶ್ ಪ್ರತಿಕ್ರಿಯೆ

ಮೈಸೂರು,ಫೆ.23(ಜಿಎ)–ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ. ಸಿಎಂ ಆದರೆ ನನಗೆ ಖುಷಿ ಎಂದು ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ದಲಿತ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದಲಿತರು ಸಿಎಂ ಆಗಬೇಕು ಎಂಬ ವಿಚಾರದಲ್ಲಿ ಮಹದೇವಪ್ಪ ಹೆಸರು ಮುನ್ನೆಲೆಯಲ್ಲಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸದ್ಯ ಸಿಎಂ ಕುರ್ಚಿ ಖಾಲಿ ಇಲ್ಲ. ಖಾಲಿಯಾದ ಮೇಲೆ ಒಕ್ಕಲಿಗರೊ, ಲಿಂಗಾಯತರೊ, ದಲಿತರೊ ಸಿಎಂ ಅನ್ನೊ ಪ್ರಶ್ನೆ. ಸದ್ಯಕ್ಕೆ ಸಿಎಂ ಕುರ್ಚಿ ಖಾಲಿ ಇಲ್ಲ. ದಲಿತ ಸಿಎಂ ಕೂಗು ಪಕ್ಷದಲ್ಲಿ ಇದ್ಯೋ ಇಲ್ವೋ ನನಗೆ ಗೊತ್ತಿಲ್ಲ. ಮಹದೇವಪ್ಪ ಸಿಎಂ ಆದರೆ ನನಗೆ ಖುಷಿ ಇದೆ. ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ. ಹೀಗಾಗಿ ಆತ ಸಿಎಂ ಆಗಲಿ ಎಂದು ಹಾರೈಸುತ್ತೇನೆ ಎಂದರು.

ಸಫಾರಿ ಆರಂಭದ ಕುರಿತು ಮಾತನಾಡಿ, ಸರ್ಕಾರ ಸುಖಾ ಸುಮ್ಮನೆ ಸಫಾರಿಯನ್ನ ಮತ್ತೆ ಆರಂಭಿಸಿಲ್ಲ. ಈ ಬಗ್ಗೆ ತಜ್ಞರ ಸಮಿತಿ ಮಾಡಿ ಅವರ ವರದಿಯನ್ನು ಆಧರಿಸಿ ಸಫಾರಿಯನ್ನು ಆರಂಭಿಸಿದೆ. ರೈತರು ಪ್ರತಿಭಟನೆ ಮಾಡಿದರೆ ಅವರಿಗೆ ಏನು ಹೇಳಲು ಸಾಧ್ಯ ಎಂದು ತಿಳಿಸಿದರು.

ನಾನೊಂದಿಗೆ ಮಾತನಾಡು... ನಿನ್ನ ಮೊಬೈಲ್ ನಂಬರ್ ಕೊಡು...

ಗೃಹಿಣಿಗೆ ಕಿರುಕುಳ; ನೆರೆಮನೆ ಪೀಡಕನ ವಿರುದ್ಧ ಎಫ್‌ಐಆರ್

ಮೈಸೂರು,ಫೆ.23(ಪಿಎಂ)–ಮೊಬೈಲ್ ನಂಬರ್ ಕೊಡುವಂತೆ ಹಾಗೂ ಮಾತನಾಡಿಸುವಂತೆ ತಮ್ಮನ್ನು ಪೀಡಿಸುತ್ತಿದ್ದ ನೆರೆ ಮನೆಯವನ ವಿರುದ್ಧ ಗೃಹಿಣಿಯೊಬ್ಬರು ನೀಡಿದ ದೂರಿನನ್ವಯ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದೇವರಾಜು ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಈತನು ವರ್ಷದಿಂದ ಮನೆಯಿಂದ ಹೊರಗೆ ಹೋಗುವಾಗ ಹಿಂಬಾಲಿಸಿಕೊಂಡು ಬಂದು ಮಾತನಾಡಿಸುವಂತೆ ಹಾಗೂ ಮೊಬೈಲ್ ನಂಬರ್ ಕೊಡುವಂತೆ ಪೀಡಿಸುತ್ತಿದ್ದಾನೆ ಎಂದು ಗೃಹಿಣಿ ತಾವು ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

ಫೋನ್ ನಂಬರ್ ಕೊಡಲು ನಿರಾಕರಿಸಿದರೆ ನಿನ್ನ ಗಂಡನನ್ನು ಕೊಲೆ ಮಾಡುತ್ತೇನೆ. ನಾನಿರಬೇಕು ಇಲ್ಲ ನೀನಿರಬೇಕು ನಿನ್ನನಂತೂ ಬಿಡುವುದಿಲ್ಲವೆಂದು ಹೆದರಿಸುತ್ತಿದ್ದ. ನೀನು ಮಾಡುತ್ತಿರುವುದು ಸರಿಯಲ್ಲ ಎಂದು ಬುದ್ಧಿ ಹೇಳಿದರೂ ತೊಂದರೆ ಕೊಡುವುದು ನಿಲ್ಲಿಸಲಿಲ್ಲ. ಈ ವಿಚಾರವನ್ನು ಪತಿಗೆ ಹೇಳಿದರೆ ಅವರಿಗೆ ಈತ ಏನಾದರೂ ತೊಂದರೆ ಕೊಡಬಹುದು ಎಂದು ಏನು ಹೇಳಿರಲಿಲ್ಲ ಎಂದು ಗೃಹಿಣಿ ದೂರಿನಲ್ಲಿ ತಿಳಿಸಿದ್ದಾರೆ.

ಹೀಗಿರುವಾಗ ಫೆ.14ರಂದು ಬೆಳಗ್ಗೆ 11ರ ವೇಳೆಯಲ್ಲಿ ನಾನು ಮಾತ್ರೆ ತರಲು ಸ್ಕೂಟರ್‌ನಲ್ಲಿ ಮನೆಯಿಂದ ಹೊರಟಾಗ ದೇವರಾಜು ನನ್ನನ್ನು ತನ್ನ ಬೈಕಿನಲ್ಲಿ ಹಿಂಬಾಲಿಸಿಕೊಂಡು ಬಂದು ಯೋಗನರಸಿಂಹಸ್ವಾಮಿ ದೇವಸ್ಥಾನದ ಮುಂದಿರುವ ಪಾರ್ಕ್ ಬಳಿ ನನ್ನ ಸ್ಕೂಟರ್ ಅಡ್ಡಗಟ್ಟಿ ನಿನ್ನ ಮೊಬೈಲ್ ನಂಬರ್ ಕೊಡು ಎಂದು ಪೀಡಿಸಿದ್ದಲ್ಲದೆ, ಈ ಭೂಮಿ ಮೇಲೆ ನಾನಿರಬೇಕು, ಇಲ್ಲ ನಿನ್ನ ಗಂಡ ಇರಬೇಕೆಂದು ಬೆದರಿಕೆ ಹಾಕಿದ. ಕೊನೆಗೆ ಅಕ್ಕಪಕ್ಕದ ಜನರನ್ನು ನೋಡಿ ಆತ ಅಲ್ಲಿಂದ ಹೋದ. ಮತ್ತೆ ಕಾಳಿದಾಸ ರಸ್ತೆಯಲ್ಲಿ ನನ್ನ ಸ್ಕೂಟರ್ ಅಡ್ಡಗಟ್ಟಿ, ನಿನ್ನ ಮೊಬೈಲ್ ನಂಬರ್ ಕೊಡು ಎಂದು ಪೀಡಿಸಿದ. ನಾನು ಹೇಳಿದಂತೆ ಕೇಳದಿದ್ದರೆ ನಿನ್ನನ್ನು ಹಾಗೂ ನಿನ್ನ ಗಂಡನನ್ನು ಕೊಲ್ಲುತ್ತೇನೆ ಎಂದು ಬೆದರಿಕೆ ಹಾಕಿದ. ನಂತರ ಆತನಿಂದ ತಪ್ಪಿಸಿಕೊಂಡು ಮನೆಗೆ ಹೋದೆ. ಇದರಿಂದ ಹೊರಗಡೆ ಓಡಾಡಲು ಆತಂಕ ಉಂಟಾಗಿದೆ. ದೇವರಾಜು ಎಂಬಾತನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸದರಿ ಗೃಹಿಣಿಯು ಫೆ.20ರಂದು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿದೆ.

ನಿರ್ಮಾಣ ಕ್ಷೇತ್ರದಲ್ಲಿನ ಸಮಸ್ಯೆಗಳ ನಿವಾರಣೆಗೆ ಆಗ್ರಹಿಸಿ ಮೈಸೂರಲ್ಲಿ ಕ್ವಾರಿ ಕಾರ್ಮಿಕರ ಪ್ರತಿಭಟನೆ



ನಿರ್ಮಾಣ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಫೆಡರೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.23(ಎಂಟಿವೈ)–ನಿರ್ಮಾಣ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಫೆಡರೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿ, ನಿರ್ಮಾಣ ಕಾರ್ಮಿಕರಿಗೆ ಸರ್ಕಾರ ವಿವಿಧ ಸೌಲಭ್ಯ ಒದಗಿಸಿ, ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಕಾರ್ಮಿಕರಿಗೆ ಮಾರಕವಾಗಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಭಾರತೀಯ ಕಾರ್ಮಿಕರ ರಕ್ಷಣೆಗಾಗಿ ಸಂಸತ್ತು 1923 ರಿಂದ 1996ರ ನಡುವೆ ಜಾರಿಗೆ ತಂದ 29 ಕಾರ್ಮಿಕ ಕಾನೂನುಗಳನ್ನು ಪುನಃ ಸ್ಥಾಪಿಸಬೇಕು. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯ್ದೆ 1996 ಮತ್ತು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ, 1996ನ್ನು ಪುನಃಸ್ಥಾಪಿಸಿ ಪೂರ್ಣವಾಗಿ ಜಾರಿಗೆ ತರಬೇಕು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಪ್ರಾದೇಶಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತವಾದ ಪ್ರತ್ಯೇಕ ಕಾರ್ಮಿಕ ಕಾನೂನುಗಳನ್ನು ರೂಪಿಸುವ ಹಕ್ಕನ್ನು ಉಳಿಸಿಕೊಳ್ಳಲು ಅವಕಾಶ ನೀಡಬೇಕು. ಭಾರತದಾದ್ಯಂತ ಎಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು ಸಾಮಾಜಿಕ ಭದ್ರತೆ ಪಡೆಯಲು ಇಎಸ್‌ಐ, ಪಿಎಫ್ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ನೋಂದಾಯಿಸಿಕೊಂಡು ಸೌಲಭ್ಯ ನೀಡಲು ಆದೇಶಿಸಬೇಕು ಎಂದು ಮನವಿ ಮಾಡಿದರು.

ಎಲ್ಲಾ ನಿರ್ಮಾಣ ಕಾರ್ಮಿಕರಿಗೆ ಕನಿಷ್ಠ 36,000 ರೂ. ಮಾಸಿಕ ವೇತನ ನಿಗದಿಪಡಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಖಾತರಿಪಡಿಸಬೇಕು. 60 ವರ್ಷ ತುಂಬಿದ ನಂತರ ತಿಂಗಳಿಗೆ 6,000 ಕನಿಷ್ಠ ಪಿಂಚಣಿ ನೀಡಬೇಕು. ದೇಶಾದ್ಯಂತ ನಿರ್ಮಾಣ ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಠ 250 ದಿನಗಳ ಉದ್ಯೋಗದ ಖಾತರಿ ನೀಡಬೇಕು. ಬಿಲ್ಡರ್‌ಗಳಿಂದ ಸಂಗ್ರಹಿಸಲಾಗುವ ಕಲ್ಯಾಣ ಸೆಸ್ ಅನ್ನು ಶೇ.2ಕ್ಕೆ ಹೆಚ್ಚಿಸಬೇಕು. ಸರ್ಕಾರ ಕಲ್ಯಾಣ ಮಂಡಳಿಗೆ ನೀಡುವ ಮೊತ್ತಕ್ಕೆ ಸಮಾನ ಮೊತ್ತವನ್ನು ಕೊಡುಗೆಯಾಗಿ ನೀಡಬೇಕು. ನಿರ್ಮಾಣ ವಲಯದ ಮಹಿಳಾ ಕಾರ್ಮಿಕರಿಗೆ ಕಾನೂನಿನ ಪ್ರಕಾರ ಆರು ತಿಂಗಳ ವೇತನಸಹಿತ ಹೆರಿಗೆ ರಜೆ ನೀಡಬೇಕು. ಮನೆ ನಿವೇಶನ ಹೊಂದಿರದ ನಿರ್ಮಾಣ ಕಾರ್ಮಿಕರಿಗೆ ಮನೆ ಕಟ್ಟಲು ಭೂಮಿ ಮತ್ತು ಆರ್ಥಿಕ ನೆರವು ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಫೆಡರೇಷನ್ ಜಿಲ್ಲಾ ಕಾರ್ಯಾಧ್ಯಕ್ಷ ಎನ್.ಕೆ. ದೇವದಾಸ್, ವಿವಿಧ ಸಂಘಟನೆಗಳ ಮುಖಂಡರಾದ ಹೆಚ್.ಬಿ.ರಾಮಕೃಷ್ಣ, ಕೆ.ಜಿ.ಸೋಮರಾಜೇ ಅರಸ್, ಜೆ.ಶಿವಣ್ಣ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮಾ.6ರಂದು ಸ್ವ ಉದ್ಯೋಗ ಕೈಗೊಳ್ಳಲು ಮಾಹಿತಿ ಸೌಲಭ್ಯ

ಮೈಸೂರು,ಫೆ.23–ಮೈಸೂರು ಮಹಾನಗರಪಾಲಿಕೆಯ ಸಹಯೋಗದಲ್ಲಿ ಸೆಲ್ಕೋ ಸಂಸ್ಥೆಯ ವತಿಯಿಂದ ನಗರದ ವಿಕಲಚೇತನರು, ಬೀದಿ ಬದಿ ವ್ಯಾಪಾರಿಗಳು ಮತ್ತು ಸ್ವ ಸಹಾಯ ಸಂಘದ ಸದಸ್ಯರಿಗೆ ಸ್ವ ಉದ್ಯೋಗ ಕೈಗೊಳ್ಳಲು ಅಗತ್ಯವಾದ ಮಾಹಿತಿ, ತರಬೇತಿ, ಉತ್ಪನ್ನಗಳಿಗೆ ಮಾರುಕಟ್ಟೆ, ಪ್ಯಾಕಿಂಗ್, ಬ್ರಾಂಡಿಂಗ್ ಮತ್ತು ಆಧುನಿಕ ಯಂತ್ರೋಪಕರಣಗಳು, ಸೋಲಾರ್ ಆಧಾರಿತ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾಹಿತಿ ನೀಡುವ ಉದ್ದೇಶದಿಂದ ಮಾರ್ಚ್ 6ರಂದು ಬೆಳಗ್ಗೆ 10 ಗಂಟೆಗೆ ಪುರಭವನ (ಟೌನ್ ಹಾಲ್)ದಲ್ಲಿ ನಗರದ ಸಾರ್ವಜನಿಕರಿಗಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಗರದ ಅರ್ಹ ಬಡ ಜನರು, ವಿಕಲಚೇತನರು, ಬೀದಿಬದಿ ವ್ಯಾಪಾರಿಗಳು ಮತ್ತು ಸ್ವ-ಸಹಾಯ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಹಿತಿ ಹಾಗೂ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ಮಹಾ ನಗರಪಾಲಿಕೆ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಧುನಿಕ ವೈದ್ಯ ಪದ್ಧತಿಯಲ್ಲಿ ಆದಿವಾಸಿಗಳ ಪಾರಂಪರಿಕ ಜ್ಞಾನ ಅಳವಡಿಕೆ ಅತ್ಯವಶ್ಯ

ಕಾರ್ಯಾಗಾರದಲ್ಲಿ ಚಾಮರಾಜನಗರ ವಿವಿ ಕುಲಪತಿ ಎಂಆರ್.ಗಂಗಾಧರ್ ಅಭಿಪ್ರಾಯ



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಬುಡಕಟ್ಟು ಜನರ ಆರೋಗ್ಯ ಮತ್ತು ಆರೋಗ್ಯ ರಕ್ಷಣಾ ಪದ್ಧತಿಗಳ ಮೇಲೆ ಜಾಗತೀಕರಣ ಮತ್ತು ಸಾಂಸ್ಕೃತಿಕ ನಂಬಿಕೆಗಳ ಪ್ರಭಾವ ಕುರಿತು ಕಾರ್ಯಾಗಾರವನ್ನು ಚಾಮರಾಜನಗರ ವಿವಿ ಕುಲಪತಿ ಎಂ.ಆರ್.ಗಂಗಾಧರ್ ಉದ್ಘಾಟಿಸಿದರು.

ಮೈಸೂರು,ಫೆ.23(ಜಿಎ)– ಆದಿವಾಸಿಗಳ ಪಾರಂಪರಿಕ ಜ್ಞಾನವನ್ನು ನಮ್ಮ ಆಧುನಿಕ ವೈದ್ಯ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಎಂ.ಆರ್. ಗಂಗಾಧರ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಬುಡಕಟ್ಟು ಜನರ ಆರೋಗ್ಯ ಮತ್ತು ಆರೋಗ್ಯ ರಕ್ಷಾ ಪದ್ಧತಿಗಳ ಮೇಲೆ ಜಾಗತೀಕರಣ ಮತ್ತು ಸಾಂಸ್ಕೃತಿಕ ನಂಬಿಕೆಗಳ ಪ್ರಭಾವ ಕುರಿತು ನಡೆದ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು.

ಆದಿವಾಸಿಗಳು ಪ್ರಪಂಚದ ಅತ್ಯಂತ ಪುರಾತನ ಸಂಸ್ಕೃತಿ ಮತ್ತು ಜ್ಞಾನದ ವಾರಸುದಾರರು. ಜಾಗತಿಕವಾಗಿ ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಕೆನಡಾ ದೇಶಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಆದಿವಾಸಿಗಳ ಪಾಲುಗೊಳ್ಳುವಿಕೆ ಇದೆ. ಆದರೆ ಭಾರತದಲ್ಲಿ ಬಹಳ ಸಣ್ಣ ಪ್ರಮಾಣದಲ್ಲಿ ಇದೆ. ಆದಿವಾಸಿಗಳ ಪಾರಂಪರಿಕ ಜ್ಞಾನವನ್ನು ನಮ್ಮ ಆಧುನಿಕ ವೈದ್ಯ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ ಎಂದರು.

ಆರೋಗ್ಯ ಎಂದರೆ ಶರೀರ, ಮನಸ್ಸು ಸದೃಢವಾಗಿರುವುದಕ್ಕೆ ಅಲ್ಲ. ಅದು ಬದುಕಿನ ಜೀವನ ಕ್ರಮವಾಗಿದೆ. ಗಿಡಮೂಲಿಕೆ ಔಷಧಗಳು, ಧಾರ್ಮಿಕ ಚಿಕಿತ್ಸೆ, ಆಧ್ಯಾತ್ಮಿಕ ಸಮಾರಂಭಗಳು ಸಮುದಾಯ ಆಧಾರಿತ ಆರೈಕೆ. ಈ ಸಮಗ್ರ ವಿಧಾನವು ಆಧುನಿಕ ಜೈವಿಕ ವೈದ್ಯಕೀಯ ವ್ಯವಸ್ಥೆಗಳಿಗಿಂತ ಭಿನ್ನವಾಗಿವೆ. ಜಾಗತೀಕರಣವು ಹಲವಾರು ಸುಧಾರಣೆಗಳನ್ನು ತಂದಿದೆ. ಸರ್ಕಾರಿ ಯೋಜನೆಗಳು ದೂರದ ಪ್ರದೇಶಗಳನ್ನು ತಲುಪುತ್ತವೆ. ಮೊಬೈಲ್ ಚಿಕಿತ್ಸಾಲಯಗಳು ತರಬೇತಿ ಪಡೆದ ವೈದ್ಯರು ಬುಡಕಟ್ಟು ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಸಹಪ್ರಾಧ್ಯಾಪಕರಾದ ಧಾರವಾಡದ ಡಾ.ಜೈ ಪ್ರಭಾಕರ್ ಎಸ್.ಸಿ. ಮಾತನಾಡಿ, ಆದಿವಾಸಿಗಳ ಆರೋಗ್ಯದ ಬಗ್ಗೆ ಬಹಳಷ್ಟು ಸಂಶೋಧನೆಗಳು ನಡೆಯುತ್ತಿವೆ. ಇದರಲ್ಲಿ ಧಾರ್ಮಿಕ ನಂಬಿಕೆಗಳಿಗೆ ಬೆಲೆ ಕೊಡಬೇಕು. ಜಾಗತೀಕರಣ ಬೇಕು, ದೇಶೀಯತೆಯನ್ನು ಒಳಗೊಂಡ ಜಾಗತೀಕರಣ ಬೇಕು. ಆದಿವಾಸಿಗಳಲ್ಲಿ ಅಪೌಷ್ಟಿಕತೆ ಹೆಚ್ಚಾಗಿದ್ದು, ಬದಲಾದ ಜೀವನಶೈಲಿಯಿಂದ ಹಲವಾರು ಕಾಯಿಲೆಗಳು ಹೆಚ್ಚಾಗುತ್ತಿವೆ. ಆದಿವಾಸಿಗಳ ಜಾನಪದ ವೈದ್ಯ ಪದ್ಧತಿಯನ್ನು ಪೋಷಿಸಬೇಕಾಗಿದೆ ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾತನಾಡಿ, ಆದಿವಾಸಿಗಳಿಗೆ ಔಷಧಿ ಮೇಲೆ ಆಳವಾದ ಜ್ಞಾನವಿದೆ. ಆಯುರ್ವೇದ ಪದ್ಧತಿ ಹಾಗೂ ನಾಟಿ ವೈದ್ಯ ಪದ್ಧತಿಯನ್ನು ಸಾಮಾನ್ಯ ಜನರಿಗೆ ಹೇಗೆ ಪರಿಚಯಿಸಬಹುದು ಎಂಬುದರ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚಿಸಬೇಕಾಗಿದೆ. ಜಿಲ್ಲೆ ಹಾಗೂ ಬೇರೆ ಬೇರೆ ರಾಜ್ಯಗಳಿಂದ ಕಾರ್ಯಾಗಾರಕ್ಕೆ ಬಂದಿರುವುದರಿಂದ ಪ್ರಾದೇಶಿಕ ಬುಡಕಟ್ಟು ಸಮುದಾಯದವರ ವಿವಿಧ ವೈದ್ಯಪದ್ಧತಿಗಳನ್ನು ತಿಳಿದುಕೊಳ್ಳಲು ಇದೊಂದು ಸದಾವಕಾಶ. ಈ ಕಾರ್ಯಾಗಾರದ ಚರ್ಚೆ ಆರೋಗ್ಯಕರವಾಗಿರಲಿ, ಆರೋಗ್ಯದ ಮೇಲೆ ಇರಲಿ ಎಂದರು.

ಕಾರ್ಯಾಗಾರದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕಂಡಿಕೆರೆ ರಾಮಯ್ಯ ಶ್ರೀಧರ್, ಸಂಶೋಧನಾಧಿಕಾರಿ ಶಿವಕುಮಾರ್ ಡಾ.ಕೃಷ್ಣಮೂರ್ತಿ, ಕ್ಷೇತ್ರ ಸಂಶೋಧಕ ಡಾ.ಕೆ.ಡಿ.ದಿನೇಶ್, ಡಾ.ಡಿ.ಸಿ.ರಾಮಕೃಷ್ಣಯ್ಯ, ಡಾ.ರವಿಕುಮಾರ್, ಡಾ.ಮೋಹನ್‌ಕುಮಾರ್, ಕಚೇರಿ ಅಧೀಕ್ಷಕಿ ಎಂ.ವಿ.ನಾಗರತ್ನ ಉಪಸ್ಥಿತರಿದ್ದರು.

ಡಾ.ಬಂಜೆಗೆರೆ ಜಯಪ್ರಕಾಶ್ ಕೃತಿಗಳು ಸಾಂಸ್ಕೃತಿಕ ಮಹತ್ವ ಪಡೆದಿವೆ

ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಮಹೇಶ್ ಹರವೆ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಭಾಂಗಣದಲ್ಲಿ ಸೋಮವಾರ ಅರಿವು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಆಯೋಜಿಸಿದ್ದ ಡಾ.ಬಂಜೆಗೆರೆ ಜಯಪ್ರಕಾಶ್ ಅವರ ಅನುವಾದ ಕೃತಿಗಳ ಚಿಂತನ ಮಂಥನ ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕ ಬಿ.ಮಹೇಶ್ ಹರವೆ ಉದ್ಘಾಟಿಸಿದರು.

ಮೈಸೂರು, ಫೆ.23(ಬಿಎಲ್‌ಯು)–ವಿಮರ್ಶಕ ಡಾ.ಬಂಜೆಗೆರೆ ಜಯಪ್ರಕಾಶ್ ಅವರ ಕೃತಿಗಳು ಸಾಂಸ್ಕೃತಿಕ ಮಹತ್ವ ಪಡೆದಿದ್ದು, ಜಾತ್ಯಾತೀತ ಸಮಾಜ ನಿರ್ಮಾಣದ ಸಂದೇಶಗಳನ್ನು ಸಾರುತ್ತವೆ ಎಂದು ಸಂಸ್ಕೃತಿ ಚಿಂತಕ ಬಿ.ಮಹೇಶ್ ಹರವೆ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಭಾಂಗಣದಲ್ಲಿ ಸೋಮವಾರ ಅರಿವು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಆಯೋಜಿಸಿದ್ದ ಡಾ.ಬಂಜೆಗೆರೆ ಜಯಪ್ರಕಾಶ್ ಅವರ ಅನುವಾದ ಕೃತಿಗಳ ಚಿಂತನ–ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಭಿನ್ನ ಚರಿತ್ರೆ ಕಟ್ಟಿಕೊಡುವ ಜಯಪ್ರಕಾಶ್ ಅವರ ಕೃತಿಗಳು ಶೋಷಿತರ ಆಲೋಚನೆಗಳನ್ನು ಎಳೆ ಎಳೆಯಾಗಿ ಬಿಡಿಸಿಡುತ್ತದೆ ಎಂದು ಹೇಳಿದರು.

ಇತಿಹಾಸದ ಮರು ಚಿಂತನೆ, ದೂರದರ್ಶಿತ್ವ, ಮಾನವ ಹಕ್ಕುಗಳ ನೆಲೆಯನ್ನು ವಿವರಿಸುತ್ತದೆ. 19 ಮತ್ತು 20 ಶತಮಾನದ ಭಕ್ತಿ ಚಳವಳಿ ಹಾಗೂ ರಾಜಕೀಯ ಚಳವಳಿಗಳು ದಮನಿರತ ವರ್ಗದವರ ಪರವಾಗಿ ಯಾವ ರೀತಿಯ ಹೋರಾಟ ಮಾಡಿವೆ ಎಂಬುದನ್ನು ಕೂಡ ವಿವರಿಸುತ್ತದೆ ಎಂದು ಮಹೇಶ್ ಹರವೆ ಹೇಳಿದರು.

ನಾನು ಸಾಮಾನ್ಯವಾಗಿ ವೇಗಗತಿಯ ಓದುಗ, ಆದರೆ ಜಯಪ್ರಕಾಶ್ ಅವರ ಬೇಗಂಪುರ ಅನುವಾದ ಕೃತಿ ಓದುವ ಸನ್ನಿವೇಶದಲ್ಲಿ ಹಲವು ಆಲೋಚನೆಗಳು ತಲೆಯಲ್ಲಿ ಹೊಕ್ಕು ನಿಧಾನಗತಿಯ ಓದಿನ ಬಗ್ಗೆ ಪರಿಣಾಮ ಬೀರಿತು. ಜಾತಿ ರಹಿತ, ತೆರಿಗೆ ರಹಿತ ವ್ಯವಸ್ಥೆಯ ಬಗ್ಗೆ ಅವರ ಕೃತಿ ಅಭಿಮತ ವ್ಯಕ್ತಪಡಿಸುತ್ತದೆ ಎಂದರು.

ದೇವರು ದೇವಾಲಯದಲ್ಲಿ ಇಲ್ಲ, ನಮ್ಮಲ್ಲೇ, ನಮ್ಮ ಆಲೋಚನೆಯಲ್ಲೇ ಇದ್ದಾನೆ ಎಂದು ಹೇಳುತ್ತಾರೆ. ಈ ಮೂಲಕ ಪುರೋಹಿತ ಶಾಹಿ ರಹಿತ ಸಮಾಜ ನಿರ್ಮಾಣವನ್ನು ಒತ್ತಿ ಹೇಳುತ್ತಾರೆ. ವ್ಯವಸ್ಥೆಯ ಹಲವು ಸಾಂಪ್ರದಾಯಿಕ ಮಜಲುಗಳ ಬಗ್ಗೆ ಪ್ರತಿರೋಧ ವ್ಯಕ್ತಪಡಿಸಿ, ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದಾರೆ ಎಂದು ತಿಳಿಸಿದರು.

ಸಂಸ್ಕೃತವೇ ಜ್ಞಾನದ ಬೆಳಕು ಎಂಬ ದಿನಗಳಲ್ಲಿ ಜನರ ಆಡು ಭಾಷೆಯ ಪರಿಣಾಮವನ್ನು ತಿಳಿಸಿ, ಅದರ ವಿವಿಧ ಹಂತಗಳ ಬೆಳವಣಿಗೆಗಳನ್ನು ಬಂಜೆಗೆರೆ ಜಯಪ್ರಕಾಶ್ ಬಿಡಿಸಿಟ್ಟಿದ್ದಾರೆ ಎಂದು ಮಹೇಶ್ ಹರವೆ ಅಭಿಪ್ರಾಯಪಟ್ಟರು.

ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಮಾನವ ಕುಲಶಾಸ್ತ್ರಜ್ಞ ಡಾ.ಆರಡಿ ಮಲ್ಲಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 24 ಫೆಬ್ರವರಿ 2026

ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ

ನೋಡೆಲ್ ಅಧಿಕಾರಿಗಳ ನೇಮಕ



ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಜಿಲ್ಲಾಧಿಕಾರಿ ಡಾ.ಕುಮಾರ ಅಧಿಕಾರಿಗಳ ಸಭೆ ನಡೆಸಿದರು

ಮಂಡ್ಯ ಫೆ23–ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ತಕ್ಷಣವೇ ಬೀದಿ ನಾಯಿಗಳ ನಿಯಂತ್ರಣಕ್ಕೆ ಕಾರ್ಯೋನ್ಮುಖರಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಆದೇಶಿಸಿದ್ದಾರೆ

ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಬೀದಿ ನಾಯಿಗಳ ಉಪಟಳ ತಡೆಯಲು ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಸಾರ್ವಜನಿಕ ಕಟ್ಟಡಗಳ ಸುತ್ತ ಆವರಣ ಗೋಡೆ ನಿರ್ಮಿಸಬೇಕು. ಬಸ್ ನಿಲ್ದಾಣದಲ್ಲಿ ಬೀದಿ ನಾಯಿಗಳು ಪ್ರವೇಶಿಸದಂತೆ, ಎಲ್ಲೆಂದರಲ್ಲಿ ತಿನಿಸು ಪದಾರ್ಥಗಳನ್ನು ಎಸೆಯದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಆಹಾರದ ತ್ಯಾಜ್ಯಗಳು ನಾಯಿಗಳನ್ನು ಆಕರ್ಷಿಸುತ್ತವೆ, ಆದ್ದರಿಂದ ಕಸದ ಡಬ್ಬಿಗಳನ್ನು ಮುಚ್ಚಿಡಿ ಮತ್ತು ತ್ಯಾಜ್ಯವನ್ನು ಪ್ರತಿದಿನ ವಿಲೇವಾರಿ ಮಾಡಿ ಎಂದು ತಿಳಿಸಿದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನರಸಿಂಹ ಮೂರ್ತಿ, ಪಶುಸಂಗೋಪನೆ ಇಲಾಖೆಯ ಉಪ ನಿರ್ದೇಶಕ ಶಿವಲಿಂಗಯ್ಯ, ನಗರಸಭೆ ಆಯುಕ್ತೆ ಪಂಪಶ್ರೀ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ



ರಾಯಲ್ ಉತ್ಸವದಲ್ಲಿ ನಿಶ್ಚಲಾನಂದನಾಥ ಸ್ವಾಮೀಜಿಯವರನ್ನು ಗೌರವಿಸಲಾಯಿತು.

ಭಾರತೀನಗರ, ಫೆ.23– ಗ್ರಾಮೀಣ ಭಾಗದ ರೈತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅವಶ್ಯಕವಾಗಿದೆ. ವಿದ್ಯಾವಂತ ಜನರೇ ಈ ದೇಶದ ಆಸ್ತಿ. ವಿದ್ಯೆಯನ್ನು ಯಾರೂ ಕದಿಯಲಾಗದು ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥಸ್ವಾಮೀಜಿ ತಿಳಿಸಿದ್ದಾರೆ.

ಭಾರತೀನಗರದ ರಾಯಲ್ ಓಕ್ಸ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ರಾಯಲ್ ಉತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಅವರು, ಪ್ರಾಥಮಿಕ ಹಂತದಲ್ಲಿ ಮಕ್ಕಳ ಅಭಿರುಚಿಗೆ ತಕ್ಕಂತೆ ಶಿಕ್ಷಣವನ್ನು ನೀಡಿದಾಗ ಅವರ ಕಲಿಕೆಗೆ ಸುಲಭವಾಗುತ್ತದೆ. ಮಕ್ಕಳ ಮೇಲೆ ಅತಿಯಾದ ಒತ್ತಡ ಹಾಕಬಾರದು ಇದರಿಂದ ಮಗು ಮಾನಸಿಕವಾಗಿ ಕುಗ್ಗಿ ಹೋಗಿ, ಖಿನ್ನತೆಗೊಳಗಾಗುತ್ತಾರೆ. ಇದರ ಬದಲು ಮಗುವಿಗೆ ಇಷ್ಟವಾಗುವ ರೀತಿಯಲ್ಲಿ ಕಲಿಕೆ ರೂಪಿಸಬೇಕು. ಮಾನವೀಯ ಸಂಸ್ಕಾರ, ಸಂಸ್ಕೃತಿಮೌಲ್ಯವಾದ ಶಿಕ್ಷಣ ದೊರಕಿಸಿಕೊಡಬೇಕೆಂದು ಹೇಳಿದರು

ಗುರು–ಹಿರಿಯರಿಗೆ ಸಿಗಬೇಕಾದ ಗೌರವಗಳು ಕಡಿಮೆಯಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಸಂಬಂಧಗಳ ಕೊಂಡಿ ಕಳಚಿ ಹುಚ್ಚರ ಸಂತೆಯಾಗುತ್ತಿವೆ. ಹಳ್ಳಿಗಳಲ್ಲಿ ವಾಸಮಾಡುವುದೇ ಕಷ್ಟಕರ ವಾತಾವರಣ ಸೃಷ್ಟಿಯಾಗುತ್ತಿದೆ, ವಿದ್ಯಾರ್ಥಿಗಳು ಸಂಸ್ಕಾರದ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಶಾಸಕ ಕೆ.ಎಂ.ಉದಯ್ ಮಾತನಾಡಿ, ಹಿಂದೆ ತಮ್ಮ ಮಕ್ಕಳಿಗಾಗಿ ಆಸ್ತಿಯನ್ನು ಸಂಪಾದಿಸಲಾಗುತ್ತಿತ್ತು. ಆದರೆ ಇಂದು ಬದಲಾದ ಸನ್ನಿವೇಶದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಮೂಲಕ ಮಕ್ಕಳನ್ನೇ ಆಸ್ತಿಯನ್ನಾಗಿ ಪರಿವರ್ತಿಸಲಾಗುತ್ತಿದ್ದು, ಶಿಕ್ಷಣ ತಮ್ಮದೇ ಆದ ಮಹತ್ವವನ್ನು ಪಡೆದುಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಬಿ. ಧನಂಜಯ್, ಕನ್ನಡ ಸೇನೆ ಜಿಲ್ಲಾಧ್ಯಕ್ಷ ಎಚ್.ಸಿ. ಮಂಜುನಾಥ್, ಭಾರತೀನಗರ ಕೆನರಾ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕ ಎಚ್.ಜಿ. ಸೋಮಪ್ಪ, ಜಿ.ಪಂ ಮಾಜಿ ಸದಸ್ಯ ಎ.ಎಸ್. ರಾಜೀವ್, ಶಾಲೆಯ ಗೌರವಾಧ್ಯಕ್ಷ ಎಸ್.ನಾಗರಾಜು, ಅಧ್ಯಕ್ಷ ಡಿ.ಆರ್.ಶಿವರಾಜ್, ಕಾರ್ಯದರ್ಶಿ ಬಿ.ಆರ್.ಸುಮನ್, ಸಹಕಾರ್ಯದರ್ಶಿ ಸುಶ್ಮಿತ ಸುಮನ್, ಮುಖ್ಯ ಶಿಕ್ಷಕಿ ಡಿ.ಎಂ. ನಂದಿನಿ ಹಾಗೂ ಶಾಲೆಯ ನಿರ್ದೇಶಕರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾವೇರಿ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಇ–ಸ್ಟಾಂಪ್ ಸೌಲಭ್ಯ



ಗಣಕಯಂತ್ರವನ್ನು ಉದ್ಘಾಟಿಸಿ ಇ–ಸ್ಟಾಂಪ್ ಸೌಲಭ್ಯಕ್ಕೆ ಸಂಘದ ಅಧ್ಯಕ್ಷ ಎಸ್.ಎಚ್.ಶಿವರಾಜು ಚಾಲನೆ ನೀಡಿದರು.

ಭಾರತೀನಗರ: ಕಾವೇರಿ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಇ–ಸ್ಟಾಂಪ್ ಸೌಲಭ್ಯವನ್ನು ಒದಗಿಸಲಾಗಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಕಾವೇರಿ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಶೆಟ್ಟಹಳ್ಳಿ ಎಸ್.ಎಚ್.ಶಿವರಾಜು ತಿಳಿಸಿದರು.

ಕಾವೇರಿ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಕಂಪ್ಯೂಟರ್ ಉದ್ಘಾಟಿಸಿ ಮಾತನಾಡಿದ ಅವರು, ಸಂಘದಿಂದ ಸಾಲಸೌಲಭ್ಯ, ವ್ಯಾಪಾರ ಸಾಲವನ್ನು ನೀಡಲಾಗುತ್ತಿದ್ದು ಇದರ ಜೊತೆಗೆ ಇ–ಸ್ಟಾಂಪ್ ಸೌಲಭ್ಯ, ವೃದ್ಧಾಪ್ಯ ವೇತನ, ಎಂಆರ್, ಆರ್‌ಟಿಸಿ, ಡ್ರೈವಿಂಗ್ ಲೈಸನ್ಸ್, ಇನ್ಸೂರೆನ್ಸ್, ರೇಷನ್ ಕಾರ್ಡ್ ಸೇರಿದಂತೆ ಅನೇಕ ಸೌಲಭ್ಯಗಳನ್ನು ಸಾರ್ವಜನಿಕರಿಗೆ ನೀಡಲು ಮುಂದಾಗಿದ್ದೇವೆ. ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು. ಈಗಾಗಲೇ ಸಹಕಾರ ಸಂಘದಿಂದ ಹಸು, ಎಮ್ಮೆ, ಕುರಿಗಳಿಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದ್ದು ಇದರೊಂದಿಗೆ ಸರ್ಕಾರದಿಂದ ಬರುವಂತಹ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುವುದು ಎಂದರು.

ನಿರ್ದೇಶಕ ಕೆ.ಟಿ.ಗಿರೀಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆರ್‌ಟಿಸಿ, ವೃದ್ಧಾಪ್ಯ ವೇತನ, ಡ್ರೈವಿಂಗ್ ಲೈಸನ್ಸ್, ಇನ್ಸೂರೆನ್ಸ್ ಮಾಡಿಸಲು ಪಟ್ಟಣಕ್ಕೆ ಅಲೆದಾಡಬೇಕಾದ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ ಗ್ರಾಮ ಒನ್‌ದರಡಿಯಲ್ಲಿ ಸಿಗುವಂತಹ ಸೌಲಭ್ಯಗಳನ್ನು ನಮ್ಮ ಸಂಘದ ಕಚೇರಿಯಲ್ಲಿ ನೀಡಲಾಗುತ್ತಿದೆ ಎಂದರು.

ಸಂಘದ ಉಪಾಧ್ಯಕ್ಷ ಬಿ.ಎನ್.ಚಿಕ್ಕಹನುಮೇಗೌಡ, ನಿರ್ದೇಶಕ ಕೆ.ಎಲ್.ಶಿವರಾಮು, ಬಿ.ಎಸ್.ರವೀಂದ್ರ, ಹೆಚ್.ಎಂ.ಶಿವರಾಜು, ಶಿವಲಿಂಗೇಗೌಡ, ತೈಲಪ್ಪ, ಆರ್.ಸವಿತ, ಎ.ಜಿ.ಸುನೀತ, ಬಿ.ಎಸ್.ಬಸವರಾಜು, ಬಿ. ನಾಗರಾಜು, ಸಿಇಓ ರಮೇಶ್, ಗುಮಾಸ್ತೆ ಸುನೀತ ಮೊದಲಾದವರಿದ್ದರು.

ಕೇಂಬ್ರಿಡ್ಜ್ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಪೋಷಕರಿಗೆ ಪಾದಪೂಜೆ

ಕೆ.ಆರ್.ಪೇಟೆ: ಪಟ್ಟಣದ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆಯಲ್ಲಿ ಶಾರದಾ ಪೂಜೆ ಮತ್ತು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಂದ ತಂದೆ–ತಾಯಿಗಳಿಗೆ ಪಾದಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆ ಕಾರ್ಯದರ್ಶಿ ಶಿವಕುಮಾರ್ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಮಹತ್ವ ಪಡೆದಿರುವ ಶಾರದಾ ಪೂಜೆಯಲ್ಲಿ ವಿದ್ಯಾರ್ಥಿಗಳು, ಸರಸ್ವತಿಯನ್ನು ಪೂಜಿಸಿ, ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಪ್ರಾರ್ಥಿಸಬೇಕೆಂದು ಹೇಳಿದರು. ಮಕ್ಕಳು ತಮ್ಮ ಪೋಷಕರಿಗೆ ಗೌರವ ಸಲ್ಲಿಸಲು ಮತ್ತು ಅವರ ಆಶೀರ್ವಾದ ಪಡೆಯಲು ಒಂದು ಅವಕಾಶವಾಗಿದೆ. ಮಕ್ಕಳಿಗೆ ಜೀವನದ ಮೊದಲ ಗುರುವಾಗಿರುವ ಪೋಷಕರ ಮಾರ್ಗ ದರ್ಶನ ಮಕ್ಕಳ ಬೆಳವಣಿಗೆಗೆ ಅತ್ಯಗತ್ಯವಾಗಿದೆ. ಎಂದರು.

ಸಭೆಯಲ್ಲಿ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಪಿ.ವಿ.ರಮೇಶ್, ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಶೀಲಾ ಶಿವಕುಮಾರ್, ಮುಖ್ಯ ಶಿಕ್ಷಕಿ ರಹಿಲಾಬಾನು, ರಶ್ಮಿ, ಶಿಕ್ಷಕರಾದ ಪ್ರಕಾಶ್, ಸಂಧ್ಯಾ, ಪ್ರೀತಿ, ಶ್ರೀಕಾಂತ, ಶಬಾನಬಾನು, ಜಯಶ್ರೀ. ಚೈತ್ರ, ಸಾಮ್ಯ, ಭವ್ಯ, ಜಯಶ್ರೀ ಎನ್, ರಮ್ಯಾ, ಮದೀನಾ, ಮಹಾಲಕ್ಷ್ಮಿ, ಪಿ.ಎಸ್. ಚಿರಾಗ್ ಇತರರಿದ್ದರು.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪೋಷಕರಿಗೆ ಪಾದಪೂಜೆ ಹಮ್ಮಿಕೊಳ್ಳಲಾಗಿತ್ತು.

ಕೋಡಿಶೆಟ್ಟಿಪುರ ಮಹಿಳಾ ಡೇರಿಗೆ ಜೆಡಿಎಸ್ ಸಾರಥ್ಯ



ಡೇರಿ ಚುನಾವಣೆಯಲ್ಲಿ ಗೆದ್ದ ಜಾ.ದಳದ ಸದಸ್ಯರು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯರವರನ್ನು ಸನ್ಮಾನಿಸಿದರು.

ಶ್ರೀರಂಗಪಟ್ಟಣ, ಫೆ.23–ತಾಲೂಕಿನ ಕೋಡಿಶೆಟ್ಟಿಪುರ ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಚುನಾವಣೆಯಲ್ಲಿ 10 ಅಭ್ಯರ್ಥಿಗಳ ಪೈಕಿ 9 ಮಂದಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳೇ ಗೆಲವು ಸಾಧಿಸಿದ್ದಾರೆ

ಸುಕನ್ಯ ದಿನೇಶ್ ಕುಮಾರ್, ಗಿರಿಜಮ್ಮ ಕರಿಗೌಡ, ನಿರ್ಮಲ ಚನ್ನೇಗೌಡ, ಜಯಮ್ಮ ಮಂಜು, ಸತ್ಯಮ್ಮ ನಂಜೇಗೌಡ, ಸವಿತಾ ಸ್ವಾಮಿ, ಭವ್ಯ ಜವರೇಗೌಡ, ಶಾಂತಮ್ಮ ಕನಕರಾಜು, ಸುಶೀಲಮ್ಮ ಮಲ್ಲೇಶ್ ಗೆಲುವು ಸಾಧಿಸಿದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾಗಿದ್ದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆಂಪಮ್ಮ ಹನುಮಂತೇಗೌಡ ಗೆಲುವು ಸಾಧಿಸಿದ್ದಾರೆ

ಜೆಡಿಎಸ್‌ನ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಕೋಡಿಶೆಟ್ಟಿಪುರ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಗೆದ್ದಂತಹ ನಿರ್ದೇಶಕರನ್ನು ತಮ್ಮ ನಿವಾಸಕ್ಕೆ ಕರೆಸಿ ಅಭಿನಂದಿಸಿದರು,

ಇದೇ ಸಂದರ್ಭದಲ್ಲಿ ಮಾತನಾಡಿ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ನಂಬಿಕೊಂಡು ಸಾಕಷ್ಟು ಕುಟುಂಬಗಳು, ಜೀವನ ನಡೆಸುತ್ತಿದ್ದಾರೆ, ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿರ್ದೇಶಕರು ಕೆಲಸ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಸಮಾಜ ಸೇವಕಿ ಶೀಳನೆರೆ ನಿಂಗಮ್ಮ ನಿಧನ



ಕೆ.ಆರ್.ಪೇಟೆ, ಫೆ.23– ತಾಲೂಕಿನ ಹಿರಿಯ ಮಹಿಳಾ ಹೋರಾಟಗಾರ್ತಿ, ಸಮಾಜ ಸೇವಕಿ ಶೀಳನೆರೆ ನಿಂಗಮ್ಮ(98) ಅವರು ಸೋಮವಾರ ನಿಧನರಾದರು.

ಇವರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಶೀಳನೆರೆ ಸೋಮಶೇಖರ್ ಸೇರಿದಂತೆ ಆರು ಮಂದಿ ಪುತ್ರರು, ಮೂವರು ಪುತ್ರಿಯರು, ರಾಜ್ಯ ಜೆಡಿಎಸ್ ಮುಖಂಡ ರಾಜೇನಹಳ್ಳಿ ಕುಮಾರಸ್ವಾಮಿ ಸೇರಿದಂತೆ ಅನೇಕ ಮೊಮ್ಮಕ್ಕಳು, ಮರಿಮಕ್ಕಳು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಿಂಗಮ್ಮರ ಪತಿ ಕೆ.ಟಿ. ಕೆಂಪಲಿಂಗೇಗೌಡ ಪಾಂಡವಪುರ ಉಪ ವಿಭಾಗಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು. ಮಂಗಳವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ನಿಂಗಮ್ಮರ ನಿಧನಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಮಾಜಿ ಸಚಿವರಾದ ಡಾ.ಕೆ.ಸಿ.ನಾರಾಯಣ ಗೌಡ, ಸಿ.ಎಸ್.ಪುಟ್ಟರಾಜು, ಶಾಸಕ ಹೆಚ್.ಟಿ.ಮಂಜು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮಾಜಿ ಶಾಸಕರಾದ ಬಿ.ಪ್ರಕಾಶ್, ಕೆ.ಬಿ.ಚಂದ್ರಶೇಖರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಶೀಳನೆರೆ ಅಂಬರೀಶ್, ಸಹಕಾರ ಮಾರಾಟ ಮಂಡಲದ ನಿರ್ದೇಶಕ ಶೀಳನೆರೆ ಮೋಹನ್, ಮತ್ತಿಘಟ್ಟ ಕೃಷ್ಣಮೂರ್ತಿ, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಎಂ.ಬಿ.ಹರೀಶ್, ನಿರ್ದೇಶಕ ಡಾಲು ರವಿ, ಮಲ್ಲಿಕಾರ್ಜುನ, ಜಿಪಂ ಮಾಜಿ ಸದಸ್ಯ ಕೊಡಗಹಳ್ಳಿ ವಿ.ಮಂಜೇಗೌಡ, ತಾಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮೀ ರಾಜಶೇಖರ್ ತೀವ್ರ ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ಮನೆಯಲ್ಲೂ ಡ್ರಗ್ಸ್ ತಯಾರಿಕೆ

ದ್ರವ್ಯದ ಮಾದರಿ ಯನ್ನು ಎಫ್‌ಎಸ್‌ಎಲ್‌ಗೆ (Forensic Science Laboratory– ವಿಧಿ ವಿಜ್ಞಾನ ಪ್ರಯೋಗಾಲಯ) ಕಳುಹಿಸಿದ್ದರು. ಈ ಕುರಿತ ವರದಿ ಈಗ ಪೊಲೀಸರ ಕೈ ಸೇರಿದೆ. ಯಾಂದಳ್ಳಿ ಮನೆಯಲ್ಲಿ ದೊರೆತ ರಾಸಾಯನಿಕ ವಸ್ತುಗಳು ಡ್ರಗ್ಸ್‌ಗೆ ಸಂಬಂಧಿಸಿದವು ಎಂಬುದು ಪ್ರಯೋಗಾಲಯದ

ವರದಿಯಿಂದ ಖಚಿತಪಟ್ಟಿದೆ. ಆ ಮನೆಯಲ್ಲಿ ಒಂದು ಕೆ.ಜಿ. ತೂಕದ ಮಾದಕ ವಸ್ತು ಹಾಗೂ ಡ್ರಗ್ಸ್ ತಯಾರಿಕೆಗೆ ಅವಶ್ಯವಿರುವ ಕಚ್ಚಾ ರಾಸಾಯನಿಕ ವಸ್ತುಗಳೇ ಎಂದು ಧೃಡಪಟ್ಟಿದೆ.

ಈ ಸಂಬಂಧ ಮೈಸೂರು ಪೊಲೀಸರ ತಂಡ ಗುಜರಾತ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, ಈಗಾಗಲೇ ಐವರನ್ನು ಬಂಧಿಸಿದೆ. ಮೈಸೂರಿನ ರಿಂಗ್ ರಸ್ತೆಯ ಬೆಲವತ್ತ ಬಳಿ, ಹೆಬ್ಬಾಳು ಕೈಗಾರಿಕಾ ಬಡಾವಣೆ ಬಳಿಕ ಯಾಂದಳ್ಳಿಯ ಮನೆಯಲ್ಲಿ ಕೂಡ ಡ್ರಗ್ಸ್ ತಯಾರಾಗುತ್ತಿರುವುದು ಖಚಿತವಾಗಿದೆ.

ನಿವೃತ್ತಿದಾರರ ಸ್ವರ್ಗ, ಶಾಂತಿ ಪ್ರಿಯರ ನಗರ, ಸಾಂಸ್ಕೃತಿಕ ನಗರಿ ಎಂದೆಲ್ಲಾ ಕರೆಯಲ್ಪಡುವ ಮೈಸೂರು ಈಗ ಡ್ರಗ್ಸ್ ತಯಾರಿಕೆಯಲ್ಲೂ ಕುಖ್ಯಾತಿ ಹೊಂದುತ್ತಿರುವುದು ಆತಂಕಕಾರಿ ವಿಚಾರವಾಗಿದೆ.

ಉಡ್ತಾ ಪಂಜಾಬ್, ವಾಣಿಜ್ಯ ನಗರಿ ಮುಂಬೈ, ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ಇತರೆ ನಗರಗಳಲ್ಲಿ ಡ್ರಗ್ಸ್ ದಂಧೆ ನಡೆಯುತ್ತಿದೆ. ಈಗ ಡ್ರಗ್ಸ್ ಗೆ ಖ್ಯಾತಿ ಪಡೆದ ನಗರಗಳ ಪಟ್ಟಿಗೆ ಮೈಸೂರು ಸೇರುತ್ತಿರುವುದು ಆತಂಕದ ವಿಷಯವಾಗಿದೆ.

ಮೈಸೂರು ನಗರ ಮಾತ್ರವಲ್ಲದೆ ಹಳ್ಳಿಗಳಲ್ಲಿ ಕೂಡ ಡ್ರಗ್ಸ್ ಮಾರಾಟ ರಾಜಾರೋಷವಾಗಿ ನಡೆಯುತ್ತಿದೆ. ಇತ್ತೀಚಿಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರೈತರು ಈ ಬಗ್ಗೆ ದೂರು ನೀಡಿದ್ದರು. ನಮ್ಮ ಹಳ್ಳಿಗಳಲ್ಲಿ ಜನರು ಮದ್ಯ ಸೇವಿಸುವುದನ್ನು ಬಿಟ್ಟು ಡ್ರಗ್ಸ್ ಸೇವಿಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಮನವಿ ಮಾಡಿದ್ದರು. ಇದರಿಂದ ಮೈಸೂರು ನಗರ ಹಾಗೂ ಜಿಲ್ಲೆಯ ಪೊಲೀಸರಿಗೆ ಡ್ರಗ್ಸ್ ಜಾಲ ಮಟ್ಟ ಹಾಕಿ, ಡ್ರಗ್ಸ್ ಮುಕ್ತ ಮೈಸೂರು ಮಾಡುವುದು ದೊಡ್ಡ ಸವಾಲಾಗಿದೆ.

ಮೈಸೂರಿನ ಡ್ರಗ್ಸ್ ಜಾಲದ ಸಂಬಂಧ ಗುಜರಾತ್‌ನಲ್ಲಿ ಐವರ ಬಂಧನ

ಮೈಸೂರಿನ ಯಾಂದಳ್ಳಿಯ ಮನೆಯಲ್ಲಿ ದೊರೆತಿರುವ ಡ್ರಗ್ಸ್ ತಯಾರಿಕಾ ಪದಾರ್ಥಗಳ ಸಂಬಂಧ ಗುಜರಾತ್‌ನಲ್ಲಿ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಆ ಮನೆಯಲ್ಲಿ ದೊರೆತ ರಾಸಾಯನಿಕ ವಸ್ತುಗಳ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿತ್ತು. ಅಲ್ಲಿ ದೊರೆತಿರುವುದು ಒಂದು ಕೆ.ಜಿ. ಡ್ರಗ್ಸ್ ಹಾಗೂ ಡ್ರಗ್ಸ್ ತಯಾರಿಕೆಗೆ ಅವಶ್ಯವಿರುವ ಕಚ್ಚಾ ರಾಸಾಯನಿಕ ವಸ್ತುಗಳೆಂದು ಪ್ರಯೋಗಾಲಯದ ವರದಿಯಿಂದ ಖಚಿತವಾಗಿದೆ. ಅಲ್ಲಿ ಡ್ರಗ್ಸ್ ತಯಾರು ಮಾಡುತ್ತಿದ್ದ ಎಲ್ಲರೂ ಗುಜರಾತ್ ಮೂಲದವರಾಗಿದ್ದಾರೆ. ಈ ಸಂಬಂಧ ಗುಜರಾತ್‌ನಲ್ಲಿ ತನಿಖೆ ನಡೆಸುತ್ತಿರುವ ಮೈಸೂರು ಜಿಲ್ಲಾ ಪೊಲೀಸರ ತಂಡ ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ನಮ್ಮ ಪೊಲೀಸ್ ತಂಡ ಇನ್ನೂ ಕೂಡ ಗುಜರಾತ್‌ನಲ್ಲೇ ಇದ್ದು, ಇನ್ನು ಹಲವು ಆರೋಪಿಗಳನ್ನು ಬಂಧಿಸಲು ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಉಳಿದ ಆರೋಪಿಗಳ ಬಗ್ಗೆ ನಮ್ಮ ತಂಡಕ್ಕೆ ಸ್ಪಷ್ಟ ಸುಳಿವು ದೊರೆತಿದ್ದು ಅವರನ್ನು ಕೂಡಲೇ ಬಂಧಿಸಲಾಗುವುದು. **-ಮಲ್ಲಿಕಾರ್ಜುನ ಬಾಲದಂಡಿ, ಎಸ್ಪಿ, ಮೈಸೂರು.**

ಸಚಿವ ಸ್ಥಾನ ಕೊಡಿ...!

ಶಾಸಕರಾದ ಎ.ಎಸ್.ಪೊನ್ನಣ್ಣ, ಭೀಮಸೇನ ಚಿಮ್ಮನಕಟ್ಟಿ, ಪ್ರದೀಪ್ ಈಶ್ವರ್, ಇಕ್ಬಾಲ್ ಹುಸೇನ್, ಎನ್.ಟಿ.ಶ್ರೀನಿವಾಸ, ಅಶೋಕ್ ಕುಮಾರ್ ರೈ, ಎನ್.ಶ್ರೀನಿವಾಸ, ದರ್ಶನ್ ಧ್ರುವನಾರಾಯಣ, ಶಿವಗಂಗಾ ಬಸವರಾಜು, ವಿಶ್ವಾಸ್ ವೈದ್ಯ, ನಾರಾ ಭರತ್ ರೆಡ್ಡಿ, ಪ್ರಕಾಶ್ ಕೋಳಿವಾಡ, ಕೆ.ಎಸ್. ಆನಂದ, ಮಂಥರ್ ಗೌಡ, ಚನ್ನಾರೆಡ್ಡಿ ಪಾಟೀಲ್, ದೇವೇಂದ್ರಪ್ಪ. ಡಿ.ರವಿ ಶಂಕರ್, ನಯನಾ ಮೋಟಮ್ಮ ರಾಜಾವೇಣು ಗೋಪಾಲ ನಾಯಕ, ಮಹೇಂದ್ರ ತಮ್ಮಣ್ಣನವರ್, ಎ.ಸಿ.ಶ್ರೀನಿವಾಸ, ಅಶೋಕ್ ಮನಗೂಳಿ, ಪಿ.ರವಿಕುಮಾರ್, ಬಾಬಾಸಾಹೇಬ್ ಪಾಟೀಲ್ ಸೇರಿ 31 ಶಾಸಕರು ಪತ್ರ ಬರೆದಿದ್ದಾರೆ.

ಒಪಿಡಿ ಸೇವೆ ಬಂದ್

ಸರಿಯಾಗಿ ನೇಮಕ, ವರ್ಗಾವಣೆ ಆಗುತ್ತಿಲ್ಲ. ಕಾಲಕಾಲಕ್ಕೆ ಔಷಧಗಳ ಪೂರೈಕೆಯಾಗಿಲ್ಲ. ಔಷಧಗಳು ಇಲ್ಲದಿದ್ದರೂ ಇದೆ ಎಂದ ತೋರಿಸಲಾಗುತ್ತಿದೆ. ಸರ್ಕಾರವೇ ತಂದ ನಿಯಮದ ಪ್ರಕಾರ ಚೀಟಿ ಹೊರಗೆ ಬರೆಯಬಾರದು, ಆದರೆ ಬರೆಯಲೇಬೇಕಾದ ಪರಿಸ್ಥಿತಿ ಇದೆ ಎಂದು ಹೇಳಿದರು. ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಪ್ರತಿಕ್ರಿಯಿಸಿ, ವೈದ್ಯರ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಅಧಿಕಾರಿಗಳು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಹೋರಾಟಕ್ಕೆ ಬೆಂಬಲ ಇದೆ. ಅತಿದೊಡ್ಡ ಇಲಾಖೆಯ ಪೈಕಿ ಶಿಕ್ಷಣ ಇಲಾಖೆ ಬಳಿಕ ಆರೋಗ್ಯ ಇಲಾಖೆ ದೊಡ್ಡದು. ವೈದ್ಯರ ಬೇಡಿಕೆಗಳ ಈಡೇರಿಕೆಗೆ ಒತ್ತಾಯ ಮಾಡುತ್ತೇವೆ ಎಂದು ತಿಳಿಸಿದರು.

ಮನರೇಗಾ ಮರುಸ್ಥಾಪನೆ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ

• ಕೃಷಿ ಕಾಯ್ದೆ ವಿರುದ್ಧ ಹೋರಾಟ ಮಾದರಿ • ವಿಬಿ ಜಿ–ರಾಮ್–ಜಿ ಗ್ರಾಮೀಣ ಉದ್ಯೋಗದ ಹಕ್ಕು ಕಸಿಯುತ್ತದೆ!



ಚಿಕ್ಕಬಳ್ಳಾಪುರದಲ್ಲಿ ನಡೆದ ಮನರೇಗಾ ಬಚಾವೋ ಅಭಿಯಾನದಲ್ಲಿ ಸಿಎಂ ಸಿದ್ದರಾಮಯ್ಯ ಡಿಸಿಎಂ ಡಿ.ಕೆ. ಶಿವಕುಮಾರ್, ರಾಜ್ಯ ಉಸ್ತುವಾರಿ ಸುರ್ಜೇವಾಲ ಪಾಲ್ಗೊಂಡಿದ್ದರು.

ಬೆಂಗಳೂರು, ಫೆ23(ಕೆಎಂಶಿ)– ಗ್ರಾಮೀಣ ಜನರ ಉದ್ಯೋಗದ ಹಕ್ಕು ಕಸಿಯುತ್ತಿರುವ ವಿಬಿ–ಜಿ–ರಾಮ್–ಜಿ ಕಾಯ್ದೆ ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸುವವರೆಗೆ ಕಾಂಗ್ರೆಸ್ ಹೋರಾಟ ಬೆಂಬಲಿಸಿ ಎಂದು ರಾಜ್ಯದ ಜನರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ನರೇಗಾ ಬಚಾವ್ ಆಂದೋಲನದಲ್ಲಿ ಮಾತನಾಡಿದ ಅವರು, ದೇಶಾದ್ಯಂತ 'ಮನರೇಗಾ ಉಳಿಸಿ' ಅಭಿಯಾನ ಪ್ರಾರಂಭಿಸಲಾಗಿದೆ. ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಮನರೇಗಾ ರದ್ದುಪಡಿಸಿ, ವಿಬಿ–ಜಿ–ರಾಮ್–ಜಿ ಕಾಯ್ದೆ ಜಾರಿ ಮಾಡಿದೆ. ಮನರೇಗಾದ ರದ್ದು ಅಗತ್ಯವಿರಲಿಲ್ಲ ಎಂದರು.

ಕೂಲಿಕಾರರು, ಆದಿವಾಸಿಗಳು, ಸಣ್ಣ ರೈತರು, ಮಹಿಳೆಯರಿಗೆ ಉದ್ಯೋಗ ಅನುಕೂಲ ಕಲ್ಪಿಸುವಲ್ಲಿ 2005ರಲ್ಲಿ ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ, ನಾಯಕಿ ಸೋನಿಯಾಗಾಂಧಿ ನೇತೃತ್ವದಲ್ಲಿ ಕಾಯ್ದೆ ಜಾರಿಯಾಯಿತು. ಅಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿದಂತೆ ಹಲವು ಜನಪರ ಕಾಯ್ದೆ ಗಳನ್ನು ಜಾರಿಗೆ ತಂದಿದ್ದರು. ಈ ಎಲ್ಲ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾಡುತ್ತಿದೆ.

ಲೋಕಸಭೆಯಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ನಡೆಸಿದ ಕೇಂದ್ರ ಸರ್ಕಾರ ಹೊಸ ಕಾಯ್ದೆ ಜಾರಿಗೆ ತಂದಿತು. ಹಳೇ ಕಾಯಿದೆ ಯಡಿ 12.16 ಕೋಟಿ ಜನರು ಕೆಲಸ ಪಡೆಯುತ್ತಿದ್ದರು. ಇದರಲ್ಲಿ ಸುಮಾರು 53% ಉದ್ಯೋಗ ಪಡೆಯುತ್ತಿದ್ದರು. ಪರಿಶಿಷ್ಟ ಜಾತಿಯ 17% ಮತ್ತು ಪರಿಶಿಷ್ಟ ವರ್ಗದ 11% ಜನರು ಉದ್ಯೋಗ ಪಡೆಯುತ್ತಿದ್ದರು. ಈ ಎಲ್ಲ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಮನರೇಗಾ ಕಾಯ್ದೆಗೆ ಗ್ರಾಮೀಣಾಭಿವೃದ್ಧಿಯ ಕನಸು ಕಂಡಿದ್ದ ಮಹಾತ್ಮಾಗಾಂಧಿ ಹೆಸರನ್ನು ಇಡಲಾಗಿತ್ತು. ಅವರ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಮನರೇಗಾ ಶಕ್ತಿ ತುಂಬಿತ್ತು. 100 ದಿನಗಳ ಉದ್ಯೋಗದ ಖಾತ್ರಿ ನೀಡುತ್ತಿದ್ದ ಮನರೇಗಾ ಕಾಯ್ದೆಯಡಿ, ಕೂಲಿಕಾರರು ಸ್ಥಳೀಯ ಮಟ್ಟದಲ್ಲಿಯೇ ಕೆಲಸ ಮಾಡಬಹುದಿತ್ತು. ಗ್ರಾಮಪಂಚಾಯತಿ ಮತ್ತು ಗ್ರಾಮಸಭೆಗಳು ನಿರ್ಧರಿಸುವ ಅಧಿಕಾರವಿತ್ತು.

ಈಗ ಈ ನಿರ್ಧಾರವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಲಿದೆ. ಕೇಂದ್ರದ ಅನುದಾನ, ಅನುಮತಿ ಇಲ್ಲದೇ, ಗ್ರಾಮ ಪಂಚಾಯತ್ ಕೆಲಸ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮನರೇಗಾ ಮುಂದುವರೆಸಬೇಕೆಂಬುದು ಕಾಂಗ್ರೆಸ್ ಸರ್ಕಾರದ ಒತ್ತಾಯವಾಗಿದೆ.

ಮನರೇಗಾದಲ್ಲಿ 100 ದಿನ ಭತ್ಯೆ ತಪ್ಪದೇ ಕೊಡಲಾಗುತ್ತಿತ್ತು. ಹೊಸ ಕಾಯ್ದೆಯಂತೆ ಕೇಂದ್ರ 60% ಅನುದಾನ ಮತ್ತು ರಾಜ್ಯಗಳು 40% ಅನುದಾನ ಕೊಡಬೇಕಾಗಿದೆ. ರಾಜ್ಯದ ಹಿತವನ್ನು ಕಾಪಾಡುವಲ್ಲಿ ಕೇಂದ್ರ ಸೋತಿದೆ. ಆದ್ದರಿಂದ ವಿಬಿ–ಜಿ– ರಾಮ್–ಜಿ ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸಲು ದೇಶಾದ್ಯಂತ ಕಾಂಗ್ರೆಸ್ ಪಕ್ಷ ಹೋರಾಟ ಮಾಡುತ್ತಿದೆ.

ಮನರೇಗಾ ಮರು ಜಾರಿ ಮೂಲಕ ಜನರ ಉದ್ಯೋಗದ ಹಕ್ಕನ್ನು ಮರು ಸ್ಥಾಪಿಸಬೇಕು. ಪಂಚಾಯತ್ ಸ್ವಯಂ ಆಡಳಿತದ ಹಕ್ಕು ಮರುಸ್ಥಾಪನೆ, ದಿನಕ್ಕೆ 400 ರೂ. ಕನಿಷ್ಠ ವೇತನ ದೇಶಾದ್ಯಂತ ನೀಡಬೇಕು. ಈ ಬೇಡಿಕೆಗಳು ಈಡೇರುವವರೆಗೆ ನಮ್ಮ ಆಂದೋಲನ ನಿಲ್ಲುವುದಿಲ್ಲ ಎಂದು. ರೈತವಿರೋಧಿ ಕಾಯ್ದೆಗಳನ್ನು ಹೋರಾಟದ ಫಲವಾಗಿ ರದ್ದುಗೊಳಿಸಲಾಯಿತು. ಅದೇ ರೀತಿ ಈ ಹೋರಾಟವೂ ನಿಲ್ಲುವುದಿಲ್ಲ. ಹೋರಾಟಕ್ಕೆ ರಾಜ್ಯದ ಜನರೆಲ್ಲರೂ ನಮ್ಮ ಜೊತೆಯಾಗಬೇಕು. ಹಳ್ಳಿಗಾಡಿನ ಜನರಿಗೆ ಅನುಕೂಲ ಕಲ್ಪಿಸುವ ಮನರೇಗಾ ಯೋಜನೆ ಮರುಸ್ಥಾಪಿಸುವ ಕಾಂಗ್ರೆಸ್‌ನ ಸಾರ್ಥಕ ಉದ್ದೇಶಕ್ಕೆ ಜನರು ಬೆಂಬಲಿಸಬೇಕು ಎಂದರು.

ರಾಂಚಿ ಏರ್‌ಪೋರ್ಟ್‌ನಿಂದ ಹೊರಟಿದ್ದ ವಿಮಾನ ಪತನ

ಈ ಪ್ಲೇನ್‌ನಲ್ಲಿ 7 ಮಂದಿ ಇದ್ದರು

ರಾಂಚಿ (ಜಾರ್ಖಂಡ್): ಜಾರ್ಖಂಡ್‌ನ ರಾಂಚಿಯ ಬಿರ್ಸಾ ಮುಂಡಾ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿದ ಏರ್ ಆಂಬ್ಯುಲೆನ್ಸ್ ವಿಮಾನವು ಚತ್ರ ಜಿಲ್ಲೆಯ ಸಿಮರಿಯಾ ಪೊಲೀಸ್ ಠಾಣೆ ಪ್ರದೇಶದ ಕಥಿಯಾಟು ಅರಣ್ಯದಲ್ಲಿ ಪತನವಾಗಿದೆ.

ಏರ್ ಅಂಬ್ಯುಲೆನ್ಸ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಈ ವಿಮಾವು, ರಾಂಚಿ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ಸಂಪರ್ಕ ಕಳೆದುಕೊಂಡಿತ್ತು. ಇನ್ನೂ ಈ ವಿಮಾನದೊಳಗಡೆ ಪೈಲಟ್ ಮತ್ತು ಸಿಬ್ಬಂದಿ ಸೇರಿದಂತೆ ಒಟ್ಟು 7 ಜನರು ಇದ್ದರು ಎನ್ನಲಾಗಿದೆ. ಈ ಖಾಸಗಿ ಚಾರ್ಟರ್ ಆಂಬ್ಯುಲೆನ್ಸ್ ಸೋಮವಾರ ಸಂಜೆ 7:00 ಗಂಟೆಗೆ ರಾಂಚಿ ವಿಮಾನ ನಿಲ್ದಾಣದಿಂದ ದೆಹಲಿಗೆ ಹೊರಟಿತು. ಅದರಂತೆ, ಈ ವಿಮಾನ ರಾತ್ರಿ 8:30ಕ್ಕೆ ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ಆದಾಗ್ಯೂ, ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ, ವಿಮಾನವು ಇದ್ದಕ್ಕಿದ್ದಂತೆ ವಾಯು ಸಂಚಾರ ನಿಯಂತ್ರಣಯೊಂದಿಗೆ ಸಂಪರ್ಕವನ್ನು ಕಳೆದುಕೊಂಡಿದೆ ಎನ್ನಲಾಗಿದೆ.

ಬಾಂಗ್ಲಾ ವಲಸಿಗರ ಪತ್ತೆಗೆ ಕಾರ್ಯಾಚರಣೆ

• ಗೃಹ ಸಚಿವ ಡಾ.ಪರಮೇಶ್ವರ್ ಮಾಹಿತಿ • ದುಷ್ಕೃತ್ಯ ಸಂಚು ಹಿನ್ನೆಲೆಯಲ್ಲಿ ಹಲವರ ಬಂಧನ

ಬೆಂಗಳೂರು, ಫೆ23(ಕೆಎಂಶಿ)–ದುಷ್ಕೃತ್ಯಕ್ಕೆ ಸಂಚು ರೂಪಿಸಿದ್ದ ಅಕ್ರಮ ಬಾಂಗ್ಲಾ ವಲಸಿಗರ ಬಂಧನ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಆಂತರಿಕ ಭದ್ರತಾ ವಿಭಾಗ ಕಟ್ಟೆಚ್ಚರ ವಹಿಸಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಒಂದು ತಿಂಗಳಿಂದ ಪ್ರತಿ ಜಿಲ್ಲೆಯಲ್ಲಿ ಅಕ್ರಮ ಬಾಂಗ್ಲಾ ವಲಸಿಗರ ಪತ್ತೆ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಎಂದರು. ಅಕ್ರಮ ವಲಸಿಗರು ಕಾಫಿ ತೋಟ, ಕಟ್ಟಡ ನಿರ್ಮಾಣ ಜಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಮಾಹಿತಿ ಆಧರಿಸಿ ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದ ಸೂಚನೆ ನೀಡಲಾಗಿದೆ.

ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಿರುವ ನೌಕರರ ಮಾಹಿತಿ ಪಡೆದುಕೊಳ್ಳುವಂತೆ ಚಿಕ್ಕಮಗಳೂರು, ಕೊಡಗು, ಹಾಸನ ಹಾಗೂ ದಕ್ಷಿಣ ಕನ್ನಡದ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ.

ಸಾಮಾಜಿಕ ನ್ಯಾಯಕ್ಕೆ ಸಿದ್ದರಾಮಯ್ಯ ಬದ್ಧ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಅಡಿಪಾಯವೇ ಸಾಮಾಜಿಕ ನ್ಯಾಯ, ಆ ಸಿದ್ಧಾಂತದ ಮೇಲೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಹೊಸದೇನು ಇಲ್ಲ ಎಂದರು.

ಸಿದ್ದರಾಮಯ್ಯ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಾರೆ. ಹಿಂದಿನಿಂದಲೂ ಸಾಮಾಜಿಕ ನ್ಯಾಯದ ಪರವಾಗಿದ್ದಾರೆ. ಹೊಸದಾಗಿ ಇವತ್ತು ರಾಜಕೀಯ ಮಾಡುತ್ತಿಲ್ಲ. ರಂಜಾನ್ ಹಾಗೂ ಹೋಳಿ ಹಬ್ಬ



ಆಚರಣೆ ವೇಳೆ ದುಷ್ಟ ಶಕ್ತಿಗಳು ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ಕೊಡಬಾರದು. ಸಂತೋಷದಿಂದ ಹಬ್ಬ ಆಚರಿಸಬೇಕು. ಅನಗತ್ಯ ಗೊಂದಲಗಳಿಗೆ ಅವಕಾಶವಿಲ್ಲ. ಅದಕ್ಕೆ ಅವಕಾಶ ಕೊಡದಿರಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಮೊಬೈಲ್ ಬ್ಯಾನ್ ವಿಚಾರ: ಮೊಬೈಲ್ ಬ್ಯಾನ್ ವಿಚಾರದ ಕುರಿತು ಮಾತನಾಡಿ, ಶಾಲಾ–ಕಾಲೇಜುಗಳಲ್ಲಿ ಮೊಬೈಲ್ ಬ್ಯಾನ್ ಚಿಂತನೆ ಇದೆ. 16 ವರ್ಷದೊಳಗಿನ ಮಕ್ಕಳಿಗೆ ಮೊಬೈಲ್ ಕೊಟ್ಟರೆ ವಿದ್ಯಾಭ್ಯಾಸದ ಮೇಲೆ ಬೇರೆ ಪರಿಣಾಮ ಬೀರುತ್ತಿದೆ.

ಬಹಳಷ್ಟು ದೇಶಗಳಲ್ಲಿ ಮೊಬೈಲ್ ಬ್ಯಾನ್ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಹ ಚಿಂತನೆ ನಡೆಸಿದ್ದಾರೆ. ಇದರ ಸಾಧಕ–ಬಾಧಕಗಳ ಅಧ್ಯಯನ ನಡೆಸಿ ತೀರ್ಮಾನ ಮಾಡಲಿದ್ದಾರೆ ಎಂದರು.


ದಲಿತ ಸಿಎಂ ಕಾಂಗ್ರೆಸ್ಸೆ ಮಾಡುತ್ತೆ!: ದಲಿತ ಮುಖ್ಯಮಂತ್ರಿ ಕೂಗು ಕುರಿತು ಪ್ರತಿಕ್ರಿಯಿಸಿ, ಇದೆಲ್ಲ ವಿರೋಧ ಪಕ್ಷದವರು ಮಾಡುತ್ತಿರುವ ಕೆಲಸ. ಅವರು ತಮ್ಮ ವಿಚಾರಗಳನ್ನು ಮುಚ್ಚಿಟ್ಟುಕೊಳ್ಳಲು ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ದಲಿತ ಸಿಎಂ ಕಾಂಗ್ರೆಸ್ ಪಕ್ಷದವರೆ ಮಾಡಬೇಕಲ್ಲ. ಇನ್ಯಾರು ಮಾಡುತ್ತಾರೆ. ಸಂದರ್ಭ ಬಂದಾಗ ಹೈಕಮಾಂಡ್ ಅವರು ತೀರ್ಮಾನ ಮಾಡುತ್ತಾರೆ. ಸಿದ್ದರಾಮಯ್ಯ ಆಡಳಿತ ಮಾಡುತ್ತಿಲ್ಲವೇ, ಕಳೆದ ಹನ್ನೆರಡು ದಿನಗಳಿಂದ ಬಜೆಟ್ ಕುರಿತು ವಿವಿಧ ಇಲಾಖೆ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದಾರೆ.

ವಿದ್ಯಾರ್ಥಿ ಚುನಾವಣೆ ಒತ್ತಡವಿದೆ: ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸುವ ವಿಚಾರದ ಕುರಿತು ಮಾತನಾಡಿ, ಕೆ.ಹೆಚ್.ರಂಗನಾಥ್ ಉನ್ನತ ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ ಯೂನಿವರ್ಸಿಟಿ, ಕಾಲೇಜುಗಳಲ್ಲಿ ನಡೆಯುತ್ತಿದ್ದ ಚುನಾವಣೆ ವೇಳೆ ಘರ್ಷಣೆಗಳು ನಡೆದವು. ಆ ಕಾರಣಕ್ಕಾಗಿ ವಿದ್ಯಾರ್ಥಿ ಚುನಾವಣೆಗಳನ್ನು ನಿಷೇಧಿಸಿದರು.

ಚುನಾವಣೆ ಪುನಃ ತಂದರೆ ವಿದ್ಯಾರ್ಥಿಗಳ ನಡುವೆ ಗುಂಪುಗಳಾಗಿ ಹೊಡೆದಾಡಿಕೊಳ್ಳುತ್ತಾರೆ ಎಂಬ ಕಾರಣದಿಂದ, ನಾನು ಉನ್ನತ ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ಸಿಂಡಿಕೇಟ್ ಚುನಾವಣೆ ಬ್ಯಾನ್ ಮಾಡಲಾಯಿತು. ಈಗ ವಿದ್ಯಾರ್ಥಿ ಚುನಾವಣೆ ನಡೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಒತ್ತಡ ಬರುತ್ತಿದೆ. ಈ ಬಗ್ಗೆ ಸಂಪುಟ ಏನು ನಿರ್ಧಾರ ಮಾಡುತ್ತದೆ ನೋಡಬೇಕು ಎಂದರು.

ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ಇಂದಿನಿಂದ ವೈಭವದ ಜಾತ್ರಾ ಮಹೋತ್ಸವ

ಅದ್ದೂರಿಯ ರಥೋತ್ಸವ ವೇಳೆ ಲಕ್ಷಾಂತರ ಭಕ್ತಾದಿಗಳ ಸಂಗಮ





ನಾಗಮಂಗಲ: ಪರಶಿವನ ತಪೋಭೂಮಿ, ದೇವಾನು ದೇವತೆಗಳು ನೆಲೆಸಿರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರವಾದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಜಾತ್ರಾ ಮಹೋತ್ಸವ ಇಂದಿನಿಂದ ಆರಂಭವಾಗಲಿದೆ.

ನಾಗಮಂಗಲ ತಾಲೂಕು ಶ್ರೀ ಕ್ಷೇತ್ರ ಆದಿಚುಂಚನ ಗಿರಿಯಲ್ಲಿ ಫೆ.24ರಿಂದ ಮಾರ್ಚ್ 4ರವರೆಗೆ ಒಂಬತ್ತು ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಪ್ರಯುಕ್ತ ಶ್ರೀಕ್ಷೇತ್ರದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಸೇರಿದಂತೆ ಹಲವು ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಮಾರ್ಚ್ 3ರ ಮುಂಜಾನೆ ಬ್ರಾಹ್ಮಿ ಮಹೋತ್ಸವದಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ರಥೋತ್ಸವ ನಡೆಯಲಿದೆ. ಶ್ರೀ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ನಂದಿ ಪೂಜೆ ಹಾಗೂ ಧರ್ಮಧ್ವಜಾರೋಹಣ ಮಾಡಲಿದ್ದಾರೆ. ಈ ಮೂಲಕ 9 ದಿನಗಳ ಜಾತ್ರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡುವರು. ಅದೇ ದಿನ ಬೆಳಗ್ಗೆ 10 ಗಂಟೆಗೆ ಸಭಾ ಕಾರ್ಯಕ್ರಮವೂ ನಡೆಯಲಿದೆ.

ಫೆ.25ರಂದು ಸಂಜೆ 6 ಗಂಟೆಗೆ ಸರ್ವಾಲಂಕೃತ ಶ್ರೀ ಚಂದ್ರಮೌಳೇಶ್ವರಸ್ವಾಮಿ ಉತ್ಸವ ನಡೆಯಲಿದೆ.

ಫೆ.26ರಂದು ಸಂಜೆ 6 ಗಂಟೆಗೆ ಸರ್ವಾಲಂಕೃತ ಶ್ರೀ ಮಲ್ಲೇಶ್ವರಸ್ವಾಮಿಯ ಉತ್ಸವ ನಡೆಯಲಿದೆ.

ಫೆ.27ರಂದು ಬೆಳಗ್ಗೆ 9:30ಕ್ಕೆ ಸರಳ ಸಾಮೂಹಿಕ ವಿವಾಹ ಮತ್ತು ಹಿರಿಯ ದಂಪತಿಗಳಿಗೆ ಸನ್ಮಾನ ಸಮಾರಂಭ ನಡೆಯಲಿದೆ.

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 21 ವರ್ಷ ಮೇಲ್ಪಟ್ಟ ವರ ಹಾಗೂ 18 ವರ್ಷ ಮೇಲ್ಪಟ್ಟ ವಧುವಿಗೆ ಉಚಿತವಾಗಿ ತಾಳಿ; ಕಾಲುಂಗುರ, ಬಾಗಿನ ಹಾಗೂ ವಧು-ವರರಿಗೆ ವಸ್ತ್ರಗಳನ್ನು ನೀಡುವುದರ ಜೊತೆಗೆ ಸಂಬಂಧಿಕರು ಹಾಗೂ ಹಿತೈಷಿಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗುವುದು. ನಂತರ ಸಂಜೆ 6 ಗಂಟೆಗೆ ಸಿದ್ದೇಶ್ವರ ಸ್ವಾಮಿ ಉತ್ಸವ ಜರುಗಲಿದೆ.

ಫೆ.28ರ ಸಂಜೆ 7:30ಕ್ಕೆ ಶ್ರೀ ಕಾಲಭೈರವೇಶ್ವರ ಸ್ವಾಮಿಗೆ ಸುವರ್ಣಕವಚಾಲಂಕಾರ ಪೂಜೆ ಮತ್ತು ಶ್ರೀ ಗಂಗಾಧರೇಶ್ವರಸ್ವಾಮಿಗೆ ರಜತ ನಾಗಾಭರಣ ಅಲಂಕಾರ ಪೂಜೆ ನಡೆಯಲಿದೆ.

ಮಾ.1ರಂದು ಬೆಳಿಗ್ಗೆ 6ಕ್ಕೆ ಶ್ರೀ ಕಾಲಭೈರವೇಶ್ವರ ಸ್ವಾಮಿ ಹೂವಿನ ಪಲಕ್ಕಿ ಉತ್ಸವ ಮತ್ತು ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಮಾರ್ಚ್ 2ರ ಬೆಳಿಗ್ಗೆ ಕ್ಷೇತ್ರದ ದೇವತೆಗಳಿಗೆ ಅಭಿಷೇಕದಂತೆ ನಾನಾ ಪೂಜಾ ಮಹೋತ್ಸವಗಳು ನಡೆಯಲಿವೆ. ಸಂಜೆ 6ಕ್ಕೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಜ್ವಾಲಾಪೀಠಾರೋಹಣ ಮತ್ತು ಸಿದ್ಧ ಸಿಂಹಾಸನ ಪೂಜೆ ನಡೆಯಲಿದೆ. ಹಾಗೂ ರಾತ್ರಿ 8ಕ್ಕೆ ಚಂದ್ರಮಂಡಲೋತ್ಸವ ಪೂಜೆ ನಡೆಯಲಿದೆ.

ಬೆಳಗ್ಗೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಲಿದೆ. ರಾತ್ರಿ 8 ಗಂಟೆಗೆ ಶ್ರೀ ಕಾಲಭೈರವೇಶ್ವರ ಸ್ವಾಮಿಯ ತಿರುಗಣಿ ಉತ್ಸವ, ರಾತ್ರಿ 9 ಗಂಟೆಗೆ ಶ್ರೀ ಕಾಲಭೈರವೇಶ್ವರ ಸ್ವಾಮಿಗೆ ಪುಷ್ಕರಣಿಯಲ್ಲಿ ತೆಪ್ಪೋತ್ಸವ ರಾತ್ರಿ 9:30ಕ್ಕೆ ನಾಟಕ ಪ್ರದರ್ಶನಗಳು ನಡೆಯಲಿವೆ.

ಮಾ.3ರ ಮುಂಜಾನೆ ನಡೆಯಲಿರುವ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಯ ಮಹಾರಥೋತ್ಸವ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಅಡ್ಡ ಪಲ್ಲಕ್ಕಿ ಉತ್ಸವವು ಬಹಳ ವಿಜೃಂಭಣೆಯಿಂದ ಜರುಗಲಿದೆ. ನಾಡಿನಾದ್ಯಂತ ಸಾವಿರಾರು ಭಕ್ತರು ಈ ರಥೋತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ. ಹಾಗೆಯೇ ಸಂಜೆ 6ಕ್ಕೆ ವಿವಿಧ ಗ್ರಾಮಗಳ ನೂರಾರು ಗ್ರಾಮದೇವತೆಗಳ ಮೆರವಣಿಗೆ ಮುಖಾಂತರ ಗಿರಿ ಪ್ರದಕ್ಷಿಣೆ ನಡೆಯಲಿದೆ. ಬಳಿಕ ಸಂಜೆ 6ಕ್ಕೆ ಶ್ರೀ ಸೋಮೇಶ್ವರ ಸ್ವಾಮಿಯ ಉತ್ಸವ ಜರುಗಲಿದೆ.

ಮಾ.4ರಂದು ಬೆಳಿಗ್ಗೆ 9 ಗಂಟೆಗೆ ಧರ್ಮಧ್ವಜಾವರೋಹಣ ಬೆಳಿಗ್ಗೆ 9:30ಕ್ಕೆ ಬಿಂದು ಸರೋವರದಲ್ಲಿ ಅವಭೃತಸ್ನಾನ ಮಹಾಭಿಷೇಕ ಬೆಳಿಗ್ಗೆ 9:30ಕ್ಕೆ ಸಭಾ ಕಾರ್ಯಕ್ರಮದ ಮೂಲಕ ಜಾತ್ರೆಗೆ ತೆರೆ ಬೀಳಲಿದೆ.

ಮಾನಸಿಕ ಒತ್ತಡ ನಿರ್ವಹಣೆಗೆ ಕ್ರೀಡಾ ಚಟುವಟಿಕೆಗಳು ಉತ್ತಮ ಪರಿಹಾರ

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಅಭಿಮತ

ಮೈಸೂರು, ಫೆ.23(ಎಂಕೆ)- ಕೆಲಸದ ಒತ್ತಡ ನಿವಾರಣೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಅವಶ್ಯವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಹೇಳಿದರು.



ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗದ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಉದ್ಘಾಟಿಸಿದರು.

ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಮೈಸೂರು ವಿಭಾಗದ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಒತ್ತಡ ನಿವಾರಣೆಗೆ ನೌಕರರ ಕ್ರೀಡಾಕೂಟಗಳಲ್ಲಿ ಭಾಗವಹಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಸೇವೆ ಮಾಡುವ ಇಲಾಖೆಯಾಗಿದ್ದು, ಇಲಾಖೆಯ ನೌಕರರು ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಹಾಗೂ ಮನರಂಜನೆ ಪಡೆಯಲು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕು ಎಂದು ತಿಳಿಸಿದರು.

ಇಲಾಖೆಯೊಳಗೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಸರ್ಕಾರದಿಂದ 1 ಕೋಟಿ ರೂ. ಮೀಸಲಿಡಲಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ನೌಕರರು ಕ್ರೀಡಾಕೂಟದಲ್ಲಿ ಭಾಗವಹಿಸುವ ಜೊತೆಗೆ ಜನರ ಸೇವೆ ಮಾಡುವಲ್ಲಿಯೂ ಸಕ್ರೀಯವಾಗಿ ಭಾಗವಹಿಸಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಕಾನೂನು ಪದವಿ ಪಡೆದ ಅಲೆಮಾರಿ ಸಮುದಾಯದ ಕುಮಾರಿ ಅರುಣಾ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಮೈಸೂರು ತಾಲೂಕಿನ ಸಹಾಯಕ ನಿರ್ದೇಶಕ ಜನಾರ್ಧನ್, ಚಾಮರಾಜನಗರ ತಾಲೂಕಿನ ಸಹಾಯಕ ನಿರ್ದೇಶಕರಾದ ಮೇಘ, ಕೆ.ಆರ್.ನಗರ ತಾಲೂಕು ಸಹಾಯಕ ನಿರ್ದೇಶಕ ಶಂಕರ್ ಮೂರ್ತಿ, ನಂಜನಗೂಡು ತಾಲೂಕಿನ ಸಹಾಯಕ ನಿರ್ದೇಶಕ ಸಿದ್ದಿಂಗು, ಗುಂಡ್ಲುಪೇಟೆ ತಾಲೂಕಿನ ಸಹಾಯಕ ನಿರ್ದೇಶಕ ಮೋಹನ್, ಪಿರಿಯಾಪಟ್ಟಣ ತಾಲೂಕಿನ ಸಹಾಯಕ ನಿರ್ದೇಶಕ ಚಂದ್ರಶೇಖರ್, ಹೆಚ್.ಡಿ.ಕೋಟೆ ತಾಲೂಕಿನ ಸಹಾಯಕ ನಿರ್ದೇಶಕ ರಮೇಶ್ ಮತ್ತಿತರರಿದ್ದರು.

ಸಿಎಂ ಕುರ್ಚಿ ಕಾದಾಟದಿಂದ ರಾಜ್ಯದ ಅಭಿವೃದ್ಧಿ ಕುಂಠಿತ

ಮೈಸೂರು,ಫೆ23(ಜಿಎ)-ರಾಜ್ಯ ಸರ್ಕಾರ ಎಲ್ಲಾ ವಿಚಾರಕ್ಕೂ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ತಂಬಾಕು ಬೆಲೆ ಮಾತ್ರವಲ್ಲ ಎಲ್ಲಾ ವಿಷಯದಲ್ಲಿಯೂ ರಾಜ್ಯ ಸರ್ಕಾರ ಕೇಂದ್ರವನ್ನು ದೂರುವುದನ್ನೇ ಅಭ್ಯಾಸ ಮಾಡಿಕೊಂಡಿದೆ. ತಂಬಾಕು ಬೆಲೆ ಸಮಸ್ಯೆಯನ್ನು ಕೇಂದ್ರ ಸರ್ಕಾರವೇ ಬಗೆಹರಿಸುತ್ತದೆ ಎಂದರು.

ರಾಜ್ಯದಲ್ಲಿ ಸಿಎಂ ಕುರ್ಚಿ ಕಾದಾಟದ ಬಗ್ಗೆ ಪ್ರತಿಕ್ರಿಯಿಸಿ, ಇದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ. ಇವರೆಲ್ಲಾ ಅಭಿವೃದ್ಧಿ ಬಿಟ್ಟು ಕುರ್ಚಿ ಕಾದಾಟದಲ್ಲಿ ನಿರತರಾಗಿದ್ದಾರೆ. ಇದು ಯಾರಿಗೂ ಒಳ್ಳೆಯದಲ್ಲ. ಕುರ್ಚಿ ಕಾದಾಟ ಕಾಂಗ್ರೆಸ್ ಆಂತರಿಕ ವಿಚಾರ. ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಮಾಧ್ಯಮದವರು ಏನು ಹೇಳುತ್ತಾರೆ ಅಷ್ಟೇ ಗೊತ್ತಿರುವುದು ಎಂದು ತಿಳಿಸಿದರು.

ರಾಜ್ಯ ಸರ್ಕಾರ ಎಲ್ಲಾ ವಿಚಾರಕ್ಕೆ ಕೇಂದ್ರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ



ಯದುವೀರ್

ಕೆಎಸ್ಐಸಿ ಭೂಮಿಯನ್ನು ಕ್ರೀಡಾಂಗಣಕ್ಕೆ ನೀಡುವ ಬಗ್ಗೆ ಮಾತನಾಡಿ, ರಾಜ್ಯ ಸರ್ಕಾರ ದ್ವಂದ್ವ ನೀತಿ ಅನುಸರಿಸುತ್ತಿದ್ದು, ಈ ಹಿಂದೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೆಚ್ಎಂಟಿ ಕಾರ್ಖಾನೆ ಅಭಿವೃದ್ಧಿಗೆ ಮುಂದಾದಾಗ ರಾಜ್ಯ ಸರ್ಕಾರ ಮರಗಳ ಹೆಸರಿನಲ್ಲಿ ವಿರೋಧ ಮಾಡಿತ್ತು. ಕಾಡು ಅಂಥ ಹೇಳಿ ಅದನ್ನು ಅಭಿವೃದ್ಧಿಗೆ ಅವಕಾಶ ಮಾಡಿಕೊಡಲಿಲ್ಲ. ಈಗ ಇಲ್ಲಿ ಮರಗಳಿದ್ದರು ಅದನ್ನು ಸರ್ಕಾರ ಪರಿಗಣಿಸುತ್ತಿಲ್ಲ. ಕೆಎಸ್ಐಸಿ ಜಾಗವನ್ನು ಕೆಎಸ್ಐಸಿ ಅಭಿವೃದ್ಧಿಗೆ ಬಳಸಬೇಕು. ಇದು ನಮ್ಮ ಒತ್ತಾಯ, ಈ ಬಗ್ಗೆ ಹೋರಾಟ ಮಾಡುತ್ತೇವೆ ಎಂದರು.

ಬಸವ ಜಯಂತಿ-2026ರ ನಗರ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಜೀವಧಾರ ಗಿರೀಶ್ ನೇಮಕ

ಮೈಸೂರು: ಪ್ರತಿ ವರ್ಷವೂ ಬಸವ ಬಳಗ ಒಕ್ಕೂಟ ಹಾಗೂ ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಬಸವ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದ್ದು, ಈ ವರ್ಷವೂ ಏಪ್ರಿಲ್ 19 ಹಾಗೂ 20ರಂದು ಮೈಸೂರು ನಗರದಲ್ಲಿ ನಡೆಯುತ್ತಿರುವ ಬಸವ ಜಯಂತಿ ಕಾರ್ಯಕ್ರಮದ ಪ್ರಚಾರ ಸಮಿತಿಯ ನಗರಾಧ್ಯಕ್ಷರಾಗಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಅವರನ್ನು ನೇಮಿಸಿ ಜವಾಬ್ದಾರಿಗಳನ್ನು ನೀಡಲಾಗಿದೆ ಎಂದು ಬಸವ ಬಳಗಗಳ ಒಕ್ಕೂಟ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗಿರೀಶ್

ಉದ್ಯಮಿ ಸ್ವೀಟ್ ಮಹೇಶ್‌ಗೆ ಹುಟ್ಟುಹಬ್ಬದ ಸಂಭ್ರಮ...



ಶಿರಡಿಯ ಶ್ರೀ ಸತ್ಯ ಸಾಯಿಬಾಬಾ ಸನ್ನಿಧಿಯಲ್ಲಿ ಉದ್ಯಮಿ ಸ್ವೀಟ್ ಮಹೇಶ್ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು. ಈ ವೇಳೆ ಯುವ ಮುಖಂಡ ಪ್ರದೀಪ್, ಸ್ನೇಹಿತರು, ಹಿತೈಷಿಗಳು ಮಹೇಶ್ ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು.

ಪಿಎಚ್.ಡಿ ಪದವಿ



ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ನಾಗಣ್ಣ ಅವರ ಮಾರ್ಗದರ್ಶನದಲ್ಲಿ ಎಸ್.ಪ್ರೇಮ ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ರಾಮಾಯಣ ಆಧಾರಿತ ಕನ್ನಡ ನಾಟಕಗಳಲ್ಲಿ ಮಹಿಳೆ' ಎಂಬ ಮಹಾಪ್ರಬಂಧವನ್ನು ರಾಜ್ಯ ಮುಕ್ತ ವಿವಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಬಿವಿಬಿಯಲ್ಲಿ ಕಲಾಭಾರತಿ ವಿದ್ಯಾರ್ಥಿಗಳ ಭರತನಾಟ್ಯ ಪ್ರದರ್ಶನ...



ಮೈಸೂರಿನ ವಿಜಯನಗರದ ಭಾರತೀಯ ವಿದ್ಯಾಭವನದ (ಬಿವಿಬಿ) ಸಭಾಂಗಣದಲ್ಲಿ ಜೂನಿಯರ್ ಹಾಗೂ ಸಬ್ ಜೂನಿಯರ್ ವಾರ್ಷಿಕ ದಿನ ಪ್ರಯುಕ್ತ ಡಾ.ನಾಗಲಕ್ಷ್ಮಿ ನಾಗರಾಜನ್ ಅವರಿಂದ ತರಬೇತಿ ಪಡೆದ ಭಾರತೀಯ ವಿದ್ಯಾಭವನದ ಕಲೆ ಮತ್ತು ಸಾಂಸ್ಕೃತಿಕ ವಿಭಾಗದ ಕಲಾಭಾರತಿ ವಿದ್ಯಾರ್ಥಿಗಳ ಭರತನಾಟ್ಯ ಪ್ರದರ್ಶನವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು. ಭಾರತೀಯ ವಿದ್ಯಾಭವನ (ಬಿವಿಬಿ) ಮೈಸೂರು ಘಟಕದ ಅಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಡಾ.ಭಾಷ್ಯಂ, ಕಮಿಟಿ ಸದಸ್ಯರಾದ ಗಂಗಾಧರ್, ಡಾ.ನಾಗಲಕ್ಷ್ಮಿ ಉಪಸ್ಥಿತರಿದ್ದರು.

ಒಳಮೀಸಲಾತಿ ವರದಿ ಯಥಾವತ್ ಜಾರಿಗೆ ಆಗ್ರಹಿಸಿ ಮೈಸೂರಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

ಮೈಸೂರು,ಫೆ.23(ಎಂಟಿವೈ)- ಒಳಮೀಸಲಾತಿ ವರದಿಯನ್ನು ಯಥಾವತು ಜಾರಿಗೊಳಿಸುವಂತೆ ಆಗ್ರಹಿಸಿ ಮಾದಿಗ ವಿವಿಧ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರ ಒಳಮೀಸಲಾತಿ ವರದಿಯನ್ನು ಯಾವುದೇ ಬದಲಾವಣೆ ಮಾಡದೇ ಯಥಾವತ್ತಾಗಿ ಜಾರಿಗೊಳಿಸಬೇಕು. ಆ ಮೂಲಕ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಸಂಬಂಧ ರಾಜ್ಯ ಸರ್ಕಾರ ನೊಂದ ಸಮುದಾಯಗಳ ಅವಿಶ್ರಾಂತ ಸಂಘರ್ಷಕ್ಕೆ ಇತಿಶ್ರೀ ಹಾಡಬೇಕು. ಸಂವಿಧಾನ ಪರ, ಸಾಮಾಜಿಕ ನ್ಯಾಯದ ಪರ, ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಳಮೀಸಲಾತಿ ವಿಚಾರದಲ್ಲಿ ಅಸ್ಪಷ್ಟ ತೀರ್ಮಾನ ಕೈಗೊಳ್ಳಬಹುದೆಂದು ಯಾರು ಭಾವಿಸಿರಲಿಲ್ಲ. ಇದರಿಂದ ಅವಕಾಶ ವಂಚಿತ ಸಮುದಾಯಗಳು ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಮುಂದಾಗಲು ಆಡಳಿತಾರೂಢ ಸರ್ಕಾರವೇ ಅವಕಾಶ ಕಲ್ಪಿಸಿದಂತಾಗಿದೆ. ಆಂಧ್ರಪ್ರದೇಶ ಹಾಗೂ ತೆಲಂಗಾಣಗಳಲ್ಲಿಲ್ಲದ ತೊಡಕು ನಮ್ಮ ರಾಜ್ಯದಲ್ಲೇ ಏಕೆ ಎಂದು ಪ್ರಶ್ನಿಸಿದರು.



ಒಳಮೀಸಲಾತಿ ವರದಿ ಜಾರಿಗೊಳಿಸುವಂತೆ ಆಗ್ರಹಿಸಿ ಡಿಸಿ ಕಚೇರಿ ಬಳಿ ಮಾದಿಗ ವಿವಿಧ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.


ಆಂಧ್ರ ಹಾಗೂ ತೆಲಂಗಾಣಗಳಲ್ಲಿ ಕೇವಲ ಮೂರು ತಿಂಗಳಾಗುವುದರಲ್ಲಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ನಿಖರ ದತ್ತಾಂಶಗಳ ಸಮೀಕ್ಷೆಯ ನಂತರ ಆಡಳಿತರೂಢ ಹಾಗೂ ಪ್ರತಿಪಕ್ಷಗಳು ಬೇಷರತ್ತಾಗಿ ಒಳಮೀಸಲಾತಿ ಜಾರಿಗೊಳಿಸಿವೆ. ಅದಕ್ಕೆ ವ್ಯತಿರಿಕ್ತವಾಗಿ ಕರ್ನಾಟಕದಲ್ಲಿ ಮಾತ್ರ ನ್ಯಾಯಾಲಯದ ಯಾವೊಂದು ಮಾರ್ಗಸೂಚಿಗಳನ್ನು ಮಾಡದೆ, ನಿಖರ ದತ್ತಾಂಶಗಳನ್ನು ಗಂಭೀರವಾಗಿ ಪರಿಗಣಿಸದೇ ಕಾನೂನಿನ ಇಕ್ಕಟ್ಟಿಗೆ ಸಿಲುಕಿಸಿ, ನೇಮಕಾತಿ ಆಗಬಹುದಾದ ಲಕ್ಷಾಂತರ ನಿರುದ್ಯೋಗಿ ಯುವಜನತೆಯ ಆಕ್ರೋಶಕ್ಕೆ ಗುರಿಯಾಗಿದೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಹಕ್ಕೊತ್ತಾಯಗಳು: ನೇರ ನೇಮಕಾತಿ ಜತೆಗೆ ಪದೋನ್ನತಿ, ಬ್ಯಾಕ್‌ಲಾಗ್ ಹಾಗೂ ಸರ್ಕಾರಿ ಗುತ್ತಿಗೆ ಸೇರಿದಂತೆ ಎಲ್ಲಾ ವಲಯಗಳಲ್ಲಿ ಒಳ ಮೀಸಲಾತಿ ಜಾರಿ ಮಾಡಬೇಕು. ಎಸ್‌ಸಿಪಿ, ಟಿಎಸ್‌ಪಿ ಅನುದಾನದಲ್ಲೂ ಸಹ 6:6:5ರ ಅನುಪಾತದಲ್ಲಿ ಹಂಚಿಕೆಯಾಗಬೇಕು. ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಶೇ.1 ಮೀಸಲಾತಿಯೊಂದಿಗೆ ಪ್ರತ್ಯೇಕ ನಿಗಮ ಹಾಗೂ ಪ್ರತ್ಯೇಕ ಪ್ಯಾಕೇಜ್ ಘೋಷಿಸಬೇಕು. ಶಾಶ್ವತ ಆಯೋಗ ನೇಮಕ ಹಾಗೂ ಮೀಸಲಾತಿ ಹೆಚ್ಚಳಕ್ಕೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕು. ಒಳಮೀಸಲಾತಿ ಹೋರಾಟಗಾರರ ಮೇಲಿನ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು. ಆದಿ ಜಾಂಬವ ಅಭಿವೃದ್ಧಿ ನಿಗಮ, ಚರ್ಮ ಕೈಗಾರಿಕಾ ಅಭಿವೃದ್ಧಿ ಮಂಡಳಿ(ಅಡ್ಡರ್), ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಗೆ ತಲಾ 2 ಸಾವಿರ ಕೋಟಿ ಅನುದಾನ ಒದಗಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ರಾಜಣ್ಣ, ಸಂಚಾಲಕ ಸ್ವಾಮಿ, ಮುಖಂಡರಾದ ವೆಂಕಟರಾಮು, ಮಹದೇವ, ಹನುಮಂತಯ್ಯ ಸೇರಿದಂತೆ ಹಲವರು ಭಾಗವಹಿಸಿದ್ದರು.

ದೇಶ - ವಿದೇಶ

ಚಿನ್ನದ ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರ ಗಮನಿಸುತ್ತಿದೆ

ನವದೆಹಲಿ: ಸಾಮಾನ್ಯವಾಗಿ ಹಬ್ಬದ ಸಮಯದಲ್ಲಿ ಚಿನ್ನದ ಬೆಲೆ ಏರಿಕೆಯಾಗುತ್ತದೆ. ಆದರೆ, ಅದು ನಿರ್ದಿಷ್ಟ ಮಿತಿಗಳನ್ನು ಮೀರಿಲ್ಲ. ಸರ್ಕಾರ ಚಿನ್ನದ ಬೆಲೆ ಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.




ಆರ್‌ಬಿಐನ ಕೇಂದ್ರೀಯ ನಿರ್ದೇಶಕರ ಮಂಡಳಿಯೊಂದಿಗೆ ಬಜೆಟ್ ನಂತರದ ಸಭೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿನ್ನ ಯಾವಾಗಲೂ ಸಾಮಾನ್ಯ ಜನರಿಗೆ ಹೂಡಿಕೆಯಾಗಿದೆ. ಹಬ್ಬದ ಸಮಯದಲ್ಲಿ ಸಾಮಾನ್ಯವಾಗಿ ಬೆಲೆ ಏರಿಕೆ ಕಂಡುಬರುತ್ತದೆ. ನಾವು ಅದನ್ನು ಗಮನಿಸುತ್ತಿದ್ದೇವೆ. ಆದರೆ, ಬೆಲೆಗಳು ನಿರ್ದಿಷ್ಟ ಮಿತಿಯನ್ನು ಮೀರಿ ಹೋಗಿಲ್ಲ ಎಂದು ಹೇಳಿದ್ದಾರೆ. ಐಡಿಬಿಐ ಬ್ಯಾಂಕ್ ಸಂಬಂಧ ಪ್ರತಿಕ್ರಿಯಿಸಿ, ಯಾವುದೇ ವ್ಯವಸ್ಥಿತ ರೀತಿಯ ಸಮಸ್ಯೆ ಇಲ್ಲ. ನೀತಿ ವಿಷಯವಾಗಿ ಸರ್ಕಾರವು ವೈಯಕ್ತಿಕ ಕಂಪನಿಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಬಳಿ ಸಾಕಷ್ಟು ಲಿಕ್ವಿಡಿಟಿ(ಹಣ) ಲಭ್ಯವಿದ್ದು, ಐದು ವರ್ಷಗಳವರೆಗೆ ಸಾಲ ಪಡೆಯಬಹುದು ಮತ್ತು ಸರ್ಕಾರವು ದೇಶದ ಆರ್ಥಿಕ ಅಗತ್ಯಗಳನ್ನು ಪೂರೈಸಲು ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಅಮಾನ್ಯಗೊಳಿಸಿದ್ದ ಸುಂಕಗಳ ವಸೂಲಿ ಇಂದಿನಿಂದ ಬಂದ್

ಅಮೆರಿಕ: ಸುಪ್ರೀಂಕೋರ್ಟ್ ಅಮಾನ್ಯ ಎಂದು ಘೋಷಿಸಿದ ಕೆಲವು ಆಮದು ಸುಂಕಗಳ ವಸೂಲಾತಿಯನ್ನು ಮಂಗಳವಾರ ಬೆಳಗ್ಗೆಯಿಂದ ನಿಲ್ಲಿಸಲಾಗುವುದು ಎಂದು ಅಮೆರಿಕದ ಕಸ್ಟಮ್ಸ್ ಮತ್ತು ಬಾರ್ಡರ್ ಪ್ರೊಟೆಕ್ಷನ್ ತಿಳಿಸಿದೆ. ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ ಅಡಿಯಲ್ಲಿ ವಿಧಿಸಲಾಗಿದ್ದ ಸುಂಕಗಳಿಗೆ ಸಂಬಂಧಿಸಿದ ಸುಂಕ ಕೋಡ್‌ಗಳನ್ನು ಅಮೆರಿಕಾ ಸಮಯದಂತೆ ನಾಳೆ ಬೆಳಗಿನ ಸಮಯ 12:01ರಿಂದ (ಭಾರತೀಯ ಸಮಯ ಸಂಜೆ 5.30) ನಿಷ್ಕ್ರಿಯಗೊಳಿಸಲಾಗುತ್ತದೆ ಎಂದು ಸಂಸ್ಥೆ ಹೇಳಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಘೋಷಿಸಿರುವ ಸುಂಕವನ್ನು ಸುಪ್ರೀಂಕೋರ್ಟ್ ಅಮಾನ್ಯ ಎಂದು ತೀರ್ಪು ನೀಡಿದ ನಂತರ ಇದನ್ನು ಘೋಷಿಸಲಾಗಿದೆ. ಕಾರ್ಗೋ ಸಿಸ್ಟಮ್ಸ್ ಮೆಸೇಜಿಂಗ್ ಸರ್ವಿಸ್ ಮೂಲಕ, ಅಧ್ಯಕ್ಷ ಟ್ರಂಪ್ ಹೊರಡಿಸಿದ್ದ ಐಇಇಪಿಎ ಆದೇಶಗಳ ಅಡಿಯಲ್ಲಿ ವಿಧಿಸಿದ್ದ ಸುಂಕಗಳ ವಸೂಲಾತಿ ನಿಲ್ಲಿಸುವುದಾಗಿ ದೃಢಪಡಿಸಿದೆ. ನ್ಯಾಯಾಲಯದ ತೀರ್ಪಿನ ನಂತರವೂ ಕೆಲವು ದಿನಗಳ ಕಾಲ ಸುಂಕಗಳನ್ನು ವಸೂಲು ಮಾಡಿದ್ದರ ಬಗ್ಗೆ ಅಮೆರಿಕ ಸರ್ಕಾರ ಯಾವುದೇ ವಿವರಣೆ ನೀಡಿಲ್ಲ. ಈ ನಡುವೆ, ನ್ಯಾಯಾಲಯ ರದ್ದುಗೊಳಿಸಿದ ಸುಂಕಗಳಿಗೆ ಬದಲಾಗಿ ಪ್ರತ್ಯೇಕ ಕಾನೂನು ಅಧಿಕಾರದ ಅಡಿಯಲ್ಲಿ ಶೇ.15 ಜಾಗತಿಕ ಸುಂಕ ಜಾರಿಗೆ ಟ್ರಂಪ್ ಮುಂದಾಗಿದ್ದಾರೆ. ಇದಕ್ಕೂ ಮುನ್ನ ಶೇ.10 ಜಾಗತಿಕ ಸುಂಕ ವಿಧಿಸುವುದಾಗಿ ಘೋಷಿಸಿದ್ದರೂ, ಅದಕ್ಕೆ ಸಂಬಂಧಿಸಿದ ಕಾರ್ಯಾದೇಶ ಹೊರಡಿಸಲಾಗಿಲ್ಲ.

ರೈಲ್ವೆ ಮಾಜಿ ಸಚಿವ ಮುಕುಲ್‌ರಾಯ್ ನಿಧನ

ಕೋಲ್ಕತ್ತಾ: ಒಂದು ಕಾಲದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ)ನ ಎರಡನೇ ಕಮಾಂಡರ್ ಎನಿಸಿಕೊಂಡಿದ್ದ ರೈಲ್ವೆ ಮಾಜಿ ಸಚಿವ ಮುಕುಲ್ ರಾಯ್ (71) ಹೃದಯಾಘಾತದಿಂದ ನಿಧನರಾದರು.




ಈ ಕುರಿತು ಮಾಹಿತಿ ನೀಡಿರುವ ಅವರ ಪುತ್ರ ಸುಭ್ರಂಗ್ಶು ರಾಯ್, ನಮ್ಮ ತಂದೆ ಮುಕುಲ್ ರಾಯ್ ಅವರು ಮಧ್ಯರಾತ್ರಿ 1.30ಕ್ಕೆ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ತಿಳಿಸಿದ್ದಾರೆ.

ಮುಕುಲ್ ರಾಯ್ ಅವರನ್ನು ಬಂಗಾಳದ ರಾಜಕೀಯ ಚಾಣಕ್ಯ ಎಂದೇ ಕರೆಯಲಾಗುತ್ತಿತ್ತು. ರಾಜ್ಯದಲ್ಲಿ ಟಿಎಂಸಿ ಕಟ್ಟಿ ಬೆಳೆಸುವುದರ ಜೊತೆಗೆ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಆದರೆ ರಾಜಕೀಯ ಬೆಳವಣಿಗೆಯಲ್ಲಿ ಅವರು ಟಿಎಂಸಿ ತ್ಯಜಿಸಿ, ಬಿಜೆಪಿಗೆ ಸೇರ್ಪಡೆ ಆಗಿದ್ದರು. 2021ರ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ, ಕೃಷ್ಣನಗರ ಉತ್ತರ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಿ ಜಯಗಳಿಸಿದ್ದರು. ಬಳಿಕ ಪಕ್ಷದೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಬಿಜೆಪಿ ತೊರೆದು ಮತ್ತೆ ಟಿಎಂಸಿಗೆ ಮರಳಿದ್ದರೂ ತಮ್ಮ ಶಾಸಕ ಸ್ಥಾನದಲ್ಲಿ ಮುಂದುವರೆದಿದ್ದರು. ಯುಪಿಎ-2 ಅವಧಿಯಲ್ಲಿ ಸಚಿವರಾಗಿದ್ದ ರಾಯ್, ಕೇಂದ್ರದಲ್ಲೂ ತಮ್ಮ ಪ್ರಭಾವ ಉಳಿಸಿಕೊಂಡಿದ್ದರು. ಮರಳಿ ಟಿಎಂಸಿಗೆ ಬಂದ ಬಳಿಕವೂ ಬಿಜೆಪಿ ಶಾಸಕ ಸ್ಥಾನದಲ್ಲಿ ಮುಂದುವರೆದಿದ್ದರ ಬಗ್ಗೆ ನಾನು ಟಿಎಂಸಿ ಭಾಗವೇ ಅಲ್ಲ ಎಂಬ ಹೇಳಿಕೆ ನೀಡಿ ಮತ್ತೆ ಪಕ್ಷಾಂತರದ ಮುನ್ಸೂಚನೆ ನೀಡಿದ್ದರು.

ಅಮೆರಿಕಾ ವೈಮಾನಿಕ ದಾಳಿ ಭೀತಿ; ಇರಾನ್ ತೊರೆಯಲು ಭಾರತೀಯರಿಗೆ ಸಲಹೆ

ಇರಾನ್: ಮುಂಬರುವ ದಿನಗಳಲ್ಲಿ ಅಮೆರಿಕ ವೈಮಾನಿಕ ದಾಳಿ ಸಾಧ್ಯತೆ ಹಿನ್ನೆಲೆಯಲ್ಲಿ ಭಾರತದ ಪ್ರಜೆಗಳು ಇರಾನ್‌ನಿಂದ ಹೊರಹೋಗುವಂತೆ ಭಾರತದ ರಾಯಭಾರ ಕಚೇರಿ ಮನವಿ ಮಾಡಿದೆ. ಇರಾನ್‌ನಲ್ಲಿರುವ ವಿದ್ಯಾರ್ಥಿಗಳು, ಯಾತ್ರಿಕರು, ವ್ಯಾಪಾರಸ್ಥರು ಮತ್ತು ಪ್ರವಾಸಿಗರು ಸೇರಿದಂತೆ ಎಲ್ಲಾ ಭಾರತೀಯ ನಾಗರಿಕರು ಮತ್ತು ಭಾರತೀಯ ಮೂಲದ ವ್ಯಕ್ತಿಗಳು ಸೂಚನೆ ಪಾಲಿಸಬೇಕು. ಪ್ರತಿಭಟನೆ ಅಥವಾ ಪ್ರದರ್ಶನಗಳ ಪ್ರದೇಶಗಳಿಗೆ ಹೆಚ್ಚು ಹೋಗಬಾರದು. ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಿ. ಯಾವುದೇ ಬೆಳವಣಿಗೆ ಬಗ್ಗೆ ತಿಳಿಯಲು ಸ್ಥಳೀಯ ಮಾಧ್ಯಮಗಳ ಮೇಲೆ ನಿಗಾವಹಿಸಿ. ಇರಾನ್‌ನಲ್ಲಿರುವ ಭಾರತೀಯರು ಪಾಸ್‌ಪೋರ್ಟ್‌ಗಳು ಮತ್ತು ಐಡಿಗಳು ಸೇರಿದಂತೆ ಅವರ ಪ್ರಯಾಣ ಮತ್ತು ವಲಸೆ ದಾಖಲೆಗಳನ್ನು ತಮ್ಮಲ್ಲಿ ಇರಿಸಿಕೊಳ್ಳಿ.



ಯಾವುದೇ ನೆರವಿಗಾಗಿ ಭಾರತೀಯ ರಾಯಭಾರ ಕಚೇರಿ ತುರ್ತು ಸಹಾಯವಾಣಿ ಸಂಖ್ಯೆ +9891 28109115; +989128109109; +989128109102; +989932179359, ಇಮೇಲ್ cons.tehran@mea.gov.in. ಸಂಪರ್ಕಿಸುವಂತೆ ಕೋರಲಾಗಿದೆ.

ನವದೆಹಲಿಯಲ್ಲಿ ಬಾಂಬ್ ಬೆದರಿಕೆ; ಕೆಂಪುಕೋಟೆ ಸೇರಿ ಎಲ್ಲೆಡೆ ಕಟ್ಟೆಚ್ಚರ

ನವದೆಹಲಿ: ಇಮೇಲ್‌ನಲ್ಲಿ ಸರಣಿ ಬಾಂಬ್ ಬೆದರಿಕೆ ಸಂದೇಶ ರವಾನೆಯಾದ ಹಿನ್ನೆಲೆಯಲ್ಲಿ ನವದೆಹಲಿಯ ಮೆಟ್ರೋ ನಿಲ್ದಾಣಗಳು ಸೇರಿದಂತೆ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಭದ್ರತೆ ಬಿಗಿಗೊಳಿಸಲಾಗಿದೆ.



ದೆಹಲಿ ವಿಧಾನಸಭೆ, ಸಚಿವಾಲಯ, ಕೆಂಪುಕೋಟೆ ಮತ್ತು ಎರಡು ಶಾಲೆಗಳು ಸೇರಿದಂತೆ ಹಲವು ಸಂಸ್ಥೆಗಳಿಗೆ ಸೋಮವಾರ ಬೆಳಗ್ಗೆ ಬಾಂಬ್ ಬೆದರಿಕೆ ಕರೆಗಳು ಬಂದಿದ್ದು, ಭದ್ರತಾ ಪಡೆಗಳು ತೀವ್ರ ತಪಾಸಣೆ ನಡೆಸಿದ ನಂತರ ಅದು ಹುಸಿ ಬಾಂಬ್ ಬೆದರಿಕೆ ಕರೆ ಎಂಬುದು ದೃಢಪಡಿಸಿವೆ.

ದುಷ್ಕರ್ಮಿಗಳು ಬಾಂಬ್ ಬೆದರಿಕೆ ಸಂದೇಶ ಕಳುಹಿಸಲು ಬಳಸಿದ ಐಪಿ ವಿಳಾಸ ಪತ್ತೆಗಾಗಿ ಸೈಬರ್ ತಂಡಗಳು ಪ್ರಯತ್ನಿಸುತ್ತಿವೆ. ಪೊಲೀಸ್ ತನಿಖೆಯನ್ನು ದಾರಿ ತಪ್ಪಿಸಲು ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್(VPN) ಬಳಸುತ್ತಿದ್ದು, ತಜ್ಞರು ತಪ್ಪಿತಸ್ಥರನ್ನು ಪತ್ತೆ ಮಾಡಲು ಕ್ರಮ ವಹಿಸಿದ್ದಾರೆ.

ಬೆಳಗ್ಗೆ 9.11ಕ್ಕೆ ಕೆಂಪು ಕೋಟೆಯಲ್ಲಿ, ಮಧ್ಯಾಹ್ನ 1.11ಕ್ಕೆ ಸೇನಾ ಶಾಲೆಯಲ್ಲಿ, ಮಧ್ಯಾಹ್ನ 3.11ಕ್ಕೆ ವಿಧಾನಸಭೆಯಲ್ಲಿ ಸ್ಫೋಟಗಳು ಸಂಭವಿಸಲಿವೆ ಎಂದು ಸಂದೇಶಗಳಲ್ಲಿ ಹೇಳಲಾಗಿದೆ. ಅದರಲ್ಲಿ ದೆಹಲಿ ಬನೇಗಾ ಖಲಿಸ್ತಾನ್ ಎಂದು ನಮೂದಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಧ್ಯಮದವರಿಗೆ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 24 ಫೆಬ್ರವರಿ 2026

ಚೆಟ್ಟಳ್ಳಿ, ಮದೆನಾಡಿನಲ್ಲಿ ವಿಜೃಂಭಣೆಯ ಶೋಭಾಯಾತ್ರೆ





ಚೆಟ್ಟಳ್ಳಿಯಲ್ಲಿ ನಡೆದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಸಮಾಜಬಾಂಧವರು. ಮತ್ತೊಂದು ಚಿತ್ರದಲ್ಲಿ ಮದೆನಾಡು ಗ್ರಾಮದಲ್ಲಿ ನಡೆದ ಹಿಂದೂ ಸಂಗಮ ಕಾರ್ಯಕ್ರಮ.

ಮಡಿಕೇರಿ,ಫೆ.23–ಚೆಟ್ಟಳ್ಳಿಯಲ್ಲಿ ನಡೆದ ವಿರಾಟ್ ಹಿಂದೂ ಸಂಗಮ ಹಾಗೂ ಬೃಹತ್ ಶೋಭಾಯಾತ್ರೆ ಅಪಾರ ಜನ ಬೆಂಬಲದೊಂದಿಗೆ ಅದ್ದೂರಿಯಾಗಿ ಹಾಗೂ ಶಾಂತಿಯುತವಾಗಿ ನೆರವೇರಿತು.

ಚೇರಳ, ಶ್ರೀಮಂಗಲ, ಈರಳೆವಳಮುಡಿ, ಕೂಡ್ಲೂರು, ಚೆಟ್ಟಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ 1500ಕ್ಕೂ ಅಧಿಕ ಹಿಂದೂ ಬಾಂಧವರು ಶೋಭಾಯಾತ್ರೆ ಮತ್ತು ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ, ಅಪೂರ್ವ ವೈಭವ ತುಂಬಿದರು. ಶೋಭಾಯಾತ್ರೆ ವ್ಯಾಲಿ ವ್ಯೂ ಶಾಲೆಯ ಮುಂಭಾಗದಿಂದ ಆರಂಭಗೊಂಡು ವಿವಿಧ ಸಾಂಸ್ಕೃತಿಕ ಪ್ರದರ್ಶನದೊಂದಿಗೆ ಚೆಟ್ಟಳ್ಳಿ ಪ್ರೌಢಶಾಲಾ ಆಟದ ಮೈದಾನದವರೆಗೆ ಸಾಗಿತು.

ಶೋಭಾಯಾತ್ರೆಯಲ್ಲಿ ಮಹಿಳೆಯರ ಪೂರ್ಣ ಕುಂಭ ಸ್ವಾಗತ, ನೆಲ್ಲಿಹುದಿಕೇರಿಯ ಶ್ರೀ ಮೂಕಾಂಬಿಕಾ ಭಜನೆ ಕುಣಿತ ತಂಡ, ಉಡತ್ ಮೊಟ್ಟೆ ಭಜನೆ ಕುಣಿತ, ಬೆಳ್ಳಿ ರಥ, ಶ್ರೀಶಬರೀಶ್ ಚೆಂಡೆಮೇಳ ತಂಡ (ಚೆಟ್ಟಳ್ಳಿ), ಹುಲಿ ವೇಷ ಹಾಗೂ ಮಂಗಳೂರು ತಂಡದವರಿಂದ ಆಕರ್ಷಕ ಸಾಂಸ್ಕೃತಿಕ ಪ್ರದರ್ಶನ, ಬೆಳ್ತಂಗಡಿಯ ಶ್ರೀ ಶೆಟ್ಟಿ ಆರ್ಟ್ಸ್ ಗೊಂಬೆ ಕುಣಿತ, ಬಾಳೆಗುಂಡಿ ಮತ್ತು ತ್ಯಾಗತ್ತೂರು ತಂಡದಿಂದ ಹಾಡಿ ಕುಣಿತ ಕಾರ್ಯಕ್ರಮಗಳು ಗಮನ ಸೆಳೆದವು. ಜೊತೆಗೆ ವಿಷ್ಣು ಹಾಗು ವೀರಾಂಜನೇಯ ಅಲಂಕೃತ ಮಂಟಪಗಳು ಭಕ್ತಿಭಾವ ಹಾಗೂ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದವು.

ಚೆಟ್ಟಳ್ಳಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅತಿಥಿಗಳು ದೀಪಬೆಳಗಿ ಭಾರತಾಂಬೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದಿಕ್ಸೂಚಿ ಭಾಷಣಕಾರರಾಗಿ ಸಾಮಾಜಿಕ ಕಾರ್ಯಕರ್ತ ಡಾ.ಸುಧಾಕರ ಹೊಸಳ್ಳಿ, ಕೊಡಗು ಗೌಡ ಸಮಾಜ ನಿಕಟಪೂರ್ವ ಅಧ್ಯಕ್ಷ ಪೇರಿಯನ ಪಿ.ಜಯಾನಂದ ಕಾಫಿ ಬೆಳೆಗಾರ ತಿರುಮಲೇಶ್ ಭಟ್, ಕೊಂಗೇಟಿರ ವೀಣಾ ಅಪ್ಪಣ್ಣ ಮಾತನಾಡಿದರು.

ನಾಪೋಕ್ಲು ವರದಿ: ಹಿಂದೂ ಸಂಘಟನೆಯ ಮೂಲಕ ರಾಷ್ಟ್ರವನ್ನು ಕಟ್ಟುವ ಕೆಲಸವನ್ನು ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಸಹ ಕಾರ್ಯವಾಹ ವಿರನ್ ಕುಟ್ಟಪ್ಪ ಹೇಳಿದ್ದಾರೆ

ಸಮೀಪದ ಮದನಾಡಿನಲ್ಲಿ ಭಾನುವಾರ ನಡೆದ ಹಿಂದೂ ಸಮಾವೇಶದಲ್ಲಿ ಮಾತನಾಡಿದ ಅವರು, ರಾಷ್ಟ್ರದ ಅನೇಕ ಸವಾಲು ಮತ್ತು ಸಮಸ್ಯೆಗಳಿಗೆ ಉತ್ತರವನ್ನು ನೀಡುತ್ತಾ ನೂರು ವರ್ಷಗಳು ತುಂಬುವ ಸಂದರ್ಭದಲ್ಲಿ ವಿಶ್ವವೇ ಭಾರತವನ್ನು ತಿರುಗಿ ನೋಡುವಂತೆ ಬಲಾಢ್ಯ ಭಾರತವನ್ನು ಕಟ್ಟಿದೆ. ಭವಿಷ್ಯದಲ್ಲಿ ವಸುದೈವ ಕುಟುಂಬಕಂ ಎನ್ನುವ ಕಲ್ಪನೆಯನ್ನು ಸಾಕಾರಗೊಳಿಸುವ ಸಲುವಾಗಿ ಜಗತ್ತೇ ಒಂದು ಕುಟುಂಬ ಇದು ಹಿಂದುತ್ವದ ಪರಿಕಲ್ಪನೆ ಕೇವಲ ಒಂದು ಸಂಘಟನೆ ಒಂದು ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ ಎಂದರು.

ನಾಗರೀಕರಾಗಿ ಸಮಾಜದಲ್ಲಿ ಶಿಷ್ಟಾಚಾರದಲ್ಲಿ ತೊಡೆದುಕೊಳ್ಳಬೇಕು ಪ್ರಕೃತಿ ಇದ್ದರೆ ಮಾತ್ರ ನಾವು ನಮ್ಮಿಂದ ಪ್ರಕೃತಿಯಲ್ಲ ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ ಅದೇ ರೀತಿಯಲ್ಲಿ ಸ್ವದೇಶಿ ಭಾವನೆ ಸ್ವದೇಶಿ ಉಡುಪು, ಸ್ವದೇಶಿ ಭಾಷೆ ಬಳಸುವುದರ ಮೂಲಕ ದೇಶವನ್ನು ಕಟ್ಟುವ ಪಂಚ ಪರಿವರ್ತನೆಯಲ್ಲಿ ಪ್ರತಿಯೊಬ್ಬ ಹಿಂದೂ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಪಡೆದ ದಾನ ಸೂಕ್ತವಾಗಿ ಬಳಕೆಯಾಗುವಂತೆ ನೋಡಿಕೊಳ್ಳಿ



ವಿಶೇಷ ಚೇತನರಿಗೆ ಕೃತಕ ಕೈ, ಕಾಲು ಜೋಡಣಾ ಶಿಬಿರ ನಡೆಯಿತು.

ಮಡಿಕೇರಿ, ಫೆ23–ಉತ್ತಮ ಉದ್ದೇಶಕ್ಕಾಗಿ ದಾನ ನೀಡುವವರ ಸಂಖ್ಯೆ ದೇಶದಲ್ಲೇನೂ ಕಡಮೆಯಾಗಿಲ್ಲ. ಆದರೆ ನೀಡಿದ ದಾನ ಸೂಕ್ತ ಬಳಕೆಯಾಗುವಂತೆ ನೋಡಿಕೊಳ್ಳುವ ಕರ್ತವ್ಯ ದಾನ ಸ್ವೀಕರಿಸಿ ದವರ ಮೇಲಿದೆ ಎಂದು ಬೆಂಗಳೂರಿನ ಪೀಣ್ಯ ರೋಟರಿ ಸಂಸ್ಥೆಯ ಮಾಜಿ ಗವ ರ್ನರ್ ನಾಗೇಂದ್ರ ಪ್ರಸಾದ್ ಅಭಿಪ್ರಾಯ ಪಟ್ಟಿದ್ದಾರೆ.

ರೋಟರಿಯ 121ನೇ ದಿನಾಚರಣೆಯಲ್ಲಿ 22 ಮಂದಿ ವಿಶೇಷ ಚೇತನರಿಗೆ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಉತ್ತಮ ಕಾರ್ಯಗಳಿಗೆ ನೀಡಲ್ಪಡುವ ದಾನದಿಂದ ದಾನಿಗಳ ಮನಸ್ಸಿಗೂ ತೃಪ್ತಿ ದೊರಕುತ್ತದೆ. ಸಮಾಜದಿಂದ ಪಡೆದ ಆಸ್ತಿಯಲ್ಲಿ ಕೆಲವು ಪಾಲನ್ನಾದರೂ ಸಮಾಜಕ್ಕೆ ಮರಳಿ ನೀಡುವುದು ಪ್ರತಿಯೋರ್ವರ ಕರ್ತವ್ಯವಾಗಬೇಕೆಂದು ಹೇಳಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖಾಧಿಕಾರಿ ವಿಮಲ ಮಾತನಾಡಿ, ಸಮಾಜದ ಜನತೆ, ದುರ್ಬಲರು, ಅಸಹಾಯಕರನ್ನು ಗುರುತಿಸಿ ಅವರ ಸೇವೆಗೆ ಮುಂದಾಗುವ ರೋಟರಿಯಂತಹ ಸೇವಾ ಸಂಸ್ಥೆಗಳ ಪಾತ್ರ ಶ್ಲಾಘನೀಯವಾಗಿದೆ ಎಂದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ಕಾರ್ಯದರ್ಶಿ ಬಿ.ಕೆ. ಕಾರ್ಯಪ್ಪ, ರೋಟರಿ ವಲಯ 6ರ ಸಹಾಯಕ ಗವರ್ನರ್ ಧಿಲನ್ ಚಂಗಪ್ಪ, ವಲಯ ಸೇನಾನಿ ಕಾರ್ಯಪ್ಪ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಕೊಡಗು ಸಂಚಾಲಕ ಅಂಕಾಚಾರಿ ವೇದಿಕೆಯಲ್ಲಿದ್ದರು. ಕೃತಕ ಕೈ, ಕಾಲು ಉತ್ಪಾದನೆಯ ಮೈಸೂರಿನ ಪುನಶ್ಚೇತನ ಸಂಸ್ಥೆಯ ಸುಂದರೇಶ್ ಅವರನ್ನು ಸನ್ಮಾನಿಸಲಾಯಿತು. ದಾನಿಗಳಾದ ಶ್ರೀಹರಿ, ಅಂಬೆಕಲ್ ವಿನೋದ್, ಪ್ರಮೋದ್ ಕುಮಾರ್ ರೈ, ಪ್ರಸಾದ್ ಗೌಡ, ಜಿ.ಆರ್. ರವಿಶಂಕರ್ ಅಶೋಕ್ ಹಾಜರಿದ್ದರು.

ಪೊನ್ನಂಪೇಟೆ ತಾಲೂಕಿಗೆ ಹೆಚ್ಚುವರಿ ನೋಟರಿ ನೇಮಕ



ಮಡಿಕೇರಿ,ಫೆ.23– ಪೊನ್ನಂಪೇಟೆ ತಾಲೂಕಿನ ಹೆಚ್ಚುವರಿ ನೋಟರಿ ಆಗಿ ಧನುಗಾಲ ಗ್ರಾಮದ ಗುಂಬಿರ ಜೀವನ್ ಸುರೇಶ್ ಆಯ್ಕೆಯಾಗಿದ್ದಾರೆ. ಪೊನ್ನಂಪೇಟೆ ತಾಲೂಕಿಗೆ ಹೆಚ್ಚುವರಿ ಮೂವರು ನೋಟರಿ ನೇಮಕ ಮಾಡಲಾಗಿದ್ದು, 25 ವರ್ಷದಿಂದ ಬೆಂಗಳೂರು ಹೈಕೋರ್ಟ್, ವೀರಾಜಪೇಟೆ ಹಾಗೂ ಪ್ರಸ್ತುತ ಪೊನ್ನಂಪೇಟೆ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ.ಎಸ್.ಜೀವನ್ ಇದೀಗ ಹೆಚ್ಚುವರಿ ನೋಟರಿಯಾಗಿ ನೇಮಕಗೊಂಡಿದ್ದಾರೆ. ಬೆಂಗಳೂರು ಬಸವನಗುಡಿ ನ್ಯಾಷನಲ್ ಕಾಲೇಜ್‌ನಲ್ಲಿ ಬಿ.ಎ. ಪದವಿ, ಬೆಂಗಳೂರು ವಿಶ್ವೇಶ್ವರಯ್ಯ ಲಾ ಕಾಲೇಜಿನಲ್ಲಿ ಕಾನೂನು ಪದವಿ ಹೊಂದಿ ಕೆಲಕಾಲ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು.

ಉತ್ತಮ ಅನುಭವವೇ ಭೈರಪ್ಪನವರ ಕಾದಂಬರಿ ಶಕ್ತಿ



ಹೊಂಬೆಳಕು ಮಾಸಿಕ ತತ್ತ್ವ ಚಿಂತನಾಗೋಷ್ಠಿಯನ್ನು ಗಣ್ಯರು ಉದ್ಘಾಟಿಸಿದರು

ವಿರಾಜಪೇಟೆ, ಫೆ23–ಎಸ್.ಎಲ್.ಭೈರಪ್ಪ ಅವರ ದೂರದೃಷ್ಟಿ ಹೆಚ್ಚಾಗಿದ್ದು ಕಾದಂಬರಿಯ ಕ್ಷೇತ್ರದಲ್ಲಿ ಅವರ ಉತ್ತಮವಾದ ಅನುಭವವೇ ಒಂದು ಶಕ್ತಿಯಾಗಿತ್ತು ಎಂದು ಬಿಳುಗುಂದ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಡಾ.ಆರ್.ರವಿ ಭುಜವಳ್ಳಿ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ "ಹೊಂಬೆಳಕು ಕಿರಣ 240 ಮಾಸಿಕ ತತ್ತ್ವ ಚಿಂತನಾಗೋಷ್ಠಿ ಕಾರ್ಯಕ್ರಮ"ದಲ್ಲಿ "ಎಸ್.ಎಲ್.ಭೈರಪ್ಪ ಅವರ ಬದುಕು–ಬರಹ" ಎಂಬ ವಿಷಯದ ಬಗ್ಗೆ ಮಾತನಾಡಿ ಎಸ್.ಎಲ್.ಭೈರಪ್ಪ ಅವರು ಸಂಗೀತ ಮತ್ತು ಚಿತ್ರಕಲೆಯ ಕಲ್ಪನೆಯನ್ನು ಮುಂದಿಟ್ಟುಕೊಂಡು ಪುಸ್ತಕಗಳನ್ನು ರಚಿಸಿದ್ದು, ಜೀವನ ಮೌಲ್ಯಗಳನ್ನು ಸಾಮಾನ್ಯ ಓದುಗನು ಸುಲಭವಾಗಿ ಅರ್ಥೈಸಿಕೊಳ್ಳುವಂತೆ ಮಾಡಿದೆ. ಎಂದರು.

ಟಿ.ಶೆಟ್ಟಿಗೇರಿಯ ಉಳುವಂಗಡ ಕಾವೇರಿ ಉದಯ ಮಾತನಾಡಿದರು. ಇವರ 'ಭಕ್ತಿ ಪಥದಲ್ಲಿ ಪಯಣ' ಪುಸ್ತಕವನ್ನು ಗೋಣಿಕೊಪ್ಪಲು ಕಾಳಿಮಾಡ ಡಾ. ಕೆ.ಶಿವಪ್ಪ ಬಿಡುಗಡೆ ಮಾಡಿದರು, ಸಾಹಿತಿ ಗಿರೀಶ್ ಕಿಗ್ಗಾಲು, ವೈದ್ಯರಾದ ಡಾ, ಎಸ್.ವಿ. ನರಸಿಂಹನ್, ನಿವೃತ್ತ ಪ್ರಾಂಶುಪಾಲ ಪಟ್ಟಡ ಪೂವಣ್ಣ ಉಪಸ್ಥಿತರಿದ್ದರು.

ಸೀತಮ್ಮ ಮುತ್ತವ್ವ ನಿಧನ



ನಾಪೋಕ್ಲು, ಫೆ.23– ಸಮೀಪದ ನೆಲಜಿ ಗ್ರಾಮದ ನಿವಾಸಿ ಸೀತಮ್ಮ ಮುತ್ತವ್ವ (95) ಸೋಮವಾರ ಸ್ವರ್ಗಸ್ಥರಾದರು. ಮೃತರು ನಾಲ್ವರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ನೆಲಜಿ ಗ್ರಾಮದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯುವಜನರು ಪುಸ್ತಕ ಸಂಸ್ಕೃತಿಯಿಂದ ದೂರ ಸರಿಯುತ್ತಿದ್ದಾರೆ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಭಿಮತ



ಕನ್ನಡ ಪುಸ್ತಕ ಪ್ರಾಧಿಕಾರದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಅಧ್ಯಕ್ಷ ಮಾನಸ ಅರ್ಹತಾ ಪತ್ರ ವಿತರಿಸಿದರು.

ಮಡಿಕೇರಿ, ಫೆ.23–ಇಂದಿನ ಆಧುನಿಕ ಯುಗದಲ್ಲಿ ಯುವಜನರು ಪುಸ್ತಕ ಸಂಸ್ಕೃತಿಯಿಂದ ದೂರ ಸರಿಯುತ್ತಿದ್ದು, ಯುವಜನರಲ್ಲಿ ಓದುವ ಹವ್ಯಾಸ ಮೂಡಿಸಲು 'ಅಂಗಳದಲ್ಲಿ ತಿಂಗಳ ಪುಸ್ತಕ ಹಾಗೂ ಮನೆಗೊಂದು ಗ್ರಂಥಾಲಯ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ತಿಳಿಸಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ಮನೆಗೊಂದು ಗ್ರಂಥಾಲಯ ಕರಪತ್ರ ಬಿಡುಗಡೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತ ಸಮಿತಿ ಸದಸ್ಯರಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಯುವಜನರಲ್ಲಿ ಪುಸ್ತಕ ಸಂಸ್ಕೃತಿ ಬಿತ್ತಬೇಕು ಎಂಬ ಉದ್ದೇಶದಿಂದ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 30 ಜಿಲ್ಲೆಗಳಲ್ಲಿ ಕಾರ್ಯಕ್ರಮ ನಡೆಸಲಾಗಿದೆ ಎಂದರು.

ರಾಜ್ಯದಲ್ಲಿ ಲಕ್ಷ ಮನೆಗಳಲ್ಲಿ ಗ್ರಂಥಾಲಯ ಭಂಡಾರ ಸ್ಥಾಪಿಸಲಾಗುತ್ತದೆ. ಜನ ಪ್ರತಿನಿಧಿಗಳು, ಚಲನಚಿತ್ರ ನಟ ನಟಿಯರು ಸೇರಿದಂತೆ ಎಲ್ಲರ ಮನೆಯಲ್ಲೂ ಸಹ ಪುಸ್ತಕ ಭಂಡಾರ ಇರಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಪತ್ರಕರ್ತರ ಸಂಘದ ಅಧ್ಯಕ್ಷ ಎಚ್.ಟಿ.ಅನಿಲ್ ಮಾತನಾಡಿದರು. ಅರ್ಹತಾ ಪತ್ರವನ್ನು ಬಿ.ಎನ್. ಪ್ರಕಾಶ್, ಸುಬ್ರಾಯ ಸಂಪಾಜೆ, ಎಚ್.ಎಲ್. ದಿವಾಕರ, ರಂಜಿತ್ ಕವಲಪಾರ, ಮುರಳಿಧರ, ಕೆ.ವಿ.ಉಮೇಶ್, ಕೆ.ಜಯಲಕ್ಷ್ಮಿ, ಕೇಶವ ಕಾಮತ್, ಟಿ.ಪಿ.ರಮೇಶ್, ಪ್ರತಿಮಾ ರೈ ಅವರಿಗೆ ವಿತರಿಸಲಾಯಿತು. ಶ್ರೀನಿವಾಸ್ ಸ್ವಾಗತಿಸಿದರು, ಕೆ.ಜಯಲಕ್ಷ್ಮಿ ಅವರು ನಿರೂಪಿಸಿದರು.

ನಾಲ್ವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ

ರಾಜ್ಯದ ನಾಲ್ಕು ಕಂದಾಯ ವಿಭಾಗದಲ್ಲಿ ನಾಲ್ಕು ಮಂದಿ ವಿದ್ವಾಂಸರ ಹೆಸರಿನಲ್ಲಿ ನಾಲ್ಕು ಪ್ರಶಸ್ತಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಈ ವಾರ್ಷಿಕ ಪ್ರಶಸ್ತಿಗಳನ್ನು ಮುಖ್ಯಮಂತ್ರಿ ಅವರಿಂದ ಪ್ರದಾನ ಮಾಡಿಸುವ ಯೋಜನೆ ಇದೆ.ನಂಜನಗೂಡು ತಿರುಮಲಾಂಬ ಪ್ರಶಸ್ತಿ, ಹಾ.ಮಾ.ನಾಯಕ ಪ್ರಶಸ್ತಿ, ಪಿ.ಆರ್.ತಿಪ್ಪೇಸ್ವಾಮಿ ಪ್ರಶಸ್ತಿ, ಗಳಗನಾಥರ ಹೆಸರಿನಲ್ಲಿ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ. –ಡಾ. ಮಾನಸ

ದಲಿತ ಸಿಎಂಗೆ ನನ್ನ ವಿರೋಧ ಇಲ್ಲ

ಚಾಮರಾಜನಗರ, ಫೆ.23– ದಲಿತ ಮುಖ್ಯಮಂತ್ರಿಗೆ ನನ್ನ ವಿರೋಧವಿಲ್ಲ. ಆದರೆ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಹೇಳಿದರು.

ದಲಿತ ಸಿಎಂ ವಿಚಾರವಾಗಿ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅವಕಾಶ ಬಂದಾಗ ಯಾರಾದರೂ ಸಿಎಂ ಆಗಲಿ, ನಾನೇನು ಹೇಳಲಿ ದಲಿತ ಸಿಎಂ ಬಗ್ಗೆ ಮಾತನಾಡಿರುವವರನ್ನೇ ಕೇಳಿ ಎಂದು ತಿಳಿಸಿದರು.

ನಾನು ರಾಜಕೀಯ ಕೊನೆಗಾಲದಲ್ಲಿದ್ದೇನೆ. ನನಗೆ ರಾಜಕೀಯ ಇದೇ ಕೊನೆ ಎಂದರು. ಮಂತ್ರಿ ಸ್ಥಾನ ನೀಡಲು 31 ಕಾಂಗ್ರೆಸ್ ಶಾಸಕರಿಂದ ಹೈಕಮಾಂಡ್‌ಗೆ ಪತ್ರ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಸಚಿವರು, ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಸಫಾರಿ ಪುನಾರಂಭ ಖಂಡಿಸಿ ರೈತರ ಪ್ರತಿಭಟನೆ

ತಜ್ಞರ ಸಲಹಾ ಸಮಿತಿ ಯಾವಾಗ ಬಂದಿತ್ತು, ಏನನ್ನು ಪರಿಶೀಲನೆ ಮಾಡಿತು?: ರೈತರ ಪ್ರಶ್ನೆ



ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸಫಾರಿ ನಿಲ್ಲಿಸುವಂತೆ ಒತ್ತಾಯಿಸಿದರು.

ಚಾಮರಾಜನಗರ, ಫೆ23– ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಪುನರಾರಂಭ ಮಾಡಿರುವುದನ್ನು ಖಂಡಿಸಿ ನಗರದಲ್ಲಿ ಸಾಮೂಹಿಕ ನಾಯಕತ್ವದ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯಿಂದ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸಾಮೂಹಿಕ ನಾಯಕತ್ವದ ರೈತ ಸಂಘದ ಅಧ್ಯಕ್ಷೀಯ ಮಂಡಳಿಯ ಸದಸ್ಯ ಹೊನ್ನೂರು ಪ್ರಕಾಶ ಮಾತನಾಡಿ, ಕಾಡುಪ್ರಾಣಿಗಳ ದಾಳಿಯಿಂದ ಹಲವರು ಮೃತಪಟ್ಟಿದ್ದು ಹುಲಿಗಳು ಕೂಡ ಮೃತಪಟ್ಟಿದ್ದವು. ಇದರಿಂದಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ಸಫಾರಿಯನ್ನು ಬಂದ್ ಮಾಡಿದ್ದರು. ಆದರೆ, ಈಗ ಲಂಚಕ್ಕಾಗಿ ಮತ್ತೆ ಸಫಾರಿಯನ್ನು ಪುನರಾರಂಭ ಮಾಡಿದ್ದಾರೆ ಎಂದು ದೂರಿದರು.

ತಜ್ಞರ ಸಲಹಾ ಸಮಿತಿ ಬಂದು ಪರಿಶೀಲನೆ ನಡೆಸಿದ್ದಾರೆ ಎನ್ನುತ್ತಾರೆ. ಆದರೆ, ಅವರು ಯಾವಾಗ ಬಂದಿದ್ದರು. ಏನನ್ನು ಪರಿಶೀಲನೆ ಮಾಡಿದರು ಎಂಬ ಮಾಹಿತಿಯೇ ಇಲ್ಲ. ಪ್ರವಾಸೋದ್ಯಮದ ಹೆಸರಿನಲ್ಲಿ ಅರಣ್ಯ ಹಾಗೂ ವನ್ಯಜೀವಿಗಳನ್ನು ನಾಶ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಫಾರಿ ಪುನರಾರಂಭವನ್ನು ಖಂಡಿಸಿ ಫೆ.25ರಂದು ಮೈಸೂರಿನಲ್ಲೂ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು. ಮಾ. 1 ಅಥವಾ 2 ರಿಂದ ಉಪವಾಸ ಸತ್ಯಾಗ್ರಹವನ್ನು ಮಾಡಲಾಗುವುದು ಎಂದು ಎಚ್ಚರಿಸಿದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸಫಾರಿ ನಿಲ್ಲಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಚಂಗಡಿ ಕರಿಯಪ್ಪ, ಮುಖಂಡರಾದ ಬಂದಿಗೌಡನಹಳ್ಳಿ ನಟರಾಜು, ಬರಗಿ ಮಹೇಶ್, ಬೇರಂಬಾಡಿ ಶಶಿ, ಶಾಂತಕುಮಾರ್, ಹಸಗೂಲಿ ಮಹೇಶ್, ಪುಟ್ಟಸ್ವಾಮಿ, ನಕ್ಷತ್ರ ಮೇರಿ ಇದ್ದರು.

ಇಂದು ಒಳಮೀಸಲಾತಿ ಅನ್ಯಾಯ ಖಂಡಿಸಿ ಬೃಹತ್ ಪ್ರತಿಭಟನೆ

ಚಾಮರಾಜನಗರ: ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಪದ್ಧತಿಯ ಅನ್ಯಾಯ ಖಂಡಿಸಿ ಬಲಗೈ ಸಮುದಾಯದ ವತಿಯಿಂದ ನಾಳೆ (ಮಂಗಳವಾರ) ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಗೌರವಾಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ ಹೇಳಿದರು.

ನಗರದಲ್ಲಿ ನಡೆದ ತುರ್ತುಸಭೆಯಲ್ಲಿ ಅವರು ಮಾತನಾಡಿ, ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಬಿಂದು ಪದ್ಧತಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ. ಮಂಗಳವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ಬೆ.10 ಗಂಟೆಗೆ ದೊಡ್ಡಂಗಡಿ ಬೀದಿ ಮಾರ್ಗವಾಗಿ ಹೊರಟು ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತದ ಮಾರ್ಗವಾಗಿ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಕಾಡಂಚಿನ ಗ್ರಾಮಗಳಿಗೂ ಗುಣಮಟ್ಟದ ವಿದ್ಯುತ್ ಪೂರೈಕೆಗೆ ವಿದ್ಯುತ್ ಉಪಕೇಂದ್ರ ನಿರ್ಮಾಣ



ಗುಂಡ್ಲುಪೇಟೆ ತಾಲೂಕಿನ ವಡ್ಡಗೆರೆ ಗ್ರಾಮದಲ್ಲಿ ವಿದ್ಯುತ್ ಪ್ರಸರಣಾ ಕೇಂದ್ರ ನಿರ್ಮಾಣ ಕಾಮಗಾರಿಗೆ ಹೆಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ, ಫೆ.23– ಕಾಡಂಚಿನ ಗ್ರಾಮಗಳಿಗೂ ಗುಣಮಟ್ಟದ ವಿದ್ಯುತ್ ಪೂರೈಸುವ ಸಲುವಾಗಿ ವಡ್ಡಗೆರೆ ಗ್ರಾಮದಲ್ಲಿ ನೂತನ ವಿದ್ಯುತ್‌ಉಪಕೇಂದ್ರ ನಿರ್ಮಾಣ ಮಾಡಲಾಗುತ್ತಿದೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿನ ವಡ್ಡಗೆರೆ ಗ್ರಾಮದಲ್ಲಿ 16 ಕೋಟಿ ವೆಚ್ಚದಲ್ಲಿ 66/11 ಕೆವಿ ಸಾಮರ್ಥ್ಯದ ನೂತನ ವಿದ್ಯುತ್ ಪ್ರಸರಣಾ ಘಟಕ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ದಿ.ಮಹದೇವಪ್ರಸಾದ್ ಅವಧಿಯಲ್ಲಿಯೇ ಈ ಭಾಗದ ಕಡಬೂರು, ಕುಂದಕೆರೆ, ರಾಮಯ್ಯನಪುರ, ಬೊಮ್ಮನಹಳ್ಳಿ, ಚಿರಕನಹಳ್ಳಿ, ಕರಕಲಮಾದಹಳ್ಳಿ ಮುಂತಾದ ಹಲವಾರು ಗ್ರಾಮಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ವಿದ್ಯುತ್ ಉಪಕೇಂದ್ರ ಮಂಜೂರು ಮಾಡಲಾಗಿತ್ತು.

ಈ ಕೇಂದ್ರ ನಿರ್ಮಾಣಕ್ಕೆ ಸ್ಥಳ ಗುರ್ತಿಸಿದ್ದರೂ ಹಿಂದಿನ ಶಾಸಕರು ತಮ್ಮದೇ ಸರ್ಕಾರ ಅಧಿಕಾರದಲ್ಲಿದ್ದರೂ ಇದರ ನಿರ್ಮಾಣಕ್ಕೆ ಮುಂದಾಗಲಿಲ್ಲ. ಆದರೆ ತಮ್ಮ ಅವಧಿಯಲ್ಲಿ ಕ್ಷೇತ್ರದಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಕಂಡು ಹೊಟ್ಟೆಕಿಚ್ಚಿನಿಂದ ಟೀಕೆ ಮಾಡುತ್ತಿದ್ದಾರೆ ಎಂದರು.

ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂಬ ನಂಬಿಕೆಯಿಂದ ತಾವು ವಿರೋಧಿಗಳ ಟೀಕೆಗಳ ಬಗ್ಗೆ ಮಾತನಾಡದೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕೆಲಸ ಮಾಡುತ್ತಿದ್ದೇನೆ. ಈಗಾಗಲೇ ಸರ್ಕಾರದಿಂದ ಹಲವು ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿದ್ದು ಮುಂದಿನ ತಿಂಗಳು ಆರಂಭವಾಗಲಿರುವ ಬಜೆಟ್ ಅಧಿವೇಶನಕ್ಕೂ ಮೊದಲೇ ಮತ್ತಷ್ಟು ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಲೆಮಹದೇಶ್ವರ ಬೆಟ್ಟದ ಧರ್ಮದರ್ಶಿ ಮಂಡಲಿಯ ಮಾಜಿ ಅಧ್ಯಕ್ಷ ಡಿ.ಎಸ್.ಸಿದ್ದಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಜಿ.ಮಡಿವಾಳಪ್ಪ, ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ವೈ.ಎನ್.ರಾಜಶೇಖರ್, ಮುಖಂಡರಾದ ಶಿವಣ್ಣ, ವಿ.ಆರ್.ನಾಗಪ್ಪ, ಕೆ.ಎಂ.ಪ್ರಭುಸ್ವಾಮಿ, ರಾಜು ಕುಂದಕೆರೆ ಇದ್ದರು.

ತೆರಿಗೆದಾರರ ತೊಂದರೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನ

ತೆರಿಗೆದಾರ, ತೆರಿಗೆ ಸಲಹೆಗೆಗಾರರೊಂದಿಗೆ ಸಂವಾದ



ಸಂವಾದ ಕಾರ್ಯಕ್ರಮವನ್ನು ಇಲಾಖೆಯ ಸಹಾಯಕ ಆಯುಕ್ತ ಟಿ.ಜಿ.ಸುರೇಶ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಚಾಮರಾಜನಗರ: ತೆರಿಗೆದಾರರು, ತೆರಿಗೆ ಸಲಹೆಗಾರರು ಯಾವುದೇ ಹಿಂಜರಿಕೆ ಇಲ್ಲದೆ ನಿಮ್ಮ ತೊಂದರೆ, ಸಂದೇಶಗಳು, ಸಲಹೆ, ಸೂಚನೆಗಳನ್ನು ತಮ್ಮ ಗಮನಕ್ಕೆ ತಂದರೆ ಮೇಲಾಧಿಕಾರಿಗಳು, ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನ ಮಾಡಲಾಗುವುದು ಎಂದು ಕೇಂದ್ರೀಯ ತೆರಿಗೆ ಸಹಾಯಕ ಆಯುಕ್ತ ಟಿ.ಜಿ. ಸುರೇಶ್ ಹೇಳಿದರು.

ನಗರದ ಭುಜಂಗೇಶ್ವರ ಬಡಾವಣೆಯಲ್ಲಿರುವ ಕೇಂದ್ರೀಯ ತೆರಿಗೆ ಅಧೀಕ್ಷಕರ ಕಾರ್ಯಾಲಯದಲ್ಲಿ ತರಿಗೆ ಇಲಾಖೆ ವತಿಯಿಂದ ತೆರಿಗೆದಾರರು, ತೆರಿಗೆ ಸಲಹೆಗಾರಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜಿಎಸ್‌ಟಿ ಅರಂಭವಾಗುವ ಸಂದರ್ಭದಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ಹೊಸ ತೆರಿಗೆ ಪದ್ಧತಿ ಆಗಿದ್ದರಿಂದ ಅದರ ಬಗ್ಗೆ ತಿಳಿಸಿಕೊಡಲು ಎಲ್ಲ ಕಡೆ ಸಾಕಷ್ಟು ಅರಿವು ಕಾರ್ಯಕ್ರಮಗಳನ್ನು ಮಾಡಿದ್ದೆವು. ಜಿಎಸ್‌ಟಿ ಬಂದು 9 ವರ್ಷಗಳು ಕಳೆದಿದೆ. ಆದರೂ ಇನ್ನೂ ಸಾಕಷ್ಟು ಅರಿವು ಅಗತ್ಯವಾಗಿದೆ ಎಂದರು.

ತೆರಿಗೆ ಪದ್ಧತಿ ಅನುಷ್ಠಾನದಲ್ಲಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದೀರಿ. ಸಿಸ್ಟಂ ಸಮಸ್ಯೆಗಳು ಸಾಕಷ್ಟು ಇದ್ದಾವೆ. ಅದಕ್ಕೆ ಕೇಂದ್ರ ಸರ್ಕಾರದವರು ಏನು ಮಾಡಿದ್ದರೆ ಅಂದರೆ ಪ್ರತಿ ಎರಡು, ಮೂರು, ಆರು ತಿಂಗಳೊಮ್ಮೆ ತೆರಿಗೆದಾರರೊಡನೆ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ತೆರಿಗೆ ಪದ್ಧತಿ, ಅನುಷ್ಠಾನದಲ್ಲಿ ಕುಂದು–ಕೊರತೆಗಳು ಇರಬಹುದು ಅದರ ಬಗ್ಗೆ ಅವರಿಂದ ಸಲಹೆ, ಸೂಚನೆಗಳನ್ನು ಪಡೆದು ಸಂದೇಹಗಳನ್ನು ಪರಿಹರಿಸಲು ಸಂವಾದ ಕಾರ್ಯಕ್ರಮಗಳನ್ನು ಅಯೋಜಿಸುವಂತೆ ಆದೇಶಿಸಿದರು. ಅದರಂತೆ ಸಂವಾದಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಮೈಸೂರಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಆದರೆ ಚಾಮರಾಜನಗರದಲ್ಲಿ ಸೇರಿರುವ ತೆರಿಗೆದಾರರು, ಆಡಿಟರ್ ನೋಡಿ ತುಂಬಾ ಖುಷಿಯಾಗಿದೆ. ಇಂತಹ ಸ್ಪಂದನೆ ಮೈಸೂರಿನಲ್ಲಿ ಸಿಗಲಿಲ್ಲ. ಅದಕ್ಕಾಗಿ. ನಿಮಗೆಲ್ಲರಿಗೂ ಅಭಿನಂದನೆ ತಿಳಿಸುತ್ತೇವೆ. ನೀವು ಸಲಹೆ ಸೂಚನೆಗಳು ಸಂದೇಶ ಕೊಟ್ಟರೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನ ಮಾಡುತ್ತೇನೆ ಎಂದರು.

ಸಹಾಯಕ ಆಯುಕ್ತರಾದ ರಮೇಶ್ ಕಂಚಿಬೈಲ್, ರಘುರಾಜು, ಶಿವಶಂಕರ್, ಮಾತನಾಡಿದರು. ಸಂವಾಧದಲ್ಲಿ ತೆರಿಗೆ ಸಲಹೆಗಾರರು ಸಲಹೆ, ಸೂಚನೆಗಳನ್ನು ನೀಡಿದರು. ಸಂವಾದದಲ್ಲಿ ತೆರಿಗೆ ಇಲಾಖೆಯ ಅಧೀಕ್ಷಕರಾದ ಪ್ರಸನ್ನಕುಮಾರ್, ಎಸ್.ವಿ.ಕೃಷ್ಣನ್, ವೆಂಕಟಕೃಷ್ಣ , ಇನ್ಸ್‌ಪೆಕ್ಟರ್ ಜಗದೀಶ್, ತೆರಿಗೆದಾರರು, ತೆರಿಗೆ ಸಲಹೆಗಾರರು ಭಾಗವಹಿಸಿದ್ದರು. ಆಡಿಟರ್ ವೆಂಕಟೇಶ್ ಪ್ರಾರ್ಥಿಸಿದರು.

ಸರ್ಕಾರಿ ಕಟ್ಟೆ ಉಳಿಸಿಕೊಟ್ಟ ಯಳಂದೂರು ತಹಸೀಲ್ದಾರ್‌ಗೆ ಗ್ರಾಮಸ್ಥರಿಂದ ಅಭಿನಂದನೆ



ಯಳಂದೂರು, ಫೆ.23– ತಾಲೂಕಿನ ಕೊಮಾರನಪುರ ಗ್ರಾಮದ ಸರ್ಕಾರಿ ಕಟ್ಟೆ ಅತಿಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸಿ ಉಳಿಸಿಕೊಟ್ಟ ತಹಸೀಲ್ದಾರ್ ನಯನ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಸರ್ಕಾರಿ ಕಟ್ಟೆ ಉಳಿಸಿಕೊಟ್ಟ ಜಾಗಕ್ಕೆ ಭೇಟಿ ನೀಡಿದ ಗ್ರಾಮಸ್ಥರಾದ ಕೆ.ವಿ.ಸುಬ್ಬಣ್ಣ ಮಾತನಾಡಿ ತಹಸೀಲ್ದಾರ್ ನಯನ ಅವರ ಪ್ರಾಮಾಣಿಕ ಕಾರ್ಯ, ದಕ್ಷತೆ ಹಾಗೂ ಕಾರ್ಯವೈಖರಿ ರಾಜ್ಯದ ಎಲ್ಲಾ ತಹಸೀಲ್ದಾರ್‌ಗಳಿಗೆ ಮಾದರಿಯಾಗಿದೆ. ಯಾವುದೇ ಒತ್ತಡ ಮತ್ತು ಪ್ರಭಾವಗಳಿಗೆ ಮಣಿಯದೆ ಗ್ರಾಮಸ್ಥರಿಗೆ ನ್ಯಾಯ ಕೊಡಿಸಿದ್ದಾರೆ ಎಂದರು.

ಶಿವರಾಮೇಗೌಡ ಮಾತನಾಡಿ ತಹಸೀಲ್ದಾರ್ ರವರು ಮನವಿ ಸಲ್ಲಿಸಿದ ತಕ್ಷಣ ನಮಗೆ ನ್ಯಾಯ ಕೊಡಿಸಿದ್ದಾರೆ. ಹಿಂದೆ ಈ ಕಟ್ಟೆಯಲ್ಲಿ ಜಾನುವಾರುಗಳು ನೀರು ಕುಡಿಯಲು, ಸ್ವಚ್ಛ ಮಾಡಲು ಬಳಸುತ್ತಿದ್ದರು. ರೈತರು ಒಕ್ಕಣೆ ಮಾಡುತ್ತಿದ್ದರು. ಈ ಜಾಗದಲ್ಲಿ ಫಾರೆಸ್ಟ್ ನರ್ಸರಿ ಕೂಡ ಇತ್ತು. ಇದನ್ನ ಪ್ರಭಾವಿಗಳು ಅತಿಕ್ರಮಿಸಿಕೊಂಡಿದ್ದರಿಂದ ಗ್ರಾಮಸ್ಥರಿಗೆ ಅನಾನೂಕೂಲವಾಗಿತ್ತು. ತಹಸೀಲ್ದಾರ್ ಅವರ ದಕ್ಷ ಆಡಳಿತದಿಂದ ಅ ಜಾಗ ಉಳಿದುಕೊಂಡಿದೆ. ಹಾಗಾಗಿ ತಹಸೀಲ್ದಾರ್ ನಯನರವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಗ್ರಾಪಂ ಮಾಜಿ ಸದಸ್ಯ ನಟರಾಜು ಹಾಗೂ ತಂಬಡಿ ಶಿವರಾಮೇ ಗೌಡ ಹಾಜರಿದ್ದರು.

ಸರ್ಕಾರ, ಪಕ್ಷದ ವಿರುದ್ಧ ಪತ್ರ ಬರೆದಿಲ್ಲ: ಗಣೇಶ ಪ್ರಸಾದ್

ಚಾಮರಾಜನಗರ, ಫೆ.23– ಪಕ್ಷದ ವಿರುದ್ಧ, ಸರ್ಕಾರದ ವಿರುದ್ಧ ನಾನು ಪತ್ರ ಬರೆದಿಲ್ಲ. ಅವಕಾಶ ಇದ್ದರೆ ಸಚಿವ ಸ್ಥಾನ ಕೊಡಿ ಅನ್ನೋ ಅರ್ಥದಲ್ಲಿ ಬರೆದಿದ್ದೇವೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅವಶ್ಯಕತೆ ಇಲ್ಲ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ಹೇಳಿದರು.

ಮೊದಲ ಬಾರಿಗೆ ಗೆದ್ದ ಶಾಸಕರಿಗೆ ಸಚಿವ ಸ್ಥಾನಕ್ಕಾಗಿ ಪತ್ರ ಬರೆದ ವಿಚಾರವಾಗಿ ಪ್ರತಿಕ್ರಯಿಸಿರುವ ಅವರು ಸಚಿವ ಸ್ಥಾನಕ್ಕೆ ಮುಂದೆ ಅವಕಾಶ ಸಿಕ್ಕರೆ ನೋಡೋಣ ಅನ್ನೋ ಮನಸ್ಥಿತಿಯಲ್ಲಿ ಪತ್ರ ಬರೆದಿದ್ದೇವೆ. ವಿನಾಃ ಪಕ್ಷದ ವಿರುದ್ಧ, ಸರ್ಕಾರದ ವಿರುದ್ಧ ನಾವು ಪತ್ರ ಬರೆದಿಲ್ಲ ಎಂದು ಸ್ಪಷ್ಟಪಡಿಸಿದರು. ಇದು ಮೂರು ನಾಲ್ಕು ತಿಂಗಳ ಹಿಂದೆ ಬರೆದಿರುವ ಪತ್ರ ಇದು ಈಗ ಹೇಗೆ ಬಂತೂ ಅಂತಾ ಆಶ್ಚರ್ಯ ಆಗ್ತಿದೆ. ಈ ವಿಚಾರ ಹೈಕಮಾಂಡ್‌ಗೆ ಕೂಡ ಗೊತ್ತಿದೆ. ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧರಾಗ್ತಿವೆ ಎಂದು ತಿಳಿಸಿದರು.

ಮೈಸೂರು ಮಿತ್ರ

ಮೈಸೂರಿನ ಗಾಲ್ಫ್ ಕ್ಲಬ್‌ನ 'ಗಾಲ್ಫ್ ಹಟ್' ಯೋಜನೆಯಲ್ಲಿ 3.95 ಕೋಟಿ ದುರುಪಯೋಗದ ಆರೋಪ

● ವಿಶೇಷ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಆಕ್ರೋಶ; ಕ್ರಮಕ್ಕೆ ಪಟ್ಟು

● ಏಳು ಸದಸ್ಯರ ತನಿಖಾ ಸಮಿತಿ ರಚಿಸಿ; ಮಾರ್ಚ್ 31 ರೊಳಗೆ ವರದಿ ಕೋರಿಕೆ

ಮೈಸೂರು, ಫೆ.23(ಬಿಸಿಟಿ, ಬಿಎಲ್‌ಯು)– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್(ಜೆಡಬ್ಲ್ಯುಜೆಸಿ)ನ ವಿಶೇಷ ವಾರ್ಷಿಕ ಮಹಾಸಭೆಯಲ್ಲಿ 'ಗಾಲ್ಫ್ ಹಟ್' ನಿರ್ಮಾಣ ಯೋಜನೆಯಲ್ಲಿ 3.93 ಕೋಟಿಗೂ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ಸದಸ್ಯರು ಗಂಭೀರ ಆರೋಪ ಮಾಡಿದ್ದಾರೆ.

ಈ ವಿಚಾರವಾಗಿ ಸಭೆಯಲ್ಲಿ ಕಾವೇರಿದ ಚರ್ಚೆ ನಡೆದಿದ್ದು, ಮಾತಿಗೆ ಮಾತು ಬೆಳೆದು ಗಲಾಟೆ, ಗದ್ದಲ ಉಂಟಾಗಿದ್ದಾಗಿ ಕ್ಲಬ್‌ನ ಮೂಲಗಳು 'ಮೈಸೂರು ಮಿತ್ರ'ನಿಗೆ ಖಚಿತಪಡಿಸಿವೆ.

ಕ್ಲಬ್‌ನ ಹಿಂದಿನ ಪದಾಧಿಕಾರಿಗಳ ಧೋರಣೆ ಬಗ್ಗೆ ಸದಸ್ಯರು ಪ್ರಸಕ್ತ ಸಾಲಿನ ಸಾಮಾನ್ಯ ಸಭೆಯಲ್ಲಿ ಪ್ರಶ್ನಿಸಿದ್ದಾರೆ. ಯಂತ್ರೋಪಕರಣಗಳ



ಖರೀದಿ, ಹಣಕಾಸು ವಹಿವಾಟಿನಲ್ಲಿ ಅವ್ಯವಹಾರ, ಅಧಿಕ ಬಿಲ್ಲಿಂಗ್, ಪ್ರಮಾಣಿತ ಕಾರ್ಯ ವಿಧಾನ(ಎಸ್‌ಒಪಿ) ಹಾಗೂ ಟೆಂಡರ್ ನಿಯಮ ಉಲ್ಲಂಘನೆ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ಟೆಂಡರ್ ಮಾನದಂಡಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ ಎಂದು ಆಪಾದಿಸಿರುವುದಾಗಿ ತಿಳಿದುಬಂದಿದೆ.

ಈ ಹಿಂದಿನ ವಾರ್ಷಿಕ ಮಹಾಸಭೆಯಲ್ಲಿ ಗಾಲ್ಫ್ ಹಟ್ ಅನ್ನು ಗಾಲ್ಫ್ ಪೆವಿಲಿಯನ್ ಆಗಿ ಪರಿವರ್ತಿಸುವ ಯೋಜನೆ ಬಗ್ಗೆ ಚರ್ಚೆ ನಡೆಸಿತ್ತು. ಯಾವುದೇ ಕಾರಣಕ್ಕೂ ಈ ಯೋಜನೆಯ ವೆಚ್ಚ 50 ಲಕ್ಷ ಮೀರಬಾರದು ಎಂಬ ಷರತ್ತಿನ ಮೇರೆಗೆ ಸರ್ವ ಸದಸ್ಯರ ಸಾಮಾನ್ಯ ಸಭೆ ಅನುಮೋದನೆ ನೀಡಿತ್ತು. ಆದರೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಆಗದೆಯೂ 3.95 ಕೋಟಿಗೆ ವೆಚ್ಚ ಹೆಚ್ಚಳ ಮಾಡಿದ್ದಾರೆ. ಈ ಮೂಲಕ ದುಂದುವೆಚ್ಚ ಮಾಡಿದ್ದು, ಹಿಂದಿನ ಪದಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಆಗ್ರಹಿಸಿದ್ದಾರೆ.

ಕಾಮಗಾರಿಗಳ ಒಟ್ಟಾರೆ ವೆಚ್ಚ ಸುಮಾರು 2.5 ಕೋಟಿ ರೂ.ಗಳಾಗಿದ್ದು, ಆದರೆ ಒಂದೂವರೆ ಕೋಟಿ ಹೆಚ್ಚುವರಿ ವೆಚ್ಚವನ್ನು ತೋರಿಸಲಾಗಿದೆ. ಒಂದು ಕೋಟಿಗೂ ಹೆಚ್ಚು ಮೌಲ್ಯದ ಸ್ಪ್ರೇಯಿಂಗ್ ಯಂತ್ರ ಖರೀದಿಸಿದ್ದು, ಆದರೆ, ಅದನ್ನು ಕಳೆದ ಒಂದು ವರ್ಷದಿಂದ ಬಳಕೆ ಮಾಡದೆ ಧೂಳು ಹಿಡಿಸಿದ್ದಾರೆ. ಈ ಯಂತ್ರವು ಕ್ಲಬ್‌ಗೆ ಅಗತ್ಯವೇ ಇಲ್ಲ. ಅನುಮತಿಯಿಲ್ಲದೆ ಕೆಲವು ಖರ್ಚುಗಳಿಗೆ ಹಣ ಮಂಜೂರು ಮಾಡಲಾಗಿದೆ. ಈ ಎಲ್ಲಾ ಅಕ್ರಮಗಳನ್ನು ಆಂತರಿಕ ಲೆಕ್ಕ ಪರಿಶೋಧನಾ ವರದಿ ಕೂಡ ಗುರುತಿಸಿದೆ ಎಂದು ಸದಸ್ಯರು ದೂರಿದ್ದಾರೆ.

ಇಂತಹ ಹಲವು ಲೆಕ್ಕಪತ್ರಗಳಿಗೆ ಅನುಮೋದನೆಗೆ ಮುನ್ನ ನಡೆದಿರಬಹುದಾದಂತಹ ಅಕ್ರಮಗಳಿಗೆ ಸಂಬಂಧಿಸಿದಂತೆ ಆರೋಪದ ಬಗ್ಗೆ ಔಪಚಾರಿಕ ವಿಚಾರಣೆಗೆ ಮಹಾಸಭೆಯಲ್ಲಿ ನಿರ್ಧರಿಸಲಾಯಿತು. ಇದಕ್ಕಾಗಿ 7 ಸದಸ್ಯರ ತನಿಖಾ ಸಮಿತಿ ರಚಿಸಲಾಗಿದ್ದು, ಮಾರ್ಚ್ 31ರೊಳಗೆ ವರದಿ ಸಲ್ಲಿಸುವ ನಿರೀಕ್ಷೆ ಇದೆ. ಹಣ ದುರುಪಯೋಗ ಆರೋಪಗಳು ಸಾಬೀತಾದರೆ ಇದಕ್ಕೆಲ್ಲಾ ಅನುಮೋದನೆ ನೀಡಿದ ಹಿಂದಿನ ಪದಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಗಾಲ್ಫ್ ಹಟ್ ನೆಲಸಮಗೊಳಿಸಲು ಪಾಲಿಕೆ ನೋಟಿಸ್; ವಿಷಯ ಕೋರ್ಟ್ ಕಟಕಟೆಗೆ

ಮೈಸೂರಿನ ಗಾಲ್ಫ್ ಕ್ಲಬ್‌ನಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಲಾಗಿದೆ ಎನ್ನಲಾದ 'ಗಾಲ್ಫ್ ಹಟ್' ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.

ಅಕ್ರಮವಾಗಿ ನಿರ್ಮಿಸಿರುವ ಗಾಲ್ಫ್ ಹಟ್ ನೆಲಸಮಗೊಳಿಸುವಂತೆ ಮೈಸೂರು ನಗರ ಪಾಲಿಕೆಯ ವಲಯ ಕಚೇರಿ 1ರ ಆಯುಕ್ತರು ಜನವರಿ 31ರಂದು ಗಾಲ್ಫ್ ಕ್ಲಬ್ ಗೌರವ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಿದ್ದರು. ಕೂಡಲೇ ಗಾಲ್ಫ್ ಹಟ್ ನೆಲಸಮಗೊಳಿಸಿ, ಆ ಸಂಬಂಧ ವರದಿಯನ್ನು ನಗರ ಪಾಲಿಕೆಗೆ ಸಲ್ಲಿಸಬೇಕು. ಇಲ್ಲವಾದರೆ ನಗರ ಪಾಲಿಕೆಯೇ ನೆಲಸಮಗೊಳಿಸಿ, ಅದರ ವೆಚ್ಚವನ್ನು ತಮ್ಮಿಂದ ವಸೂಲು ಮಾಡುವುದರ ಜೊತೆಗೆ ಕಾನೂನು ಕ್ರಮ ಕೈಗೊಳ್ಳಬೇಕಾಗುವುದು ಎಂದು ಎಚ್ಚರಿಸಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಅಕ್ರಮ ನಿರ್ಮಾಣ ತೆರವಿಗೆ ನಾವು ಜಾರಿ ಮಾಡಿರುವ ನೋಟಿಸ್ ಪ್ರಶ್ನಿಸಿ ಜೆಡಬ್ಲ್ಯುಜೆಸಿ ಹೈಕೋರ್ಟ್ ಮೊರೆ ಹೋಗಿದೆ. ಪ್ರಸ್ತುತ ಈ ವಿಚಾರ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯದ ಸೂಚನೆಯಂತೆ ನಾವು ಗಾಲ್ಫ್‌ಕ್ಲಬ್‌ಗೆ ಸಂಬಂಧಿಸಿದವರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

ಗಾಲ್ಫ್ ಕ್ಲಬ್, ಮೈಸೂರು ರೇಸ್ ಕ್ಲಬ್ ವ್ಯಾಪ್ತಿಯಲ್ಲಿದೆ. ಹಾಗಾಗಿ ಈ ವಿಚಾರದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಟಿ.ಬಾಲಕೃಷ್ಣ ಹಾಗೂ ಕಾರ್ಯದರ್ಶಿ ಎನ್‌ಹೆಚ್‌ಎಸ್ ಮಣಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತಾದರೂ ಅದು ಸಾಧ್ಯವಾಗಲಿಲ್ಲ.

ಮಾಜಿ ಪ್ರಧಾನಿ ದೇವೇಗೌಡರ ಮಾಜಿ ಆಪ್ತ ಕಾರ್ಯದರ್ಶಿ ಎಂ.ವಿ.ದೇವಶೆಟ್ಟಿಗೌಡ ನಿಧನ



ದೇವಶೆಟ್ಟಿ ಗೌಡ

ಮೈಸೂರು, ಫೆ.23– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮಾಜಿ ಆಪ್ತ ಕಾರ್ಯದರ್ಶಿ ಎಂ.ವಿ.ದೇವಶೆಟ್ಟಿಗೌಡ(84) ಅವರು ದೀರ್ಘ ಕಾಲದ ಅನಾರೋಗ್ಯದಿಂದ ಸೋಮವಾರ ಸಂಜೆ ಬೆಂಗಳೂರಿನಲ್ಲಿ ನಿಧನರಾದರು.

ಮೂಲತಃ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಮುಳಕಟ್ಟೆ ಗ್ರಾಮದವರಾದ ಇವರು ಶಿಕ್ಷಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿ, ನಂತರ ಕರ್ನಾಟಕ ಸರ್ಕಾರಿ ಸಚಿವಾಲಯ ಸೇವೆಗೆ ಸೇರಿದರು. ವೈ.ಕೆ.ರಾಮಯ್ಯ, ಹೆಚ್.ಟಿ.ಕೃಷ್ಣಪ್ಪ, ಗೋವಿಂದೇಗೌಡ, ಕೆ.ಎನ್.ನಾಗೇಗೌಡ ಸೇರಿದಂತೆ ಹಲವು ಸಚಿವರಿಗೆ ವಿಶೇಷ ಕರ್ತವ್ಯ ಅಧಿಕಾರಿ(OSD)ಯಾಗಿ ಸೇವೆ ಸಲ್ಲಿಸಿದರು. ಸೇವಾ ನಿವೃತ್ತಿ ನಂತರ ದಾಖಲೆಯ 18 ವರ್ಷಗಳ ಕಾಲ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಪ್ತ ಕಾರ್ಯ ದರ್ಶಿಯಾಗಿ ಸೇವೆ ಸಲ್ಲಿಸಿದರು. ಕಳೆದ ಕೆಲವು ವರ್ಷಗಳಿಂದ ವಿವಿಧ ಕನ್ನಡ ಸಂಘಟನೆಗಳು ಮತ್ತು ನಿವಾಸಿ ಕಲ್ಯಾಣ ಸಂಘಗಳಲ್ಲಿ ಸಕ್ರಿಯರಾಗಿದ್ದರು.

ದೇವಶೆಟ್ಟಿಗೌಡರು ಮೂವರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬೆಂಗಳೂರಿನ ನಾಗರಬಾವಿಯಲ್ಲಿನ ಅವರ ನಿವಾಸದಲ್ಲಿ ಮಂಗಳವಾರ(ಫೆ.24) ಬೆಳಗ್ಗೆ 9.30ರವರಗೆ ಅಂತಿಮ ದರ್ಶನಕ್ಕಿಟ್ಟು, ಮಧ್ಯಾಹ್ನ ಮಂಡ್ಯ ತಾಲೂಕು, ಕೆರಗೋಡು ಸಮೀಪದ ಹಂಚಹಳ್ಳಿ ಗ್ರಾಮದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಡ್ರಗ್ಸ್ ಜಾಲದ ವಿರುದ್ಧ ಮೈಸೂರಲ್ಲಿ ಮುಂದುವರೆದ ಕಾರ್ಯಾಚರಣೆ

ಸಿಸಿಬಿ ಪೊಲೀಸರಿಂದ ನಾಲ್ವರು ಆರೋಪಿಗಳ ಸೆರೆ; 10 ಲಕ್ಷ ಮೌಲ್ಯದ ಎಂಡಿಎಂಎ ವಶ



ಬಂಧಿತರಿಂದ ವಶಪಡಿಸಿಕೊಂಡಿರುವ ವಸ್ತುಗಳು



ನುಹೇದ್ ಖಾನ್



ಜಾವೀದ್ ಅಹಮದ್



ಜಿಯಾವುಲ್ಲಾ



ಸುಹೇಲ್

ಮೈಸೂರು, ಫೆ.23– ಡ್ರಗ್ಸ್ ಜಾಲದ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ಮೈಸೂರು ನಗರ ಸಿಸಿಬಿ ಪೊಲೀಸರು ಮತ್ತೆ ನಾಲ್ವರು ಆರೋಪಿಗಳನ್ನು ಸೋಮವಾರ ಬಂಧಿಸಿ, 10 ಲಕ್ಷಕ್ಕೂ ಹೆಚ್ಚು ಮೌಲ್ಯದ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ನುಹೇದ್ ಖಾನ್ (23), ಮೈಸೂರಿನ ಲಷ್ಕರ್ ಮೊಹಲ್ಲಾದ ಜಾವೀದ್ ಅಹಮದ್(46), ಗೌಸಿಯಾ ನಗರದ ಜಿಯಾವುಲ್ಲಾ(28) ಹಾಗೂ ಸುಹೇಲ್ ಪಾಷ(19) ಬಂಧಿತರು. ಇವರ ಬಳಿಯಿದ್ದ 10,30,800 ರೂ. ಮೌಲ್ಯದ 103 ಗ್ರಾಂ 88 ಮಿಲಿ ಎಂಡಿಎಂಎ, ಕೃತ್ಯಕ್ಕೆ ಬಳಸಿದ್ದ 8 ಲಕ್ಷ ಮೌಲ್ಯದ ಇನ್ನೋವಾ ಕಾರು (ಕೆಎ–05, ಎನ್‌ಕೆ–7805) ಹಾಗೂ ಐದು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್‌ರಾಜು ಮಾರ್ಗದರ್ಶನ ಹಾಗೂ ಸಿಸಿಬಿ ಎಸಿಪಿ ಮಹಮ್ಮದ್ ಶರೀಫ್ ರಾವುತರ್ ನಿರ್ದೇಶನದಂತೆ ಸಿಸಿಬಿ–2 ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ನೇತೃತ್ವದಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೆ.ಲೇಪಾಕ್ಷ, ಜೋತ್ಸ್ನಾರಾಜ್, ರೇವಣ್ಣ ಸಿದ್ದಪ್ಪ, ಸಿಬ್ಬಂದಿ ಮಧು ಕುಮಾರ್, ಚೇತನ್, ಅಧಾವ್, ಕಿರಣ್ ರಾಥೋಡ್, ಸಂತೋಷ್ ಪವಾರ್, ಹಜ್ರತ್ ಅಲಿ, ರಾಜಾಸಾಬ್, ಸಮೀರ್, ಯಶ್ವಂತ್, ದೇವರಾಜು, ಎನ್.ಜಿ.ಮಮತಾ, ಸಿದ್ದರಾಜು ಹಾಗೂ ಸುರೇಶ್ ಅವರನ್ನೊಳಗೊಂಡ ತಂಡವು ಕಾರ್ಯಾಚರಣೆ ನಡೆಸಿದೆ.

ತಿಲಕ್‌ನಗರದ ಉಮರ್‌ಖಯಾಂ ರಸ್ತೆಯಲ್ಲಿ ಇನ್ನೋವಾ ಕಾರನ್ನು ತಪಾಸಣೆ ನಡೆಸಿದಾಗ ಅದರ ಡ್ಯಾಶ್‌ಬೋರ್ಡ್‌ನಲ್ಲಿ ಎಂಡಿಎಂಎ ಪತ್ತೆಯಾಗಿದೆ. ನಂತರ ಕಾರಿನಲ್ಲಿದ್ದ ನಾಲ್ವರನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಎಲ್ಲರ ಬಳಿಯೂ ಎಂಡಿಎಂಎ ಸಿಕ್ಕಿದೆ. ಆರೋಪಿ ಜಾವೀದ್ ಓರ್ವ ರೂಢಿಗತ ಪೆಡ್ಲರ್ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳು ಹಾಗೂ ವಶಪಡಿಸಿ ಕೊಂಡ ವಸ್ತುಗಳನ್ನು ಸಿಸಿಬಿ ಪೊಲೀಸರು ಮಂಡಿ ಪೊಲೀಸ್ ಠಾಣೆಯ ವಶಕ್ಕೆ ನೀಡಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ.

ಪ್ರೊ.ಕೆ.ರಾಮಕೃಷ್ಣಯ್ಯ ಸಂಗೀತ ವಿವಿ ನೂತನ ಕುಲಪತಿ



ಸಂಗೀತ ವಿಶ್ವವಿದ್ಯಾನಿಲಯದ ನೂತನ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ(ಬಲತುದಿ) ಅವರಿಗೆ ನಿರ್ಗಮಿತ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧಿಕಾರ ಹಸ್ತಾಂತರಿಸಿ, ಅಭಿನಂದಿಸಿದರು. ಕುಲಸಚಿವ(ಮೌಲ್ಯಮಾಪನ) ಪ್ರೊ.ಎಂ.ಜಿ.ಮಂಜುನಾಥ್ ಹಾಗೂ ಹಣಕಾಸು ಅಧಿಕಾರಿ ಸಿ.ಪಿ.ಸೌಮ್ಯಶ್ರೀ ಉಪಸ್ಥಿತರಿದ್ದರು.

ಮೈಸೂರು, ಫೆ.23– ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ(ಸಂಗೀತ ವಿವಿ)ದ ನೂತನ ಕುಲಪತಿಯಾಗಿ ಖ್ಯಾತ ರಂಗಕರ್ಮಿ, ಬೆಂಗಳೂರು ವಿಶ್ವವಿದ್ಯಾಲಯದ ಪರ್ಫಾರ್ಮಿಂಗ್ ಆರ್ಟ್ಸ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಕೆ.ರಾಮಕೃಷ್ಣಯ್ಯ ಅವರನ್ನು ನೇಮಕ ಮಾಡಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸೋಮವಾರ ಅಧಿಸೂಚನೆ ಹೊರಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರೊ.ಕೆ.ರಾಮಕೃಷ್ಣಯ್ಯ ಅವರು ವಿವಿಯ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ವೇಳೆ ನಿರ್ಗಮಿತ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರು ನೂತನ ಕುಲಪತಿಗೆ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದ್ದಾರೆ.

ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನ ಪ್ರೊ.ಕೆ.ರಾಮಕೃಷ್ಣಯ್ಯ ಅವರು ಬೆಂಗಳೂರು ನೀನಾಸಂ ಪದವೀಧರರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದಲ್ಲಿ ಎಂ.ಎ. ಡ್ರಾಮಾ ಪದವಿ, ಪಿಹೆಚ್.ಡಿ ಪದವಿ ಪಡೆದ ನಂತರ 25 ವರ್ಷ ಸುದೀರ್ಘ ಬೋಧನಾ ಅನುಭವ ಹೊಂದಿದ್ದಾರೆ. ಇವರ ಮಾರ್ಗದರ್ಶನದಲ್ಲಿ 16 ಸಂಶೋಧಕರು ಪಿಹೆಚ್.ಡಿ ಪದವಿ ಪಡೆದಿದ್ದು, ರಂಗಭೂಮಿ ಕುರಿತಾದ ಅನೇಕ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ.

ನಟ, ನಿರ್ದೇಶಕರಾಗಿರುವ ಇವರು ನಾಲ್ಕು ನಾಟಕಗಳನ್ನು ರಚಿಸಿ, ಪ್ರಕಟಿಸಿದ್ದಾರೆ. 2011ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಸ್ಟೇಟ್ ಫೆಲೋಶಿಪ್ ಹಾಗೂ 2017ರಲ್ಲಿ ನಾಟಕ ಅಕಾಡೆಮಿಯ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಸಾಂಸ್ಕೃತಿಕ ಸಂಯೋಜಕರಾಗಿ (Cultural Coordinator) 2017ರಿಂದ ಕಾರ್ಯನಿರ್ವಹಿಸುತ್ತಿದ್ದ ಇವರು, ಈ ಹಿಂದೆ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಡೀನ್ ಆಗಿ ಹಾಗೂ ಪರ್ಫಾರ್ಮಿಂಗ್ ಆರ್ಟ್ಸ್ ವಿಭಾಗದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಇನ್ನು ಕುಲಪತಿ ಸ್ಥಾನದ ಅವಧಿ ಮುಗಿದ ಹಿನ್ನೆಲೆಯಲ್ಲಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರು ಬೆಂಗಳೂರು ವಿವಿ ಪ್ರದರ್ಶಕ ಕಲಾ ವಿಭಾಗದ ಪ್ರಾಧ್ಯಾಪಕ ಹುದ್ದೆಗೆ ಮರಳಿದ್ದಾರೆ. ಇವರನ್ನು 06.01.2019 ರಿಂದ ಜಾರಿಗೆ ಬರುವಂತೆ ಒಂದು ತಿಂಗಳ ಅವಧಿಗೆ ಸಂಗೀತ ವಿವಿ ಹಂಗಾಮಿ ಕುಲಪತಿಯಾಗಿ ನೇಮಿಸಲಾಗಿತ್ತು. ನಂತರ ನಿಯಮಿತ ಕುಲಪತಿಗಳನ್ನು ನೇಮಿಸುವವರೆಗೆ ಕುಲಪತಿಗಳ ಕರ್ತವ್ಯ ನಿರ್ವಹಿಸಲು ಅವರ ನೇಮಕಾತಿ ಅವಧಿಯನ್ನು ವಿಸ್ತರಿಸಲಾಗಿತ್ತು. ನಂತರ 2021ರ ಜನವರಿ 22ರಂದು ಕುಲಪತಿಯಾಗಿ ನೇಮಕಗೊಂಡಿದ್ದರು. 2025ರ ಜನವರಿ 22ಕ್ಕೆ ಇವರ ಅಧಿಕಾರಾವಧಿ ಮುಕ್ತಾಯಗೊಂಡಿತ್ತಾದರೂ ಪ್ರಭಾರ ಕುಲಪತಿಯಾಗಿ ಎರಡು ಬಾರಿ ಅವಧಿ ವಿಸ್ತರಿಸಲಾಗಿತ್ತು.

ಎಂ.ಫಾರ್ಮಾ ಅಂತಿಮ ಸುತ್ತಿನ ಸೀಟು ಹಂಚಿಕೆ: ಕೆಇಎ

ಬೆಂಗಳೂರು: ಎಂ.ಫಾರ್ಮಾ ಕೋರ್ಸ್ ಪ್ರವೇಶಕ್ಕೆ ಎರಡನೇ ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಫೆ.25ರಂದು ಮಧ್ಯಾಹ್ನ 2 ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಫೆ.25ರಂದು ಸಂಜೆ 8ಗಂಟೆ ನಂತರ ತಾತ್ಕಾಲಿಕ ಹಾಗೂ ಫೆ.26ರಂದು ಮಧ್ಯಾಹ್ನ 2 ಗಂಟೆ ನಂತರ ಅಂತಿಮ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸೀಟು ಹಂಚಿಕೆಯಾದವರು ಫೆ.27ರಿಂದ ಮಾರ್ಚ್ 4ರವರೆಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರಗಳನ್ನು ಪಡೆಯಬೇಕು. ಮಾರ್ಚ್ 5ರೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳಿಗೆ ಈ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ ಇದುವರೆಗೂ ಯಾವುದೇ ಸೀಟು ಹಂಚಿಕೆಯಾಗದಿರುವ ಹಾಗೂ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ ಆಪ್ಷನ್ಸ್ ದಾಖಲಿಸಬಹುದು. ವಿವರಗಳಿಗೆ ಕೆಇಎ ವೆಬ್‌ಸೈಟ್ ನೋಡಬೇಕು ಎಂದಿದ್ದಾರೆ.

ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ

ಶಾಸಕ ಚಂದ್ರು ಲಮಾಣಿ ಉಚ್ಚಾಟನೆಗೆ ಬಿಜೆಪಿ ಚಿಂತನೆ



ಬೆಂಗಳೂರು: ಶಾಸಕ ಡಾ.ಚಂದ್ರು ಲಮಾಣಿ ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿರೋದು ಬಿಜೆಪಿಗೆ ನುಂಗಲಾರದ ತುತ್ತಾಗಿದೆ. ಕಮಿಷನ್ ವಿರುದ್ಧ ಹೋರಾಟ ನಡೆಸಿ ಕಾಂಗ್ರೆಸ್ ವಿರುದ್ಧ ಕೆಂಡ ಉಗುಳುತ್ತಿದ್ದ ಬಿಜೆಪಿಗೆ ತಮ್ಮದೇ ಪಕ್ಷದ ಶಾಸಕ ಸಿಕ್ಕಿಬಿದ್ದಿರುವುದು ಧರ್ಮ ಸಂಕಟ ತಂದೊಡ್ಡಿದೆ. ಈ ಹಿನ್ನೆಲೆ ಚಂದ್ರು ಲಮಾಣಿ ವಿರುದ್ಧ ಶಿಸ್ತುಕ್ರಮಕ್ಕೆ ಚಿಂತನೆ ನಡೆಸಿದೆ.

ಶಾಸಕ ಚಂದ್ರು ಲಮಾಣಿ ಲೋಕಾಯುಕ್ತ ಬಲೆಗೆ ಟ್ರ್ಯಾಪ್ ಆಗಿದ್ದು, ಈ ಪ್ರಕರಣ ಸಂಬಂಧ ವರಿಷ್ಠರಿಗೆ ರಾಜ್ಯ ಬಿಜೆಪಿ ವರದಿ ಕಳುಹಿಸಿದೆ. ಅಲ್ಲದೇ ಶಾಸಕರ ಪ್ರಕರಣ ಬಿಜೆಪಿ ಕಮಿಷನ್ ಹೋರಾಟಕ್ಕೂ ಹಿನ್ನಡೆ ಆಗಿರುವುದರಿಂದ, ಲೋಕಾಯುಕ್ತ ವರದಿ ಬಂದ ಬಳಿಕ ಶಿಸ್ತುಕ್ರಮ ಕೈಗೊಳ್ಳುವ ಸಾಧ್ಯತೆಯಿದೆ. ಲೋಕಾಯುಕ್ತ ವರದಿಯಲ್ಲಿ ಲಂಚ ಪಡೆದಿರುವುದು ಸಾಬೀತಾದರೆ ಪಕ್ಷದಿಂದ ಅಮಾನತು ಅಥವಾ ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟನೆ ಮಾಡುವ ಸಾಧ್ಯತೆಗಳಿವೆ. ಈ ಮಧ್ಯೆ ವಿಪಕ್ಷ ನಾಯಕ ಆರ್.ಅಶೋಕ್ ಅವರಿಂದಲೂ ಶಾಸಕ ಚಂದ್ರು ಲಮಾಣಿಗೆ ನೋಟಿಸ್ ಕೊಡಲು ಸಿದ್ಧತೆ ನಡೆದಿದೆ.

ಲಮಾಣಿ ವಿರುದ್ಧ ನ್ಯಾಯಮೂರ್ತಿಗಳು ಗರಂ: ಈ ಮಧ್ಯೆ, ಜನಪ್ರತಿನಿಧಿ ನ್ಯಾಯಾಲಯಕ್ಕೆ ಜಾಮೀನಿಗೆ ಅರ್ಜಿ ಸಲ್ಲಿಸಿರುವ ಲಮಾಣಿ ವಿರುದ್ಧ ನ್ಯಾ.ಸಂತೋಷ್ ಗಜಾನನ ಭಟ್ ಗರಂ ಆಗಿದ್ದಾರೆ. ತುರ್ತಾಗಿ ಜಾಮೀನು ಅರ್ಜಿ ವಿಚಾರಣೆ ನಡೆಸುವಂತೆ ಮನವಿ ಮಾಡಿದ್ದಕ್ಕೆ ನಿಮ್ಮನ್ನ ಲೋಕಾಯುಕ್ತ ಟ್ರ್ಯಾಪ್ ಮಾಡಿದೆ ನಿಮಗೆ ಶಾರ್ಟ್ ಡೇಟ್ ಬೇರೆ ಬೇಕೆ... ಜಾಮೀನು ಏಕೆ ನೀಡಬೇಕು ಎಂದು ಪ್ರಶ್ನಿಸಿದ್ದಾರೆ

ಚಾಮರಾಜನಗರ ಸೇರಿ ರಾಜ್ಯದ 10 ಶಾಲೆಗಳಿಗೆ 'ಅತ್ಯುತ್ತಮ ಶಾಲೆ' ಪ್ರಶಸ್ತಿ

ಮುಂದಿನ ವರ್ಷದಿಂದ 10ನೇ ತರಗತಿವರೆಗೆ ನೈತಿಕ ವಿಜ್ಞಾನ ಬೋಧನೆ

ಬೆಂಗಳೂರು: ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಡಬ್ಲ್ಯೂಡಬ್ಲ್ಯೂಎಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಮಿಷನ್ ಪ್ರಕೃತಿ: ತರಗತಿಯಿಂದ ಸಂರಕ್ಷಣೆಯತ್ತ' ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲೆ ಯಳಂದೂರಿನ ಕೆಜಿಬಿವಿ ಶಾಲೆ ಸೇರಿದಂತೆ ರಾಜ್ಯದ 10 ಅತ್ಯುತ್ತಮ ಶಾಲೆಗಳಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರಿನ ವಿಕಾಸಸೌಧದಲ್ಲಿ ನಡೆದ ಸಮಾರಂಭದಲ್ಲಿ ಇಲಾಖೆಯ ಆಯುಕ್ತರಾದ ವಿಕಾಸ್ ಕಿಶೋರ್ ಸುರಳ್ಕರ್, ಡಬ್ಲ್ಯೂಡಬ್ಲ್ಯೂಎಫ್ ಇಂಡಿಯಾದ ಸಿಇಒ ಕರಣ್ ಭಲ್ಲಾ ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ವೇಳೆ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಕೇವಲ ಅಂಕಗಳಿಗಾಗಿ ಓದಬಾರದು. ವಿಷಯವನ್ನ ಆಳವಾಗಿ ಅರ್ಥೈಸಿಕೊಳ್ಳುವುದರ ಕಡೆಗೆ ಗಮನ ಹರಿಸಬೇಕು. ಅರಿವು ಮೂಡಿದರೆ ಫಲಿತಾಂಶ ತಾನಾಗಿಯೇ ಉತ್ತಮವಾಗುತ್ತದೆ ಎಂದರು. ಜೊತೆಗೆ ತ್ಯಾಜ್ಯ ನಿರ್ವಹಣೆ ಕುರಿತು ಜಪಾನ್‌ನ ಉದಾಹರಣೆ ನೀಡುತ್ತಾ, ಅಲ್ಲಿ ಕಸದ ಬುಟ್ಟಿಗಳು ಕಡಿಮೆ ಇದ್ದರೂ ಜನರು ತಮ್ಮ ಕಸವನ್ನು ತಾವೇ ಮನೆಗೆ ತೆಗೆದುಕೊಂಡು ಹೋಗಿ ವಿಲೇವಾರಿ ಮಾಡುತ್ತಾರೆ. ಅಂತಹ ಶಿಸ್ತು ನಮ್ಮಲ್ಲಿ ಬರಬೇಕು ಎಂದು ಕಿವಿಮಾತು ಹೇಳಿದರು.

ಆತ್ಮವಿಶ್ವಾಸವೇ ಸಾಧನೆಗೆ ಸಾಧನ

ಪಿಯುಸಿ ವಿದ್ಯಾರ್ಥಿಗಳಿಗೆ ಗಣ್ಯರ ಕಿವಿಮಾತು



ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಸಿಂಚನ ವಾರ್ಷಿಕ ಸಂಚಿಕೆಯನ್ನು ಗಣ್ಯರು ಬಿಡುಗಡೆ ಮಾಡಿದರು.

ಮೈಸೂರು, ಫೆ.23– ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಶ್ರೀ ಶಾರದಾ ಪೂಜೆ ಮತ್ತು 'ಸಿಂಚನ' ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪರೀಕ್ಷೆಗೆ ಸಜ್ಜಾಗಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಪತ್ರಕರ್ತ ಸಿ.ಕೆ.ಮಹೇಂದ್ರ, ಯಶಸ್ಸನ್ನು ಪಡೆಯಲೇಬೇಕೆಂಬ ಆತ್ಮಸ್ಥೈರ್ಯ ಮತ್ತು ಮನೋಬಲ ಹೊಂದಿರುವ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು, ಯಾವುದೇ ಅಡೆತಡೆ ಹಾಗೂ ಆಕಸ್ಮಿಕ ಆಘಾತಗಳಿಂದಲೂ ಧೃತಿಗೆಡದೆ ನಿರಂತರ ಪ್ರಯತ್ನ ಮತ್ತು ಪರಿಶ್ರಮದಿಂದ ಯಶಸ್ಸಿನ ಕಡೆಗೆ ಮುನ್ನಡೆಯಬೇಕು. ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿದರೆ ಉತ್ತಮ ಸಾಧನೆ ಸಾಧ್ಯ ಎಂದು ಕಿವಿಮಾತು ಹೇಳಿದರು.

ವಕೀಲ ಡಾ.ಎಂ.ಎನ್.ರವಿಶಂಕರ್ ಮಾತನಾಡಿ, ಪ್ರತಿಯೊಬ್ಬರಲ್ಲೂ ತಮ್ಮದೇ ಆದ ವ್ಯಕ್ತಿತ್ವ ಮತ್ತು ಪ್ರತಿಭೆ ಇರುತ್ತದೆ. ಇವೆರಡೂ ವ್ಯಕ್ತಿಯ ಬೌದ್ಧಿಕ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಜಾಗೃತಗೊಳಿಸುತ್ತವೆ. ಸ್ಟೀಫನ್ ಹಾಕಿಂನಂತಹ ಶ್ರೇಷ್ಠ ವಿಜ್ಞಾನಿ, ದಾರ್ಶನಿಕರಾದ ಸ್ವಾಮಿ ವಿವೇಕಾನಂದರು ಮತ್ತು ರಬೀಂದ್ರನಾಥ ಠಾಗೋರ್ ಅವರ ತತ್ವಾದರ್ಶಗಳು ಮತ್ತು ವಿಚಾರಧಾರೆಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಬೇಕೆಂದು ಆಶಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ, ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಮಾತನಾಡಿ, ನಿಮ್ಮ ಜೀವನದ ಶಿಲ್ಪಿಗಳು ನೀವೇ. ಸಹನೆ ಮತ್ತು ತಾಳ್ಮೆ ಮನುಷ್ಯನನ್ನು ಪರ್ವತದ ಎತ್ತರಕ್ಕೆ ಕೊಂಡೊಯ್ಯುತ್ತದೆ. ವಿದ್ಯಾರ್ಥಿಗಳು ಸಹನೆ, ತಾಳ್ಮೆಯ ಜೊತೆಗೆ ಸತತ ಪರಿಶ್ರಮ ಮತ್ತು ನಿರಂತರ ಪ್ರಯತ್ನದಿಂದ ಸಾಧನೆ ಮಾಡಲು ಸಾಧ್ಯ ಎಂದರು.

ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ರೇಚಣ್ಣ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಟಿ.ಗುರುಪಾದಸ್ವಾಮಿ, ಸಿಂಚನ ವಾರ್ಷಿಕ ಸಂಚಿಕೆಯ ಸಂಪಾದಕರಾದ ಕೆ.ಎಂ.ಜ್ಯೋತಿಪ್ರಕಾಶ ವೇದಿಕೆಯಲ್ಲಿದ್ದರು. ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಯುವಕನ ಮೇಲೆ ದುಷ್ಕರ್ಮಿಗಳಿಂದ ಭೀಕರ ಹಲ್ಲೆ

ಪಾಂಡವಪುರ ತಾಲೂಕಿನ ಡಿಂಕಾ ಗ್ರಾಮದಲ್ಲಿ ಪೈಶಾಚಿಕ ಕೃತ್ಯ



ವ್ಯಕ್ತಿಯ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸುತ್ತಿರುವ ಗುಂಪು.

ಪಾಂಡವಪುರ, ಫೆ.23– ಗುಂಪೊಂದು ವ್ಯಕ್ತಿಯೊಬ್ಬನ ಬಟ್ಟೆಬಿಚ್ಚಿ, ಕಾಲುಗಳ ಮೇಲೆ ಸೈಜು ಗಲ್ಲು ಎತ್ತಿ ಹಾಕಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಡಿಂಕಾ ಗ್ರಾಮದಲ್ಲಿ ನಡೆದಿದೆ.

ಯುವತಿ ನಾಪತ್ತೆಗೆ ಸಹಕರಿಸಿದ್ದಾನೆಂದು ಆರೋಪಿಸಿ ಪ್ರಕಾಶ್ ಎಂಬಾತನ ಮೇಲೆ ಭೀಕರವಾಗಿ ಹಲ್ಲೆ ನಡೆಸಿದ್ದು, ಘಟನೆಯಲ್ಲಿ ಆತನ ಕಾಲುಗಳು ಮುರಿದಿವೆ. ಕೈಮುಗಿದು, ತಪ್ಪಾಯ್ತು... ಎಂದು ಪರಿಪರಿಯಾಗಿ ಬೇಡಿಕೊಂಡರೂ ಬಿಡದೆ ಅಮಾನುಷವಾಗಿ ಹಲ್ಲೆ ನಡೆಸಿರುವುದಲ್ಲದೆ, ಈ ಅಮಾನವೀಯ ಕೃತ್ಯವನ್ನು ವಿಡಿಯೋ ಮಾಡಿಕೊಂಡು ಪೈಚಾಚಿಕತೆ ಮೆರೆದಿದ್ದಾರೆ. ಈ ವೇಳೆ ಪ್ರಕಾಶ್ ರಕ್ಷಣೆಗೆ ಮುಂದಾದ ಅವರ ಭಾವನ ಮೇಲೂ ಹಲ್ಲೆ ನಡೆಸಲಾಗಿದೆ.

ಕೆ.ಆರ್.ಪೇಟೆ ತಾಲೂಕು ಗ್ರಾಮವೊಂದರ ಯುವತಿ ನಾಪತ್ತೆಯಾಗಲು ಪ್ರಕಾಶ್ ಹಾಗೂ ಆತನ ಭಾವ ಸಹಕರಿಸಿದ್ದಲ್ಲದೆ, ಈ ಬಗ್ಗೆ ಪ್ರಶ್ನಿಸಿದ ಯುವತಿ ಸಹೋದರನ ಮೇಲೆ ಹಲ್ಲೆ ನಡೆಸಿದರೆಂದು ಆರೋಪಿಸಿ, ಈ ರೀತಿ ಘೋರ ದೌರ್ಜನ್ಯ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ 14 ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು, ಗಿರೀಶ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಪ್ರಕಾಶ್ ಫೆಬ್ರವರಿ 22ರಂದು ಮಧ್ಯಾಹ್ನ ಚಿನಕುರಳಿ ಕಡೆಗೆ ಬೈಕ್‌ನಲ್ಲಿ ನವೀನ್ ಜೊತೆಯಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ಕಾರು ಮತ್ತು ಬೈಕ್‌ನಲ್ಲಿ ಬಂದಂತಹ ಗಿರೀಶ್, ಮಂಜು, ಜೀವನ್, ಶಶಿಕುಮಾರ, ಅಯ್ಯಪ್ಪ, ಮದನ್, ಮಾದಪ್ಪ ರವಿ, ನಿಂಗಣ್ಣ ಗಣೇಶ ಎನ್ನುವವರು ಕೈಯ್ಯಲ್ಲಿ ದೊಣ್ಣೆ ಮತ್ತು ಕಲ್ಲನ್ನು ಹಿಡಿದು ಅಡ್ಡ ಹಾಕಿದ್ದಾರೆ.

ಕೂಡಲೇ ಬೈಕ್‌ನಲ್ಲಿದ್ದ ಇಬ್ಬರೂ ಕನಗನಹಳ್ಳಿ ಜಮೀನು ಕಡೆಯಿಂದ ಮರಸನಹಳ್ಳಿ ಕಡೆಗೆ ಓಡಲು ಮುಂದಾಗಿದ್ದಾರೆ. ಆದರೆ ಆರೋಪಿಗಳು ಅವರನ್ನು ಬೆನ್ನತ್ತಿ ಹಿಡಿದು ಮನಸ್ಸೋಇಚ್ಛೆ ಥಳಿಸಿದ್ದಾರೆ. ಈ ವೇಳೆ ಪ್ರಕಾಶ್ ಕಾಲುಗಳ ಮೇಲೆ ಕಲ್ಲು ಎತ್ತಿ ಹಾಕಿ ಕ್ರೌರ್ಯ ಮೆರೆದಿದ್ದಾರೆ. ನಂತರ ಸ್ಥಳದಲ್ಲಿದ್ದ ಸಾರ್ವಜನಿಕರು, ಇಬ್ಬರನ್ನೂ ಆಂಬುಲೆನ್ಸ್‌ನಲ್ಲಿ ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ರೀತಿ ಕ್ರೌರ್ಯ ಮೆರೆದು ಅದನ್ನು ವಿಡಿಯೋ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವ ಪ್ರವೃತ್ತಿ ಸಾಮಾನ್ಯ ಛಾಳಿಯಾಗಿ ಪರಿಣಮಿಸಿದೆ. ಇದು ಯುವಪೀಳಿಗೆ ಮೇಲೆ ಭಯಾನಕ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸರು, ಶಿಸ್ತು ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ವ್ಯಾಪಕವಾಗಿ ಕೇಳಿಬರುತ್ತಿದೆ.

ಮೈಸೂರು ಮಿತ್ರ

ಮಂಗಳವಾರ 24 ಫೆಬ್ರವರಿ 2026

ವಿಬಿ ಜಿ ರಾಮ್ ಜಿ ವಿರೋಧಿಸಿ, ನರೇಗಾ ಯೋಜನೆ ಉಳಿವಿಗಾಗಿ

ಕಾಂಗ್ರೆಸ್ ಕಾರ್ಯಕರ್ತರಿಂದ ಬೃಹತ್ ಪಾದಯಾತ್ರೆ



ತಿ.ನರಸೀಪುರದಲ್ಲಿ ವಿಬಿ ಜಿ ರಾಮ್ ಜಿ ಯೋಜನೆ ವಿರೋಧಿಸಿ, ನರೇಗಾ ಯೋಜನೆ ಉಳಿವಿಗಾಗಿ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಬೃಹತ್ ಪಾದಯಾತ್ರೆ ನಡೆಸಿದರು.

ತಿ.ನರಸೀಪುರ, ಫೆ.23– ದೇಶದ ಬಡವರ ಉದ್ಯೋ ಗದ ಭದ್ರತೆಯನ್ನೇ ಕಿತ್ತುಕೊಂಡಿರುವ ವಿಬಿ ಜಿ ರಾಮ್ ಜಿ ಯೋಜನೆ ಜಾರಿ ವಿರೋಧಿಸಿ, ಮಹಾತ್ಮ ಗಾಂಧಿ ನರೇಗಾ ಯೋಜನೆ ಉಳಿವಿಗಾಗಿ ಆಗ್ರಹಿಸಿ ಪಟ್ಟಣದಲ್ಲಿ ಸೋಮವಾರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಬೃಹತ್ ಪಾದಯಾತ್ರೆ ನಡೆಸಿದರು.

ದೇಶಾದ್ಯಂತ ಮಹಾತ್ಮ ಗಾಂಧಿ ನರೇಗಾ ಯೋಜನೆ ಉಳಿವಿಗಾಗಿ ಚಳವಳಿ ನಡೆಸಲು ಕಾಂಗ್ರೆಸ್ ಕರೆ ನೀಡಿರುವ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿ ಬಳಿ ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಯಕರ್ತರು ಹಾಗೂ ಮುಖಂಡರು ಹಿಂದಿನ ನರೇಗಾ ಯೋಜನೆ ಉಳಿಸಿ, ಕೇಂದ್ರ ಬಿಜೆಪಿ ಸರ್ಕಾರದ ವಿಬಿ ರಾಮ್ ಜಿ ಯೋಜನೆ ರದ್ದು ಪಡಿಸುವಂತೆ ಒತ್ತಾಯಿಸಿ ತಾಲೂಕು ಕಚೇರಿವರೆಗೆ ಪಾದಯಾತ್ರೆ ನಡೆಸಿ ಎಲ್ಲರ ಗಮನ ಸೆಳೆದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಆಹಾರ ಭದ್ರತೆ ಮತ್ತು ಉದ್ಯೋಗ ಭದ್ರತೆ ಕಾಯ್ದೆಯನ್ನು ಜಾರಿಗೊಳಿಸಿ, ಯುವ ಜನತೆ ಹಾಗೂ ಹಳ್ಳಿಗಾಡಿನ ಜನರಿಗಾಗಿ ನರೇಗಾ ಯೋಜನೆ ಜಾರಿಗೆ ತಂದು ಮಹಾತ್ಮ ಗಾಂಧೀಜಿ ಹೆಸರಿಡಲಾಗಿತ್ತು. ಶೇ.90 ರಷ್ಟು ಕೇಂದ್ರ, ಶೇ.10ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ನೀಡಬೇಕಿತ್ತು. ಅಲ್ಲದೆ ಗ್ರಾಪಂಗಳಲ್ಲಿ ಯೋಜನೆ ರೂಪಿಸಲು ಯಾವುದೇ ಮಿತಿ ಹೇರಿರಲಿಲ್ಲ. ಇಂತಹ ಮಹತ್ವದ ಯೋಜನೆಯನ್ನು ಹತ್ತಿಕ್ಕಿ, ಮತ್ತೊಂದು ಹೆಸರಿಟ್ಟು ಉದ್ಯೋಗದಿಂದ ವಂಚಿಸಲು ಮುಂದಾಗಿದೆ ಎಂದು ಆರೋಪಿಸಿದರು.

ಇದೀಗ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ನರೇಗಾ ಯೋಜನೆ ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಮಾಡಿ ಬಡವರ ಮತ್ತು ದುಡಿಯುವ ಜನರ ಉದ್ಯೋಗ ಕಿತ್ತುಕೊಂಡಿದೆ. ಮೊದಲು ಯೋಜನೆಗೆ ಇಟ್ಟಿದ್ದ ಗಾಂಧೀಜಿ ಹೆಸರನ್ನು ತೆಗೆದು, ಬಳಿಕ ಎಳ್ಳುನೀರು ಬಿಡುವ ಹುನ್ನಾರವನ್ನು ಮಾಡುತ್ತಿದೆ. ರಾಜ್ಯದ ಜಿಎಸ್‌ಟಿ ಪಾಲನ್ನೇ ಇದುವರೆಗೂ ನೀಡದ ಕೇಂದ್ರಕ್ಕೆ ವಿಬಿ ಜಿ ರಾಮ್ ಜಿ ಯೋಜನೆಗೆ ಪಾಲು ಕೇಳುವ ಯಾವುದೇ ನೈತಿಕತೆ ಇಲ್ಲ. ಬಿಜೆಪಿಗೆ ಅಷ್ಟೊಂದು ಕಾಳಜಿ ಇದ್ದರೆ ಗಾಂಧಿ ಕೊಂದ ಗುಡ್ಸೆ ಹೆಸರಿನಲ್ಲಿ ಬೇಕಾದರೆ ಮತ್ತೊಂದು ಯೋಜನೆ ಮಾಡಿಕೊಳ್ಳಲಿ. ಬಡವರಿಗೆ ಉದ್ಯೋಗ ನೀಡುವ ಹಿಂದಿನ ಮಹಾತ್ಮ ಗಾಂಧಿ ನರೇಗಾ ಯೋಜನೆ ಉಳಿಸಲಿ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಮಾಜಿ ಸದಸ್ಯ ಮಂಜುನಾಥನ್, ಸೋಸಲೆ ಮಹದೇವಸ್ವಾಮಿ, ಎಂ.ಪರಶಿವಮೂರ್ತಿ, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ದೇವರತ್ನ ಫೌಂಡೇಶನ್ ಅಧ್ಯಕ್ಷ ಎಂ.ಶಿವಪ್ರಸಾದ್, ತಾಪಂ ಮಾಜಿ ಅಧ್ಯಕ್ಷರಾದ ಎಂ.ಮಲ್ಲಿಕಾರ್ಜುನಸ್ವಾಮಿ ಹೆಚ್.ಎನ್. ಉಮೇಶ್, ಮಾಜಿ ಸದಸ್ಯ ರಾಮಲಿಂಗಯ್ಯ, ಕಿಯೋನಿಕ್ಸ್ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಹೆಮ್ಮಿಗೆ ಪಿಎಸಿಎಸ್ ಬ್ಯಾಂಕ್ ಅಧ್ಯಕ್ಷ ಹೆಚ್.ವಿ.ಶೇಷಾದ್ರಿ, ಆಪ್ತ ಸಹಾಯಕ ಬಿ.ಬಸವರಾಜು, ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕೆ.ಎಂ.ಮಧುಕುಮಾರ್, ಕಾರ್ಮಿಕ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ.ಎನ್.ಕುಮಾರ್, ತಾಲೂಕು ಅಧ್ಯಕ್ಷ ಶಿವಸಿದ್ದು, ಡೈರಿ ಅಧ್ಯಕ್ಷ ಕೆ.ಎನ್.ಕುಮಾರ್, ಸಿದ್ದನಹುಂಡಿ ಸೋಮಣ್ಣ, ರಂಗಸ್ವಾಮಿ, ಚಿದರವಳ್ಳಿ ಚಂದ್ರಶೇಖರ್, ನವಿದುಲ್ಲ, ವಾಟಾಳು ನಾಗೇಶ್, ಕೋಣಗಹಳ್ಳಿ ಮಹೇಶ, ನಾಗಲಗೆರೆ ಶಾಂತರಾಜ್, ಲತಾ ಜಗದೀಶ್, ಕೆ.ಪಾರ್ವತಿ, ನರಗ್ಯಾತನಹಳ್ಳಿ ಶಿವಮ್ಮ, ಕುಮಾರ್ ರಾಮೇಗೌಡ, ಸುಂದರ ನಾಯಕ, ದೊಡ್ಡಪುರ ಚರಣ್, ಕೊತ್ತೇಗಾಲ ಬಸವರಾಜು, ಮಾದಾಪುರ ರವಿ, ಚಂದ್ರಧರ, ಆರ್.ಸೋಮಣ್ಣ, ಕೇತಹಳ್ಳಿ ರಾಜಣ್ಣ, ಕನ್ನಹಳ್ಳಿ ಲಕ್ಷ್ಮಣ, ಕೆ.ಎಂ.ಶಿವಕುಮಾರ್, ಎಸ್.ರಾಜೇಶ್, ಯಾಚೇನಹಳ್ಳಿ ರಾಘವೇಂದ್ರ, ಅಶೋಕ್ ಗೌಡ, ಬಿ.ನಂದೀಶ್ ಹಾಗೂ ಇನ್ನಿತರರಿದ್ದರು.

> "ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಈಗಿನ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಬಡವರು ಮತ್ತು ಮಧ್ಯಮ ವರ್ಗದ ಜನರ ಪರವಾಗಿರುವ ಯೋಜನೆಗಳನ್ನು ರದ್ದುಗೊಳಿಸಿ, ಉಳ್ಳವರ ಪರ ಆಡಳಿತ ನಡೆಸುವ ಧೋರಣೆಯ ವಿರುದ್ಧ ಚಳವಳಿ ನಡೆಸುತ್ತಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆ ಮರು ಅನುಷ್ಠಾನಗೊಳ್ಳುವ ವರೆಗೂ ದೇಶಾದ್ಯಂತ ಹೋರಾಟ ನಡೆಯಲಿದೆ. ಜನರನ್ನು ಜಾಗೃತಿಗೊಳಿಸಲು ಎಐಸಿಸಿ ಹಾಗೂ ಕೆಪಿಸಿಸಿ ಸೂಚನೆ ಮೇರೆಗೆ ನರಸೀಪುರದಲ್ಲಿ ಸಂಸದರ ನೇತೃತ್ವದಲ್ಲಿ ಪಾದಯಾತ್ರೆ ಆಯೋಜಿಸಲಾಗಿದೆ.
>
> – ಡಾ.ಬಿ.ಜೆ.ವಿಜಯ್ ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ.

ಒಂದೇ ದಿನ ಮದುವೆಯಾಗಿ, ಒಂದೇ ದಿನ ಸಾವನ್ನಪ್ಪಿದ ಬಾವ–ಬಾಮೈದ





ಹುಣಸೂರು, ಫೆ.23– ಒಂದೇ ಊರಿನ ಅಕ್ಕಪಕ್ಕದ ಮನೆಯ ಬಾವ–ಬಾಮೈದ ಮದುವೆಯಾಗಿದ್ದು ಒಂದೇ ದಿನ. ಈ ಜೋಡಿ ಮಸಣ ಸೇರಿದ್ದು ಒಂದೇ ದಿನ. ಅಂತ್ಯಕ್ರಿಯೆ ನಡೆದಿದ್ದು ಒಟ್ಟಿಗೆ. ಇಂತಹ ಮನಕಲಕುವ ಘಟನೆ ತಾಲೂಕಿನ ಗಾವಡಗೆರೆ ಹೋಬಳಿಯ ಚಿಕ್ಕಾಡಿಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಚಿಕ್ಕಾಡಿಗನಹಳ್ಳಿ ಗ್ರಾಮದ ನಿವಾಸಿಗಳಾದ ಒಂದೇ ಬೀದಿಯ ಅಕ್ಕ ಪಕ್ಕದ ಮನೆಯ ಬಾವ–ಬಾಮೈದರಾದ ಪಾಂಡುರಂಗ ರಾವ್ ಮೋರೆ(62), ಚಂದ್ರಶೇಖರ್ ರಾವ್ ಸಿಂಧೆ(61) ಸಾವನ್ನಪ್ಪಿದವರು.

ಚಂದ್ರಶೇಖರ್‌ರಾವ್ ಸಿಂಧೆ ಹಾಗೂ ಪಾಂಡುರಂಗರಾವ್ ಮೋರೆ ಅವರು ಪರಸ್ಪರ ಸಹೋದರಿಯರನ್ನು ಒಂದೇ ಕಲ್ಯಾಣ ಮಂಟಪದಲ್ಲಿ ವಿವಾಹವಾಗಿದ್ದರು. ಜಾಬಗೆರೆ ಗ್ರಾಪಂನಲ್ಲಿ ವಾಟರ್ ಮನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಪಾಂಡುರಂಗರಾವ್ ಮೋರೆ ನಿವೃತ್ತರಾಗಿದ್ದು, ಅವರಿಗೆ ಪತ್ನಿ ಗೀತಾಬಾಯಿ ಮತ್ತು ಓರ್ವ ಪುತ್ರನಿದ್ದರೇ, ಚಂದ್ರಶೇಖರ್ ರಾವ್ ಅವರಿಗೆ ಪತ್ನಿ ಅಂಬಿಕಾ ಬಾಯಿ ಮತ್ತು ಓರ್ವ ಪುತ್ರ, ಪುತ್ರಿ ಇದ್ದಾರೆ.

ಚಂದ್ರಶೇಖರ್‌ರಾವ್ ಸಿಂಧೆ ಅನಾರೋಗ್ಯದಿಂದ ಭಾನುವಾರ ರಾತ್ರಿ ಸಾವನ್ನಪ್ಪಿದರೇ, ಇವರ ಸಾವಿನ ಆಘಾತದಿಂದ ಪಾಂಡುರಂಗರಾವ್ ಮೋರೆ ಪ್ರಜ್ಞೆ ತಪ್ಪಿದ್ದರು. ಆದರೆ ಇವರು ಸೋಮವಾರ ಮುಂಜಾನೆ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಸದಾ ಅನ್ಯೋನ್ಯ ವಾಗಿದ್ದ ಬಾವ–ಬಾಮೈದನ ಸಾವಿನಿಂದ ಇಡೀ ಗ್ರಾಮ ಕಂಬನಿ ಮಿಡಿಯಿತು.

ಇಂದು ಪಾಂಡುರಂಗರಾವ್ ಮೋರೆ ಅವರ ಜಮೀನಿನಲ್ಲಿ ಅಕ್ಕಪಕ್ಕ ಬಾವ–ಬಾಮೈದನ ಅಂತ್ಯಸಂಸ್ಕಾರ ನಡೆಯಿತು. ಮೃತರ ನಿಧನದಿಂದಾಗಿ ಕುಟುಂಬದವರ ರೋಧನ ಮುಗಿಲುಮುಟ್ಟಿತ್ತು.

ನೇಮಕ



ಮೈಸೂರು, ಫೆ.23– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ ಅವರನ್ನು ಭಾರತೀಯ ಜನತಾ ಪಕ್ಷದ ಜಿಲ್ಲಾ ಕಚೇರಿಗಳ ನಿರ್ಮಾಣ ಕಾರ್ಯವನ್ನು ವೇಗಗೊಳಿಸುವ ಹಾಗೂ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ರಾಜ್ಯ ಮಟ್ಟದ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಾಮೀಣ ಬಡ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ

ವೈದ್ಯರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಸೂಚನೆ



ನಂಜನಗೂಡಿನಲ್ಲಿ ಆರೋಗ್ಯ ರಕ್ಷಾ ಸಮಿತಿ ಸಭೆ ನಡೆಯಿತು.

ನಂಜನಗೂಡು, ಫೆ.23– ಗ್ರಾಮೀಣ ಬಡ ರೋಗಿಗಳೇ ಹೆಚ್ಚಾಗಿ ಸಾರ್ವಜನಿಕ ಆಸ್ಪತ್ರೆಗೆ ಬರುವ ಕಾರಣ ವೈದ್ಯರು ಕಡ್ಡಾಯವಾಗಿ ಹಾಜರಿದ್ದು, ಮಾನವೀಯತೆಯಿಂದ ಜನರಿಗೆ ಉತ್ತಮ ಚಿಕಿತ್ಸೆ ನೀಡಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಸೂಚಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ನಂಜನಗೂಡು ತಾಲೂಕು ಮುಖ್ಯಮಂತ್ರಿಗಳ ಕ್ಷೇತ್ರಕ್ಕೂ ಒಳಪಡುವುದರಿಂದ ತಾಲೂಕಿನ ಆಸ್ಪತ್ರೆಗಳಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸಿದಲ್ಲಿ ತಾಲೂಕಿಗೆ ಮತ್ತು ಆಸ್ಪತ್ರೆಗೆ ಕೆಟ್ಟ ಹೆಸರು ಬರಲಿದೆ. ಇದನ್ನು ಮನಗಂಡು ವೈದ್ಯರು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು. ರಾಷ್ಟ್ರೀಯ ಹೆದ್ದಾರಿ ಈ ಭಾಗದಲ್ಲಿ ಹಾದು ಹೋಗುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗಿ ಬರಲಿದೆ. ಅವರಿಗೆ ಉತ್ತಮ ಸೇವೆ ಒದಗಿಸಿ ಎಂದರಲ್ಲದೆ ಆಸ್ಪತ್ರೆಯಲ್ಲಿ ಔಷಧಗಳು ಲಭ್ಯವಿದ್ದರೂ ಸಹ ಹೊರಗಡೆ ಬರೆಯುತ್ತಾರೆ ಎಂದು ಸಾರ್ವಜನಿಕರು ದೂರು ನೀಡುತ್ತಾರೆ. ಆಸ್ಪತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಭಾಗದ ಬಡವರೇ ಬರುತ್ತಾರೆ. ಹಣಕಾಸಿನ ಸ್ಥಿತಿ ಉತ್ತಮವಿರುವವರು ಖಾಸಗಿ ಆಸ್ಪತ್ರೆಗಳಿಗೆ ತೆರಳುತ್ತಾರೆ. ಆದ್ದರಿಂದ ಉಚಿತವಾಗಿ ಉತ್ತಮ ಚಿಕಿತ್ಸೆ ಮತ್ತು ಔಷಧ ದೊರೆಯುವಂತೆ ಆಸ್ಪತ್ರೆ ಸಿಬ್ಬಂದಿ ಮತ್ತು ಅಧಿಕಾರಿ ವರ್ಗದವರು ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಸ್ವಚ್ಛತೆ ಕಾಪಾಡಬೇಕು. ವೈದ್ಯರು ಗದರದೆ ಬರುವ ರೋಗಿಗಳಿಗೆ ಮಾನವೀಯತೆಯಿಂದ ಉತ್ತಮ ಚಿಕಿತ್ಸೆ ನೀಡಬೇಕು. ವೈದ್ಯರಿಗೆ ಮತ್ತು ಆಸ್ಪತ್ರೆಗೆ ಅಗತ್ಯವಾದ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು ಎಂದರು.

ಆಹಾರ ಪೂರೈಕೆ ಗುತ್ತಿಗೆದಾರರನ್ನು ಬದಲಾಯಿಸಿ: ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ 10 ವರ್ಷಗಳಿಂದ ಒಬ್ಬರೇ ಗುತ್ತಿಗೆದಾರರು ಆಹಾರ ಪೂರೈಕೆ ಮಾಡುತ್ತಿದ್ದು, ಕಳಪೆ ಆಹಾರ ಪೂರೈಕೆ ಮಾಡುತ್ತಾರೆ ಎಂದು ಸಾರ್ವಜನಿಕರ ವಲಯದಲ್ಲಿ ಸಾಕಷ್ಟು ದೂರುಗಳು ಕೇಳಿ ಬಂದಿವೆ. ರೋಗಿಗಳಿಗೆ ಗುಣಮುಖರಾಗಲು ಚಿಕಿತ್ಸೆ ಜೊತೆಗೆ ಗುಣಮಟ್ಟದ ಆಹಾರ ಕೂಡ ಮುಖ್ಯ. ಆದ್ದರಿಂದ ಗುತ್ತಿಗೆದಾರರನ್ನು ಬದಲಾಯಿಸಿ ಗುಣಮಟ್ಟದ ಆಹಾರ ಪೂರೈಕೆ ಮಾಡುವ ಸರಬರಾಜುದಾರರಿಗೆ ಗುತ್ತಿಗೆ ನೀಡಬೇಕು ಎಂದು ಸೂಚಿಸಿದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯ ಮಣಿಕಂಠ ಮಾತನಾಡಿ, ಆಸ್ಪತ್ರೆಯಲ್ಲಿ ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ಹೊರ ರೋಗಿಗಳಿಗೆ ಚಿಕಿತ್ಸೆ ನೀಡಬೇಕೆಂದು ನಿಯಮವಿದ್ದರೂ ಸಹ ವೈದ್ಯರು ಸಂಜೆ 3.30 ರಿಂದ 4 ಗಂಟೆಗೆ ಚಿಕಿತ್ಸೆ ಸ್ಥಗಿತಗೊಳಿಸುತ್ತಿದ್ದಾರೆ. ಈ ಬಗ್ಗೆ ವೈದ್ಯರನ್ನು ಪ್ರಶ್ನಿಸಿದ್ದಲ್ಲಿ ನೀವು ಯಾವ ಶಾಸಕರಿಗಾದರೂ ಅಥವಾ ಸಚಿವರಿಗಾದರೂ ಹೇಳಿಕೊಳ್ಳಿ ಎಂದು ಉಡಾಫೆಯಾಗಿ ಉತ್ತರಿಸುತ್ತಾರೆ ಎಂದು ದೂರಿದರು.

ಮಾಜಿ ಶಾಸಕ ಕೇಶವಮೂರ್ತಿ, ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಿವಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಈಶ್ವರ್ ಕಾನಟ್ಕೆ, ವೈದ್ಯಾಧಿಕಾರಿ ಡಾ.ಸುರೇಶ್, ಡಾ.ಮಧುಸೂದನ್ ಸೇರಿದಂತೆ ಹಲವರಿದ್ದರು.

ದಲಿತ ಮುಖಂಡ ರಾಜಯ್ಯ ಅವರಿಗೆ ಶ್ರದ್ಧಾಂಜಲಿ



ಅರ್ಜುನಹಳ್ಳಿ ರಾಜಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೆ.ಆರ್.ನಗರ, ಫೆ.23– ದಲಿತ ಸಮುದಾಯವನ್ನೇ ತನ್ನ ಕುಟುಂಬವನ್ನಾಗಿಸಿಕೊಂಡಿದ್ದ ಅರ್ಜುನಹಳ್ಳಿ ರಾಜಯ್ಯ ಅವರ ನಿಧನ ಅತೀವ ನೋವು ತರಿಸಿದೆ ಎಂದು ಜಿಪಂ ಮಾಜಿ ಸದಸ್ಯ ಹಾಗೂ ದಲಿತ ಮುಖಂಡ ಅಚ್ಯುತಾನಂದ್ ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ದಲಿತ ಸಂಘಟನೆಗಳಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಇತ್ತೀಚೆಗೆ ನಿಧನರಾದ ಪ್ರಗತಿ ಪರ ಹೋರಾಟಗಾರ, ಹಿರಿಯ ದಲಿತ ಮುಖಂಡ ಅರ್ಜುನಹಳ್ಳಿ ರಾಜಯ್ಯ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದರು.

ಅರ್ಜುನಹಳ್ಳಿ ರಾಜಯ್ಯ ಜಿಲ್ಲೆಯ ಪ್ರಭಾವಿ ಮುಖಂಡರಾಗಿದ್ದರು. ಇವರು ಹೋರಾಟಗಳಿಂದ ಬಂದವರು. ಸಂಘಟನೆ ಮತ್ತು ಹೋರಾಟದ ಮೂಲಕ ದನಿ ಇಲ್ಲದ ದಮನಿತ ಸಮುದಾಯಕ್ಕೆ ದನಿಯಾಗಿದ್ದವರು ಎಂದರು.

ರಾಜಯ್ಯ ಅವರು 1978ರಿಂದ ಹಿರಿಯ ರಾಜಕಾರಣಿ ಹಾಗೂ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಜೊತೆಯಲ್ಲಿ ರಾಜಕೀಯವಾಗಿ ಗುರುತಿಸಿಕೊಂಡು ಆಶ್ರಯ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ತಾಲೂಕಿನ ಸಮರ್ಥ ದಲಿತ ನಾಯಕನಾಗಿ, ತಾಪಂ ಸದಸ್ಯ, ಅಧ್ಯಕ್ಷರಾಗಿ ಉತ್ತಮ ಸಲ್ಲಿಸಿದರು. ಅಲ್ಲದೇ ಮೈಸೂರು ಜಿಪಂ ಸದಸ್ಯರಾಗಿ ಆಯ್ಕೆಯಾಗಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಅರ್ಜುನಹಳ್ಳಿ ರಾಜಯ್ಯನವರು ಜನಮನ್ನಣೆ ಗಳಿಸಿದ್ದರು ಎಂದರು.

ಇದೇ ವೇಳೆ ದಲಿತ ಮುಖಂಡರು ರಾಜಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಒಂದು ನಿಮಿಷ ಮೌನಾಚರಣೆ ಮಾಡಿದರು. ಈ ವೇಳೆ ದಲಿತ ಮುಖಂಡ ನಾಗರಾಜ್, ತಾಪಂ ಮಾಜಿ ಸದಸ್ಯ ತಮ್ಮಣ್ಣ, ಪುರಸಭೆ ಮಾಜಿ ಅಧ್ಯಕ್ಷೆ ಗೀತಾ, ಮುಖಂಡರಾದ ಡಾ.ರಾಮ ಚಂದ್ರ, ದೊಡ್ಡಯ್ಯ, ರಾಚಯ್ಯ, ಶೇಖರ್, ಚಲುವರಾಜ್, ಸೂರಿ, ಮುತ್ತುರಾಜ್, ನಿವೃತ್ತ ಶಿಕ್ಷಕ ಸಂಪತ್, ವೆಂಕಟೇಶ್, ಮಂಜು, ಗೋಪಿ, ಮೋಹನ್, ಪುಟ್ಟಣ್ಣಯ್ಯ, ಕೃಷ್ಣ, ಬಿ.ಟಿ.ಗೋವಿಂದರಾಜು, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ವಿಜೃಂಭಣೆಯ ಶ್ರೀಕಾಡು ಮಹದೇಶ್ವರಸ್ವಾಮಿ ಕೊಂಡೋತ್ಸವ



ಶ್ರೀಕಾಡು ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ಕೊಂಡೋತ್ಸವ ನಡೆಯಿತು.

ಸರಗೂರು, ಫೆ.23– ತಾಲೂಕಿನ ಗದ್ದೆ ಹುಂಡಿ ಗ್ರಾಮದ ಉದ್ಭವಮೂರ್ತಿ ಶ್ರೀಕಾಡು ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆ ಅಂಗವಾಗಿ ದೇವಸ್ಥಾನವನ್ನು ವಿದ್ಯುತ್ ದೀಪಾಲಂಕಾರ ಮಾಡಿ ಅಲಂಕರಿಸಲಾಗಿತ್ತು. ಈ ವೇಳೆ ದೇವರ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ ಗ್ರಾಮಕ್ಕೆ ಕರೆದೊಯ್ದು ವಿಶೇಷ ಪೂಜೆ ಸಲ್ಲಿಸಿ, ಹೋಮ–ಹವನ, ರುದ್ರಾಭಿಷೇಕ ನೆರವೇರಿಸಲಾಯಿತು. ಬಳಿಕ ಉತ್ಸವ ಮೂರ್ತಿಯನ್ನು ರಥದಲ್ಲಿಟ್ಟು ದೇವಸ್ಥಾನಕ್ಕೆ ಕರೆತರಲಾಯಿತು. ಈ ವೇಳೆ ರಸ್ತೆಯುದ್ದಕ್ಕೂ ಭಕ್ತರು ಉಘೇ.. ಮಾದಪ್ಪ, ಉಘೇ..ಮಾದಪ್ಪ ಎಂದು ಜೈಕಾರ ಕೂಗಿದರು. ಸತ್ತಿಗೆ ಸುರಪಾನಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಉತ್ಸವಮೂರ್ತಿ ದೇವಸ್ಥಾನ ಬಳಿಗೆ ಬಂದ ಕೂಡಲೇ ದೇವಸ್ಥಾನವನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕಲಾಯಿತು. ನಂತರ ವಿಶೇಷ ಪೂಜೆ ಸಲ್ಲಿಸಿ, ಕೊಂಡೋತ್ಸವಕ್ಕೆ ಚಾಲನೆ ನೀಡಲಾಯಿತು.

ಕೊಂಡೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಹರಕೆ ತೀರಿಸಿದರು. ಈ ವೇಳೆ ಗುಡಿಗೌಡ ಮಹೇಶ್, ದೇವಸ್ಥಾನದ ಗುಡ್ಡಪ್ಪ ಜ್ಯೋತಿ ಪ್ರಕಾಶ್ ಪೂಜಾ ಕಾರ್ಯ ನೆರವೇರಿಸಿದರು. ಸರಗೂರು ಠಾಣೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಭಕ್ತರಿಗೆ ಅನ್ನದಾನ ಹಮ್ಮಿಕೊಳ್ಳಲಾಗಿತ್ತು. ಮುಖಂಡರಾದ ಗುಣಪಾಲ್, ನಾಗಪ್ಪ, ಕಾಳಸ್ವಾಮಿ, ಕಾಡು ಮಹದೇಶ್ವರಸ್ವಾಮಿ ಜಾತ್ರಾ ಕಮಿಟಿ ಸದಸ್ಯರು ಹಾಗೂ ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಜರಿದ್ದರು.

ಎಪಿಎಂಸಿಯಲ್ಲಿ ಶೀಘ್ರ ಶುಕ್ರವಾರದ ಸಂತೆ ಆರಂಭ

ಶಾಸಕ ದರ್ಶನ್ ಧ್ರುವನಾರಾಯಣ್



ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ನಂಜನಗೂಡು, ಫೆ.23– ನಗರದ ಎಪಿಎಂಸಿ ಆವರಣದಲ್ಲಿ ರೈತರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಶೀಘ್ರ ಶುಕ್ರವಾರದ ಸಂತೆ ಆರಂಭಿಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಭರವಸೆ ನೀಡಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಸೋಮವಾರ ನಡೆದ ಅಭಿವೃದ್ಧಿ ಕಾಮಗಾರಿಗಳ ಕುರಿತ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಎಪಿಎಂಸಿ ರೈತರಿಂದ ರೈತರಿಗಾಗಿ ಇರುವ ಸಂಸ್ಥೆ. ಯಾವುದೇ ತೀರ್ಮಾನ ಕೈಗೊಳ್ಳಬೇಕಾದರೂ ರೈತರ ಹಿತ ಮುಖ್ಯವಾಗಿರಬೇಕು. ನಗರದಲ್ಲಿ ಹಿಂದಿನಿಂದಲೂ ಪ್ರತಿ ಶುಕ್ರವಾರ ದೊಡ್ಡ ಪ್ರಮಾಣದಲ್ಲಿ ಸಂತೆ ನಡೆಯುತ್ತಿತ್ತು. ಇದರಿಂದ ರೈತರಿಗೆ ಬೇಸಾಯಕ್ಕೆ ಸಂಬಂಧಿಸಿದ ಸಲಕರಣೆ, ನಗರದ ನಾಗರಿಕರಿಗೆ ವಾರಕ್ಕಾಗುವಷ್ಟು ದಿನನಿತ್ಯದ ಆಹಾರ ಪದಾರ್ಥಗಳನ್ನು ಖರೀದಿಸಲು ಅನುಕೂಲವಾಗಿತ್ತು. ಆದರೆ ಕಾರಣಾಂತರಗಳಿಂದ ಸಂತೆ ನಿಂತು ಹೋಗಿತ್ತು. ಹೀಗಾಗಿ ಶೀಘ್ರ ಎಪಿಎಂಸಿ ಆವರಣದಲ್ಲಿ ವಾರದ ಸಂತೆ ನಡೆಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ರೈತರ ಬೇಸಾಯಕ್ಕೆ ಸಂಬಂಧಿಸಿದಂತೆ ಎಪಿಎಂಸಿ ಆವರಣದಲ್ಲಿ 13 ಲಕ್ಷ ವೆಚ್ಚದಲ್ಲಿ 5 ಮಳಿಗೆ ನಿರ್ಮಿಸಲು ತೀರ್ಮಾನ ಕೈಗೊಂಡಿದ್ದರು. ಆದರೆ ಈಗಾಗಲೇ 9 ಮಳಿಗೆಗಳು ಖಾಲಿ ಇವೆ. ಮೊದಲು ಅದನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಹೊಸ ಕಟ್ಟಡ ನಿರ್ಮಾಣದ ಅವಶ್ಯಕತೆ ಇಲ್ಲ. ಚುನಾಯಿತ ಪ್ರತಿನಿಧಿಗಳಿಲ್ಲದೇ ಆಡಳಿತಾಧಿಕಾರಿಗಳ ಆಡಳಿತದ ಅವಧಿಯಲ್ಲಿ ಏಕಪಕ್ಷೀಯವಾಗಿ ನಿರ್ಮಾಣ ಕಾಮಗಾರಿ ನಡೆಸುವುದು ಸರಿಯಲ್ಲ. ಆ 9 ಮಳಿಗೆಗಳನ್ನು ರೈತರು ಪಡೆಯಲು ಮುಂದಾಗದಿದ್ದರೇ ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಸಾವಿರಾರು ರೂ. ಬಾಡಿಗೆ ನೀಡಿ ನಡೆಸಲಾಗುತ್ತಿರುವ ಸರ್ಕಾರದ ಹಲವು ಇಲಾಖೆಗಳನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಸರ್ಕಾರಿ ಕಚೇರಿಗಳಿಗೆ ಅಗತ್ಯವಾದ ಸೌಕರ್ಯಗಳನ್ನು ಕಲ್ಪಿಸಿ ವಿತರಿಸಲಾಗುವುದು. 2025–26ನೇ ಸಾಲಿನಲ್ಲಿ 1 ಕೋಟಿ ಅನುದಾನ ಲಭ್ಯವಿದ್ದು, ಅದನ್ನು ರೈತರಿಗೆ ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸಲು ಬಳಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಹುಲ್ಲಹಳ್ಳಿ ಮಾದಪ್ಪ, ಎಪಿಎಂಸಿ ಕಾರ್ಯದರ್ಶಿ ಮಹೇಶ್ ಉಪಸ್ಥಿತರಿದ್ದರು.

ವಿಜೃಂಭಣೆಯ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ



ಜೇಡಿಕಟ್ಟೆ ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೈಸೂರು, ಫೆ.23– ತಾಲೂಕಿನ ಜಯಪುರ ಗ್ರಾಮದಲ್ಲಿ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ ಸೋಮವಾರ ಬೆಳಗ್ಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಬರಡನಪುರದಲ್ಲಿ ಸೂರ್ಯೋದಯಕ್ಕೂ ಮುನ್ನಾ ಮಹದೇಶ್ವರ ಸ್ವಾಮಿ ಹುಲಿವಾಹನ ಉತ್ಸವ ಮೂರ್ತಿಗೆ ಹೋಮ ಹವನಗಳನ್ನು ನೆರವೇರಿಸಲಾಯಿತು. ಬಳಿಕ ಮಹಾ ಮಂಗಳಾರತಿ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಭಾರೀ ಗಾತ್ರದ ಹೂವಿನ ಹಾರಗಳಿಂದ ಅಲಂಕೃತಗೊಂಡಿದ್ದ ಉತ್ಸವ ಮೂರ್ತಿ ಮೆರವಣಿಗೆ ಜಯಪುರ ಮಾರ್ಗವಾಗಿ ಜೇಡಿಕಟ್ಟೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ತಲುಪಿತು. ಈ ವೇಳೆ ಭಕ್ತರು ಉಘೇ ಮಾದಪ್ಪ ಉಘೇ ಮಾದಪ್ಪ ಎಂದು ಜಯ ಘೋಷ ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು.

ಬರಡನಪುರದಿಂದ ಜೇಡಿಕಟ್ಟೆ ಮಹದೇಶ್ವರ ದೇವಸ್ಥಾನ ಆವರಣಕ್ಕೆ ಸಾಗುವ 3 ಕಿಲೋ ಮೀಟರ್ ಉದ್ದಕ್ಕೂ ರಸ್ತೆಗೆ ಚೆಂಡು ಹೂವಿನ ಹಾಸು ಹಾಸಿದರು. ಅಲ್ಲದೇ ರಸ್ತೆ ಉದ್ದಕ್ಕೂ ಕರ್ಪೂರ ಹಚ್ಚಿದರು. ಸಾವಿರಾರು ಭಕ್ತರು ಈಡುಗಾಯಿ ಒಡೆದರು. ಸುಗಂಧ ರಾಜ, ಮಲ್ಲಿಗೆ, ಗುಲಾಬಿ ಹೂವಿನ ಹಾರಗಳನ್ನು ಹಾಕಿ ಭಕ್ತಿಭಾವ ಮೆರೆದರು. ದೇವಾಲಯ ಆವರಣದಲ್ಲಿ ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಜಯಪುರ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಸಮಿತಿ ಪದಾಧಿಕಾರಿಗಳು ಹಾಗೂ ಬರಡನಪುರ, ಮಾವಿನಹಳ್ಳಿ ಮತ್ತು ಜಯಪುರ ಗ್ರಾಮಸ್ಥರು ಭಾಗವಹಿಸಿದ್ದರು.

ಗ್ರಾಮಗಳ ಅಭಿವೃದ್ಧಿ ಸರ್ಕಾರದ ಜೊತೆಗೆ ನಾಗರಿಕರ ಜವಾಬ್ದಾರಿ



ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಎನ್‌ಎಸ್‌ಎಸ್ ಧ್ವಜವನ್ನು ಹಸ್ತಾಂತರಿಸಿದರು.

ತಿ.ನರಸೀಪುರ, ಫೆ.23– ಗ್ರಾಮಗಳ ಅಭಿವೃದ್ಧಿ ಕೇವಲ ಸರ್ಕಾರದ ಹೊಣೆಗಾರಿಕೆಯಾಗದೇ ಪ್ರತಿ ನಾಗರಿಕರ ಜವಾಬ್ದಾರಿಯಾಗಿರುತ್ತದೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ಮೈಸೂರಿನ ಯುವರಾಜ ಕಾಲೇಜು(ಸ್ವಾಯತ್ತ) ವತಿಯಿಂದ ತಾಲೂಕಿನ ದೊಡ್ಡಮುಲಗೂಡು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಎಂದರೆ ಕೇವಲ ಅದೊಂದು ಶಿಬಿರವಲ್ಲ. ಅದು ಯುವ ಜನರ ಸೇವಾ ಮನೋಭಾವದ ಪ್ರತೀಕವಾಗಿದೆ. `Not me,but you' ಎಂಬ ಧ್ಯೇಯ ವಾಕ್ಯವು ಸಮಾಜ ಸೇವೆಯ ಮಹತ್ವವನ್ನು ನಮಗೆ ತಿಳಿಸುತ್ತದೆ. ಯುವಕರು ದೇಶದ ಭವಿಷ್ಯ. ಶಿಬಿರಾರ್ಥಿಗಳಲ್ಲಿರುವ ಶಕ್ತಿ, ಶಿಸ್ತು ಮತ್ತು ಸೇವಾ ಮನೋಭಾವ ನಮ್ಮ ಸಮಾಜವನ್ನು ಮತ್ತಷ್ಟು ಬಲಪಡಿಸುತ್ತದೆ. ಗ್ರಾಮಾಭಿವೃದ್ಧಿ ಕೇವಲ ಸರ್ಕಾರದ ಹೊಣೆಗಾರಿಕೆ ಅಲ್ಲ. ಅದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಶಿಬಿರಾರ್ಥಿಗಳು ಈ ನಿಟ್ಟಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ, ವೃಕ್ಷಾರೋಹಣ, ಆರೋಗ್ಯ ಜಾಗೃತಿ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿರುವುದು ಪ್ರಶಂಸನೀಯ ಎಂದರು.

ಎನ್‌ಎಸ್‌ಎಸ್‌ನಿಂದ ಆತ್ಮವಿಶ್ವಾಸ ವೃದ್ಧಿ: ಆರ್.ಚೆಲುವರಾಜು

ತಿ.ನರಸೀಪುರ: ಶಿಬಿರಗಳಲ್ಲಿ ಭಾಗವಹಿಸುವುದರಿಂದ ಆತ್ಮವಿಶ್ವಾಸ ವೃದ್ಧಿಸುವುದಲ್ಲದೆ ಸಮಾನತೆ, ಸಹಬಾಳ್ವೆ, ಜಾತಿ ಭೇದಗಳು ನೀಗಿ ಸಂಘ ಜೀವನ, ವಿಶ್ವಾಸ, ಜವಾಬ್ದಾರಿ ನಿರ್ವಹಣೆ ಮೊದಲಾದ ಮಹತ್ವದ ಮೌಲ್ಯಗಳನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಶಿಬಿರದ ಭಾಗವಾಗಿ ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳ ಸಂಕೋಚ, ಆತಂಕ, ಸಭಾ ಕಂಪನ ದೂರವಾಗಿ ಧೈರ್ಯದಿಂದ ಕೌಶಲ್ಯ, ಪ್ರತಿಭೆ ಪ್ರದರ್ಶಿಸುವ ವೇದಿಕೆಯಾಗಿದೆ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ ವ್ಯಕ್ತಿತ್ವ ಬೆಳಸುವುದಲ್ಲದೇ ಅದರ ಪಾಲನೆ ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ನಾಂದಿಯಾಗುವುದು. ಉದಾತ್ತ ಹಾಗೂ ಶ್ರೇಷ್ಠ ಹೊಸ ನಾಡು ಕಟ್ಟಲು ಯುವಕರು ಸಜ್ಜಾಗಬೇಕು. ಪ್ರತಿಯೊಬ್ಬರೂ ಕಲಿತ ವಿಷಯ ಹಾಗೂ ಅನುಭವಗಳನ್ನು ಜೀವನದಲ್ಲಿ ಪಾಲಿಸಿ ಅಳವಡಿಸಿ ನಾಯಕತ್ವದೊಂದಿಗೆ ಸಮಾನತೆ, ಮಾನವೀಯ ಸಂಬಂಧ, ಸಾಮಾಜಿಕ ಜವಾಬ್ದಾರಿ ಹಾಗೂ ಮೌಲ್ಯಗಳನ್ನು ಅರಿತು ಸಂದರ್ಭೋಚಿತ ಸದ್ಬಳಕೆಯಿಂದ ಮಾದರಿ ವ್ಯಕ್ತಿಯಾಗಿ ಬೆಳೆಯಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಶಿಸ್ತು ಉತ್ತಮ ಸಂಸ್ಕಾರ, ಒಳ್ಳೆಯ ನಡುವಳಿಕೆ ಜೊತೆಗೆ ಸಮಾಜ ದಲ್ಲಿ ನಾವು ಬದುಕುವುದು ಹೇಗೆ ಎನ್ನುವುದನ್ನು ಕಲಿಸಿಕೊಡುತ್ತದೆ. ಕಲಿತುಕೊಂಡ ಎಲ್ಲಾ ಅಂಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೇ ಮಾತ್ರ ಸಮಾಜಕ್ಕೆ ಉತ್ತಮ ಪ್ರಜೆಯಾಗಲು ಸಾಧ್ಯ ಎಂದ ಅವರು, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಮುಖ್ಯ. ನಿಸ್ವಾರ್ಥ, ತ್ಯಾಗ ಮನೋಭಾವದಿಂದ ಸೇವೆ ಸಲ್ಲಿಸಿದರೇ ಜೀವನ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಯುವರಾಜ ಕಾಲೇಜು ಆಡಳಿತ ಅಧಿಕಾರಿ ಹೆಚ್.ಎಸ್.ಜಯಂತ್, ಕುರಿ ಮತ್ತು ಉಣ್ಣೆ ನಿಗಮದ ಅಧ್ಯಕ್ಷ ಸ್ವಾಮಿಗೌಡ, ತಾಪಂ ಮಾಜಿ ಸದಸ್ಯ ಶ್ರೀನಿವಾಸಗೌಡ, ಪಿಡಿಒ ಸಂತೋಷ್ ಕುಮಾರ್, ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನಸ್ವಾಮಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನವೀನ್ ಕುಮಾರ್, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಪ್ರಕಾಶ್, ಸಹ ಶಿಕ್ಷಕ ಪ್ರದೀಪ್, ಕೇಬಲ್ ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಸೋಮಶೇಖರ್, ಮಾಜಿ ಸದಸ್ಯ ಡಿ.ಆರ್.ಶಂಕರ್, ಯುವರಾಜ ಕಾಲೇಜಿನ ಲೆಕ್ಕಪತ್ರಗಾರ ಕೆ.ಎಸ್.ರಾಘವೇಂದ್ರ, ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಎಂ.ಕೆ.ಗಿರೀಶ್ ಚಂದ್ರ ಮಂಜುಳಾ, ಡಾ.ರವಿಚಂದ್ರ, ಡಾ. ಅನಿಲ್ ಕುಮಾರ್, ಜಿ.ಸೌಜನ್ಯ, ಪಬ್ಲಿಕ್ ಸ್ಕೂಲ್‌ನ ಮಂಜುನಾಥ್, ಮಾದೇಶ್, ಸಹನಾ, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಹಾಜರಿದ್ದರು.

ಜಯಮ್ಮ ನಿಧನ



ಕೆ.ಆರ್.ನಗರ, ಫೆ.23– ಪಟ್ಟಣದ ಕನಕನಗರ ಬಡಾವಣೆ ನಿವಾಸಿ ದಿ.ಬಿ.ಎಂ.ಸ್ವಾಮಿಗೌಡರ ಪತ್ನಿ ಜಯಮ್ಮ(71) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಕೆ.ಆರ್.ಪೇಟೆ ತಾಲೂಕು ಆಲಂಬಾಡಿ ಕಾವಲು ಗ್ರಾಮದ ಜಮೀನಿನಲ್ಲಿ ಸಂಜೆ ನಡೆಯಿತು.

ಮೈಸೂರು ಮಿತ್ರ

ಮಂಗಳವಾರ 24 ಫೆಬ್ರವರಿ 2026

ನಾಳೆ ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿವಿಯ 8ನೇ ಘಟಿಕೋತ್ಸವ

● ತಲಾ 37 ಚಿನ್ನದ ಪದಕ, ದತ್ತಿ ಪದಕ ಸೇರಿ 1832 ಮಂದಿಗೆ ವಿವಿಧ ಪದವಿ ಪ್ರದಾನ ● ಆದರ್ಶ್ ಗ್ರೂಪ್ ಅಧ್ಯಕ್ಷ ಬಿ.ಎಂ. ಜಯಶಂಕರ್ ಘಟಿಕೋತ್ಸವ ಭಾಷಣ



ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿನ ಗೋಲ್ಡನ್ ಜ್ಯುಬಿಲಿ ಸಭಾಂಗಣದಲ್ಲಿ ಸೋಮವಾರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಫೆ.23(ಎಂಟಿವೈ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವ ಫೆ.25ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದ್ದು, ಈ ಬಾರಿ 37 ಚಿನ್ನದ ಪದಕ, 37 ದತ್ತಿ ಪದಕ ಸೇರಿದಂತೆ 1,832 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿನ ಗೋಲ್ಡನ್ ಜ್ಯುಬಿಲಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.25ರಂದು ಮಧ್ಯಾಹ್ನ 3ಕ್ಕೆ ನಡೆಯಲಿರುವ ಘಟಿಕೋತ್ಸವದ ಸಾನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಆದರ್ಶ್ ಗ್ರೂಪ್ ಅಧ್ಯಕ್ಷ ಬಿ.ಎಂ.ಜಯಶಂಕರ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್ ಭಾಗವಹಿಸಲಿದ್ದಾರೆ ಎಂದರು.

ಘಟಿಕೋತ್ಸವದಲ್ಲಿ 1,081 ಬಿಇ, 63 ಬಿಸಿಇ, 99 ಎಂ.ಟೆಕ್, 118 ಎಂಸಿಎ, 161ಎಂಎಸ್‌ಸಿ, 281 ಎಂಬಿಎ ಪದವೀಧರರು, 29 ಪಿಹೆಚ್.ಡಿ. ಸಂಶೋಧಕರಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಅನುಭವಾಧಾರಿತ ಶಿಕ್ಷಣವನ್ನು ಮತ್ತಷ್ಟು ಬಲಪಡಿಸುವ ಹಾಗೂ ವಿದ್ಯಾರ್ಥಿಗಳಿಗೆ ಬದಲಾದ ಕಾಲಕ್ಕೆ ತಕ್ಕಂತೆ ಸಂಶೋಧನೆ, ಎಐ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಎಸ್‌ಟಿಯು ಪ್ರಮುಖ ಸಂಸ್ಥೆಗಳೊಂದಿಗೆ ಮಹತ್ವದ ಒಪ್ಪಂದ ಮಾಡಿಕೊಂಡಿದೆ ಎಂದು ವಿವರಿಸಿದರು.

ಬಜಾಜ್ ಇಂಜಿನಿಯರಿಂಗ್ ಸ್ಕಿಲ್ ಟ್ರೈನಿಂಗ್ ಜತೆ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳ ಸೆಂಟರ್ ಆಫ್ ಎಕ್ಸಲೆನ್ಸ್, ಇಸ್ರೋ, ವಿಗ್ಯಾನ್ ಲ್ಯಾಬ್, ಫ್ಯೂಜಿ ಎಲೆಕ್ಟ್ರಿಕ್ ಜತೆಗೆ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಸೆಂಟರ್ ಆಫ್ ಎಕ್ಸಲೆನ್ಸ್ ಕುರಿತಾಗಿ ಒಪ್ಪಂದವಾಗಿದೆ. ಈ ಸಂಸ್ಥೆಗಳ ಸಹಯೋಗದ ಮೂಲಕ ಪಠ್ಯಕ್ರಮ ಅಭಿವೃದ್ಧಿ, ಇಂಟರ್ನ್‌ಶಿಪ್, ಸಂಶೋಧನಾ ಯೋಜನೆಗಳು, ಕೌಶಲಾಭಿವೃದ್ಧಿ ಕಾರ್ಯಕ್ರಮಗಳು, ಉದ್ಯೋಗಾವಕಾಶಗನ್ನು ವಿಸ್ತರಿಸಲಾಗುತ್ತದೆ ಎಂದರು.

ಚಿನ್ನದ ಪದಕ ಪಡೆದವರು: ಬಿಇ ವಿಭಾಗದಲ್ಲಿ ಕೆ.ಆರ್.ಭವಾನಿ, ಪ್ರತಿಜ್ಞಾ ಪ್ರಕಾಶ್, ಜೀವಿತಾ ವೆಂಕಟೇಶ್, ಎಸ್.ಸಿಂಚನ, ಎಂ.ವರ್ಷ, ಎಚ್.ಎಂ.ಜೀವ, ಎನ್.ಶ್ರೀಹರಿ, ಕೆ.ಸಮೀಕ್ಷಾ, ಎರಂ ಹಮೀದ್, ಎಸ್.ಸಹನ, ಆರ್ಯನ್, ಎಸ್.ಗಿರೀಶ್ ಗೌಡ, ಸಿ.ಎನಿಧಿ, ಬಿಸಿಎ ವಿಭಾಗದಲ್ಲಿ ಆರ್.ಯುಕ್ತ ಎಂ.ಟೆಕ್ ವಿಭಾಗದಲ್ಲಿ ವಿ.ಚೈತ್ರಾ, ಪಲಿಗುಣಿ ಜಿ.ಲಕ್ಷ್ಮೀಶ್ವರ್, ಎಸ್.ಸ್ವಾತಿ, ಆರ್.ಸುಭಾಷಿಣಿ, ಜಿ.ಮೇರಿ ಶ್ವೇತಾ, ಎಂ.ಪೃಥ್ವಿ, ಎಚ್.ಎನ್.ಜಯಚಂದು, ಎನ್.ಎಸ್.ಸ್ನೇಹಾ, ಎಸ್.ಕವಿತಾ, ಎಂಸಿಎ ವಿಭಾಗದಲ್ಲಿ ನಿಖಿಲ್ ಎಸ್.ನವಳ್ಳಿ, ಎಂಎಸ್‌ಸಿ ವಿಭಾಗದಲ್ಲಿ ಕೆ.ವಿ.ಪುಣ್ಯಶ್ರೀ, ಆರ್.ವಿಜಯಲಕ್ಷ್ಮೀ, ಆರ್.ಗೀತಾಶ್ರೀ, ಟಿ.ಎಸ್.ನಂದನ, ಎಸ್.ಭವ್ಯಶ್ರೀ, ವಿ.ಅಜಯ್, ಕೆ.ಎಸ್.ತೇಜಸ್ವಿನಿ, ಬಿ.ಕೆ.ಗ್ರೀಷ್ಮಾ ಪಿ.ವಿ.ವಿನಿಶಾ, ಎಂಬಿಎ ವಿಭಾಗದಲ್ಲಿ ತಾನ್ಯ ಪಿ.ಪ್ರಸಾದ್, ಡಿಎಂ ವಿಭಾಗದಲ್ಲಿ ಎಚ್.ಎ.ವರ್ಷಿತಾ ಶೇಖರ್, ಎಫ್‌ಎಂ ವಿಭಾಗದಲ್ಲಿ ಎಸ್.ಎಸ್.ಅನನ್ಯ, ಆರ್‌ಎಂ ವಿಭಾಗದಲ್ಲಿ ರುತ್ವಿಕ್ ಗಣಪತಿ ನಾಯಕ್ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ವಿವಿಯ ಕುಲಸಚಿವ ಡಾ.ಎಸ್.ಎ.ಧನರಾಜ್, ಪರೀಕ್ಷಾಂಗ ಕುಲಸಚಿವ ಡಾ.ಪಿ.ನಂಜುಂಡಸ್ವಾಮಿ, ಕಾಲೇಜಿನ ಪ್ರಾಂಶುಪಾಲ ಡಾ.ಸಿ.ನಟರಾಜು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಗಿಲ್ಲಿ –3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವತಿ (ತ)	4 ಪ್ರದರ್ಶನಗಳು
ಸಂಗಂ	
ಸೆಕೆಂಡ್ ಕೇಸ್ ಆಫ್ ಸೀತಾರಾಂ (ಕ) + ಆಲ್ಫಾ (ಕ)	2+2 ಪ್ರದರ್ಶನಗಳು
ಲಿಡೋ	
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಿಷ್ಠ (ಕ)	4 ಪ್ರದರ್ಶನಗಳು

ನಾಲ್ವಡಿ ಭಾರತ ಕಂಡ ಅತ್ಯುತ್ತಮ ಮಹಾರಾಜ

ಕವಿ ಡಾ.ಜಯಪ್ಪ ಹೊನ್ನಾಳಿ ಬಣ್ಣನೆ



ವಿವಿಧ ಕ್ಷೇತ್ರದ ಸಾಧಕರಿಗೆ ಜಾನಪದ ಕಲಾರತ್ನ ಪ್ರಶಸ್ತಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಫೆ.23(ಎಂಟಿವೈ)– ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮನ್ನು ಸಾಮ್ರಾಜ್ಯವನ್ನು ಸರ್ವಾಂಗೀಣ ವಿಕಾಸಗೊಳಿಸಿ, ಪ್ರಜಾಕೋಟಿಯ ಶಾಶ್ವತ ಹೃದಯ ಸಿಂಹಾಸನಾಧೀಶ್ವರೆನಿಸಿದ್ದಾರೆ ಎಂದು ಕವಿ ಡಾ.ಜಯಪ್ಪ ಹೊನ್ನಾಳಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಜಾನಪದ ಕಲಾವಿದರ ಒಕ್ಕೂಟ, ಏರ್ಪಡಿಸಿದ್ದ ರಾಜ್ಯಮಟ್ಟದ ಜಾನಪದ ಕಲಾರತ್ನ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕರುನಾಡಿನ ಪೂರ್ಣಾಭಿವೃದ್ಧಿಗೆ ಭದ್ರ ಬುನಾದಿಯನ್ನು ಹಾಕಿದ ಮಹಾರಾಜ ಇವರು, ರಾಜ್ಯ, ಭಾರತ ಕಂಡ ಅತ್ಯುತ್ತಮ ಮಹಾರಾಜರೆನಿಸಿದ್ದಾರೆ. ಮಹಾತ್ಮ ಗಾಂಧೀಜಿ ಇವರನ್ನು 'ರಾಜರ್ಷಿ' ಎಂದು ಕರೆದಿದ್ದರು. ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರು ನಾಲ್ವಡಿ ಅವರ ಕಾರ್ಯವೈಖರಿಗೆ ಪ್ರಶಂಸೆ ವ್ಯಕ್ತಪಡಿಸಿದ್ದರು. ಕನ್ನಡಿಗರಿಗೆ ಇವರು ಪ್ರಾತಃಸ್ಮರಣೀಯರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 15 ಜನ ಸಾಧಕರಿಗೆ ರಾಜ್ಯ ಮಟ್ಟದ ಜಾನಪದ ಕಲಾರತ್ನ ಪ್ರಶಸ್ತಿ, 6 ಜನ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಿ, ಪ್ರಶಸ್ತಿ ಪುರಸ್ಕೃತರಿಗೆ ಶುಭ ಕೋರಿದರು. ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಸತೀಶ್ ಜವರೇಗೌಡ, ತುಮಕೂರಿನ ಸಂಪನ್ಮೂಲ ವ್ಯಕ್ತಿ ಡಿ.ನಾಗರಾಜು, ಮೈಸೂರಿನ ಮಾನುಷಿ ಫೌಂಡೇಶನ್ ಸಂಸ್ಥಾಪಕ ಕಾರ್ಯದರ್ಶಿ ಪ್ರಮೀಳಾ ಭಾಗ್ಯರಾಮ್, ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಆರ್.ಕೆ ಸ್ವಾಮಿ, ಹಿರಿಯ ವಿದ್ವಾಂಸರಾದ ಕೆ.ಟಿ. ವೀರಪ್ಪ, ನಿವೃತ್ತ ಪ್ರಾಚಾರ್ಯರೂ ಗಾಯಕರೂ ಆದ ಪ್ರೊ. ಕುಮಾರ್, ಚನ್ನಬಸಪ್ಪ, ಗಾಯಕಿ ಲಲಿತಾ ಪಾಟೀಲ್, ರಾಜಶೇಖರ, ರಾಜ್ಯ ಮಟ್ಟದ ಕಲಾರತ್ನ ಪ್ರಶಸ್ತಿ ಪುರಸ್ಕೃತರು, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತರು ಉಪಸ್ಥಿತರಿದ್ದರು. ನಂದಿನಿ ಆರ್ ಕೆ ಸ್ವಾಮಿ ನಿರೂಪಣೆ ಮಾಡಿದರೆ, ಚನ್ನಬಸಪ್ಪ ಪ್ರಾರ್ಥಿಸಿದರು. ಲಲಿತಾ ಪಾಟೀಲ್ ಮತ್ತಿತರರು ಗಾಯನ ನಡೆಸಿಕೊಟ್ಟರು.

ವಿ ಕೇರ್ ಸಂಸ್ಥೆಯಲ್ಲಿ ಸಣ್ಣ ಕಥೆಗಳ ಜನಕ ಪಂಜೆ ಮಂಗೇಶರಾಯರ ಜನ್ಮದಿನಾಚರಣೆ



ವಿ ಕೇರ್ ಸಂಸ್ಥೆ ವತಿಯಿಂದ ನಡೆದ ಮಾಸಿಕ ಓದು ಹಾಗೂ ಪಂಜೆ ಮಂಗೇಶರಾಯರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಗಣ್ಯರು ಮಾತನಾಡಿದರು.

ಮೈಸೂರು, ಫೆ.23– ಮೈಸೂರಿನ ವಿ ಕೇರ್ ಸಂಸ್ಥೆ ವತಿಯಿಂದ ಭಾನುವಾರ ನಡೆದ ಮಾಸಿಕ ಓದು ಕಾರ್ಯಕ್ರಮದಲ್ಲಿ, 'ಸಣ್ಣ ಕಥೆಗಳ ಜನಕ' ಪಂಜೆ ಮಂಗೇಶರಾಯರ ಜನ್ಮದಿನವನ್ನು ಆಚರಿಸಲಾಯಿತು.

ಈ ವೇಳೆ ಲೇಖಕ, ವಿಶ್ರಾಂತ ಪ್ರಾಧ್ಯಾಪಕ ಕೆ.ಪಿ.ವಾಸುದೇವನ್ ಮಾತನಾಡಿ, ಓದು ನಿರಂತರವಾದುದು, ಅದು ಪ್ರತಿ ಬಾರಿಯೂ ಮುಂದಿನ ಹಂತಕ್ಕೆ ಕೊಂಡೊಯ್ಯುವಂತಿರಬೇಕು. ಆಟೋಟವನ್ನು ಸಂಭ್ರಮಿಸುವಂತೆ, ಆಹಾರವನ್ನು ಆಸ್ವಾದಿಸುವಂತೆ ಮಕ್ಕಳು ಪುಸ್ತಕ ಓದುವುದನ್ನೂ ಖುಷಿಯಿಂದ ಮಾಡಿದರೆ ಗೆಲುವು ಕಟ್ಟಿಟ್ಟ ಬುತ್ತಿ. ಸಶಕ್ತ ಸಮಾಜ ಕಟ್ಟುವ ನಿಟ್ಟಿನಲ್ಲಿ ಮೊದಲಿಗೆ ಶಿಕ್ಷಕರು ನಿತ್ಯ ನೂತನ ವಿದ್ಯಾರ್ಥಿಗಳಾಗಬೇಕು. ವಾಚನಾಭಿರುಚಿ ಬೆಳೆಸಿಕೊಂಡು, ಬದುಕನ್ನು ಉನ್ನತೀಕರಿಸಿಕೊಳ್ಳಬೇಕು. ಆ ಮೂಲಕ ಮಕ್ಕಳಿಗೂ ಪ್ರೇರಣೆಯಾಗಬೇಕು ಎಂದು ಸಲಹೆ ನೀಡಿದರು.

ಸಾಹಿತ್ಯ ಚಿಂತಕ ಶ್ರೀಪಾದ ಹೆಗಡೆ ಮಾತನಾಡಿ, ಆಧುನಿಕ ಕನ್ನಡ ನವೋದಯದ ಆಚಾರ್ಯ ಪಂಜೆ ಮಂಗೇಶರಾಯರು ಅಪರೂಪದ ವ್ಯಕ್ತಿತ್ವ ಹೊಂದಿದ್ದರು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿ, ಸಾಹಿತ್ಯಾಸಕ್ತರಿಗೆ ಮಾರ್ಗದರ್ಶಕರಾದರು. ಸಹಜ ಲಯದ ಶಿಶು ಸಾಹಿತ್ಯ ರಚಿಸುವ ಮೂಲಕ ಸಣ್ಣಕಥೆಗಳ ಜನಕರಾದ ಅವರು, ಅಧ್ಯಾಪಕರಾಗಿ ಸೇವೆ ಸಲ್ಲಿಸುವ ಮೂಲಕ ಶೈಕ್ಷಣಿಕ ರಂಗಕ್ಕೂ ಅಪಾರ ಕೊಡುಗೆ ನೀಡಿದರು. ಗೋವಿಂದ ಪೈ ಅವರನ್ನು ಪ್ರೇರೇಪಿಸಿ, ಕನ್ನಡಕ್ಕೆ ಮೊದಲ ರಾಷ್ಟ್ರಕವಿ ದೊರಕುವಂತೆ ಮಾಡಿದರು. ಕುವೆಂಪು ಅವರಂತಹ ಮಹಾನ್ ಕವಿಗಳೂ ಪಂಜೆ ಮಂಗೇಶರಾಯರ ಸಾಹಿತ್ಯದಿಂದ ಪ್ರಭಾವಿತರಾಗಿದ್ದರು ಎಂದು ಬಣ್ಣಿಸಿ, ಅವರ 'ಮೂಡುವನು ರವಿ ಮೂಡುವನು' ಕವನವನ್ನು ಮನೋಜ್ಞವಾಗಿ ವಾಚಿಸಿದರು.

ವಿ ಕೇರ್ ಸಂಸ್ಥೆಯ ಸಂಸ್ಥಾಪಕರಾದ ಡಾ.ಕುಮುದಿನಿ ಅಚ್ಚಿ ಅವರು ಸಂಸ್ಥೆಯ ಆಶಯಗಳನ್ನು ವಿವರಿಸಿದರು. ಇದೇ ವೇಳೆ 75 ವರ್ಷ ಪೂರೈಸಿದ ಪ್ರೊ.ಕೆ.ಪಿ.ವಾಸುದೇವನ್ ಅವರಿಗೆ ಮಕ್ಕಳು ಶುಭಾಶಯ ಕೋರಿದರು. ಪತ್ರಕರ್ತ ಅಂಶುಪ್ಪ ಹೂಗಾರ್, ಸಾಹಿತ್ಯಾಸಕ್ತರಾದ ಡಾ.ರವಪ್ಪ, ಅಭಿಯಂತರ ಅಶ್ವಥ್, ರಂಗಕರ್ಮಿ ಚಂದ್ರು, ಮೂಡಿಗೆರೆ ಗೋಪಾಲ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಶಶಾಂಕ್, ವಿ ಕೇರ್ ಕಾರ್ಯಕರ್ತರಾದ ಚಂದನಾ, ಅನುಶ್ರೀ, ಪೋಷಕರು, ಒಡನಾಡಿ ಮತ್ತು ಸರ್ಕಾರಿ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಜಯಪುರದ ಬಿಲ್ಲಯ್ಯ ಸ್ವಾಮಿ ದೇವಾಲಯ ಉದ್ಘಾಟನೆ

ಎರಡೂವರೆ ದಶಕದಿಂದ ಪಾಳುಬಿದ್ದಿದ್ದ ದೇವಸ್ಥಾನಕ್ಕೆ ಮಾವಿನಹಳ್ಳಿ ಸಿದ್ದೇಗೌಡರಿಂದ ಕಾಯಕಲ್ಪ



ಮೈಸೂರು ತಾಲೂಕು ಜಯಪುರ ಗ್ರಾಮದ ಬಿಲ್ಲಯ್ಯ ಸ್ವಾಮಿ ದೇವಾಲಯದ ಲೋಕಾರ್ಪಣೆ ವೇಳೆ ಅಪಾರ ಭಕ್ತರು ನೆರೆದಿದ್ದರು.

ಮೈಸೂರು, ಫೆ.23– ತಾಲೂಕಿನ ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಆವರಣದಲ್ಲಿನ ಜೀರ್ಣೋದ್ಧಾರಗೊಂಡ ಬಿಲ್ಲಯ್ಯ ಸ್ವಾಮಿ ದೇವಾಲಯವು ಲೋಕಾರ್ಪಣೆಗೊಂಡಿದೆ.

ಕಳೆದ 25 ವರ್ಷಗಳಿಂದ ಪಾಳುಬಿದ್ದಿದ್ದ ಬಿಲ್ಲಯ್ಯ ಸ್ವಾಮಿ ದೇವಾಲಯವನ್ನು ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಸಮಿತಿ ಅಧ್ಯಕ್ಷರಾದ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ ಅವರು ಸ್ವಂತ ಹಣದಿಂದ ಜೀರ್ಣೋದ್ಧಾರ ಮಾಡಿಸಿ, ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ದೇವಸ್ಥಾನವನ್ನು ದುರಸ್ತಿಗೊಳಿಸಿ, ಬಿಲ್ಲಯ್ಯ ಸ್ವಾಮಿ ವಿಗ್ರಹವನ್ನು ತಮಿಳುನಾಡಿನ ಶಿಲ್ಪಿಗಳಿಂದ ಕೆತ್ತನೆ ಮಾಡಿಸಿದ್ದಾರೆ. ದೇವಾಲಯ ಮತ್ತು ಗೋಪುರಕ್ಕೆ ಆಕರ್ಷಕ ಹಾಗೂ ಗುಣಮಟ್ಟದ ಬಣ್ಣ ಮಾಡಿಸಿದ್ದಾರೆ. ಕಳೆದ ಶುಕ್ರವಾರ ಗೋಪುರಕ್ಕೆ ಕಳಸ ಪ್ರತಿಷ್ಠಾಪಿಸುವ ಮೂಲಕ ವಿಧ್ಯುಕ್ತವಾಗಿ ದೇವಾಲಯವನ್ನು ಉದ್ಘಾಟಿಸಲಾಗಿದೆ.

ಅಂದು ಬರಡನಪುರ ಗಣೇಶ್ ಸ್ವಾಮೀಜಿ ಸಾನಿಧ್ಯದಲ್ಲಿ ಹೋಮಹವನ ನಡೆಸಿ, ಗರ್ಭಗುಡಿಯಲ್ಲಿನ ಬಿಲ್ಲಯ್ಯ ಸ್ವಾಮಿ ವಿಗ್ರಹಕ್ಕೆ ವಿಶೇಷ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು. ಮಹಾಮಂಗಳಾರತಿ ಬಳಿಕ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಸಮಿತಿಯ ಸದಸ್ಯರು, ಜಯಪುರ, ಮಾವಿನಹಳ್ಳಿ ಮತ್ತು ಬರಡನಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೇಸಿಗೆ ಕಾಲದಲ್ಲಿ ಅರಣ್ಯ ಸಂರಕ್ಷಣೆ ಕುರಿತು ನಾಳೆ ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು,ಫೆ.23–ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸಮುದಾಯ ರೇಡಿಯೋ ಕೇಂದ್ರವು ಫೆ.25ರಂದು ಬೆಳಗ್ಗೆ 11:30ರಿಂದ 12:30ರವರೆಗೆ ಬೇಸಿಗೆ ಕಾಲದಲ್ಲಿ ಅರಣ್ಯ ಸಂರಕ್ಷಣೆ ವಿಷಯದ ಕುರಿತು ನೇರ ಸಂದರ್ಶನ ಮತ್ತು ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ.



ಪರಮೇಶ್

ಕಾರ್ಯಕ್ರಮದಲ್ಲಿ ಮೈಸೂರು ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ಭಾಗವಹಿಸಲಿದ್ದು, ಬೇಸಿಗೆ ಸಮಯದಲ್ಲಿ ಅರಣ್ಯ ಅಗ್ನಿ ತಡೆಗಟ್ಟುವಿಕೆ, ವನ್ಯಜೀವಿ ರಕ್ಷಣೆ, ಸಾರ್ವಜನಿಕರ ಪಾಲ್ಗೊಳ್ಳಿಕೆ, ಮುನ್ನೆಚ್ಚರಿಕಾ ಕ್ರಮಗಳು ಸೇರಿದಂತೆ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಕುರಿತು ಮಾತನಾಡಲಿದ್ದಾರೆ. ಸಾರ್ವಜನಿಕರು ತಮ್ಮ ಪ್ರಶ್ನೆಗಳು, ಸಲಹೆಗಳು ಮತ್ತು ಅರಣ್ಯ ಸಂರಕ್ಷಣೆ ಕುರಿತು ಚಿಂತನೆಗಳನ್ನು ನೇರವಾಗಿ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಲು ಆಹ್ವಾನಿಸಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ದೂ.ಸಂಖ್ಯೆ 8296725912 / 0821–25 46 563 ಮೂಲಕ ಸಂಪರ್ಕಿಸಬಹುದು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ




ಮೈಸೂರು, ಫೆ.23– ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯಲ್ಲಿ ಕೆಲಸದ ನಿಮಿತ್ತ ಫೆ.24 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕುಂಬಾರ ಕೊಪ್ಪಲು, ಕಾವೇರಿ ಬಡಾವಣೆ, ಆದಿಶಕ್ತಿ ದೇವಸ್ಥಾನ ರಸ್ತೆ ಮಹದೇಶ್ವರ ಬಡಾವಣೆ, ಗ್ರೇಸ್ ಕಾನ್ವೆಂಟ್ ಶಾಲೆ, ಜಯದೇವ ಆಸ್ಪತ್ರೆ ಸುತ್ತಮುತ್ತ, ಎ.ಕೆ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ವಿಜಯನಗರ 1ನೇ ಹಂತ, ಭಾರತಿ ವಿದ್ಯಾಭವನ ಸುತ್ತಮುತ್ತ, ಯೋಗನರಸಿಂಹಸ್ವಾಮಿ ದೇವಸ್ಥಾನ ಸುತ್ತಮುತ್ತ, ಕೆ.ಡಿ ರಸ್ತೆ, ಹುಣಸೂರು ಮುಖ್ಯರಸ್ತೆ ಹಿನಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಇಂದು ಪ್ರತಿಭಟನೆ

ಮೈಸೂರು, ಫೆ23– ಮೈಸೂರು ಸಿಲ್ಕ್ ನೂಲು ತೆಗೆಯುವ ತಿ.ನರಸೀಪುರ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ, ಮಂಗಳವಾರ(ಫೆ.24) ಬೆಳಗ್ಗೆ 11.30ಕ್ಕೆ ಮೈಸೂರಿನ ಹಳೇ ಡಿಸಿ ಆಫೀಸ್ ಬಳಿ ಕರ್ನಾಟಕ ಸೇನಾ ಪಡೆಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥರಿಗೆ 2026ನೇ ಸಾಲಿನ 'ಈಶ್ವರೀಯ ಪ್ರಶಸ್ತಿ' ಪ್ರದಾನ

ನಾನು ಎನ್ನುವುದು ಅಹಂಕಾರ, ನಾವು ಎನ್ನುವುದು ಅಲಂಕಾರ...



ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರಿಗೆ 2026ನೇ ಸಾಲಿನ 'ಈಶ್ವರೀಯ ಪ್ರಶಸ್ತಿ'ಯನ್ನು ಭಾನುವಾರ ಪ್ರದಾನ ಮಾಡಲಾಯಿತು. ಈ ವೇಳೆ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಡಾ.ಲಕ್ಷ್ಮೀಜಿ, ಹಿರಿಯ ವಕೀಲ ಓ.ಶಾಮ್ ಭಟ್ ಸೇರಿದಂತೆ ಇತರರಿದ್ದರು.

ಮೈಸೂರು,ಫೆ.23(ಎಸ್‌ಪಿಎನ್)– ಖ್ಯಾತ ಹೃದ್ರೋಗ ತಜ್ಞ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರಿಗೆ 2026ನೇ ಸಾಲಿನ 'ಈಶ್ವರೀಯ ಪ್ರಶಸ್ತಿ'ಯನ್ನು ಭಾನುವಾರ ಪ್ರದಾನ ಮಾಡಲಾಯಿತು.

ಮೈಸೂರು–ಹುಣಸೂರು ರಸ್ತೆಯ ಭಾರತೀಯ ವಿದ್ಯಾಭವನ ಮುಂಭಾಗದಲ್ಲಿರುವ ಮೈದಾನದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಮೈಸೂರು ಉಪವಲಯ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಆಯೋಜಿಸಿರುವ ಗುಜರಾತಿನ ಶ್ರೀ ಸೋಮನಾಥ ದಿವ್ಯ ದರ್ಶನ ಹಾಗೂ ಈಶ್ವರೀಯ ವಿವಿಯ 90 ವಾರ್ಷಿಕೋತ್ಸವ ಸಮಾರೋಪದಲ್ಲಿ ಅವರಿಗೆ ಈ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಈಶ್ವರೀಯ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಡಾ.ಸಿ.ಎನ್.ಮಂಜುನಾಥ್, ಜೀವನದಲ್ಲಿ ನಾನು ಎನ್ನುವುದು ಅಹಂಕಾರ, ನಾವು ಎಂಬುದು ಅಲಂಕಾರ. ಆದರೆ ಅಹಂಕಾರ ದೇಹಕ್ಕಿಂತ ಹೆಚ್ಚು ಭಾರ. ಹಾಗಾಗಿ ನಾವೆಲ್ಲ ಸಕರಾತ್ಮಕವಾಗಿ ಪರಿವರ್ತನೆಯಾಗಬೇಕು. ಮನುಷ್ಯನಿಗೆ ಬೇಕಾಗಿರುವುದು ಉತ್ತಮ ನಡವಳಿಕೆ, ತಾಳ್ಮೆ. ಮನೆ ನಿರ್ಮಾಣ ಮಾಡಲು ವಾಸ್ತು ನೋಡುತ್ತೇವೆ. ಅದೇ ರೀತಿ ಉತ್ತಮ ಬದುಕು ರೂಪಿಸಿಕೊಳ್ಳಲು ಮನಸ್ಸಿನ ವಾಸ್ತು ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

> ಆಸ್ಪತ್ರೆಯ ಐಸಿಯುನಲ್ಲಿ ರೋಗಿಯನ್ನು ನೋಡಿದಾಗ ಆರೋಗ್ಯ ಎಷ್ಟು ಮುಖ್ಯ ಎಂಬುದು ಅರಿವಿಗೆ ಬರುತ್ತದೆ. ಕಾರಾಗೃಹಕ್ಕೆ ಭೇಟಿ ನೀಡಿ, ಖೈದಿಗಳ ಬದುಕು ನೋಡಿ ದಾಗ ಸ್ವಾತಂತ್ರ್ಯ ಬೇಕು ಅನಿಸುತ್ತದೆ. ಕೊನೆಗೆ ರುದ್ರಭೂಮಿಗೆ ಹೋಗಿ ನೋಡಿ ದಾಗ ಜೀವನದಲ್ಲಿ ಶಾಂತಿ ಎಷ್ಟು ಮುಖ್ಯ ಎಂಬುದು ಅರಿವಿಗೆ ಬರುತ್ತದೆ. ಹಾಗಾಗಿ ಮನುಷ್ಯನ ಆಲೋಚನೆ, ಮನಸ್ಸಿನ ದುಗುಡ ಕಡಿಮೆಯಾದಾಗ ಹೃದಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ.
> –ಡಾ.ಸಿ.ಎನ್.ಮಂಜುನಾಥ್

ಆಧುನಿಕ ಬದುಕು ಬಹಳ ಒತ್ತಡದಿಂದ ಕೂಡಿದೆ. ಯಾವುದೇ ಕೆಲಸ– ಕಾರ್ಯಗಳಿಲ್ಲದಿದ್ದರೂ ಒತ್ತಡ ಬದುಕು ರೂಪಿಸಿಕೊಂಡಿದ್ದೇವೆ ಇದರಿಂದ ಮುಕ್ತವಾಗಲು ಯೋಗ, ಜ್ಞಾನ, ಧ್ಯಾನ, ಪ್ರಾರ್ಥನೆ ಅಗತ್ಯ ಎಂದರು.

ಯಾವ ಮನುಷ್ಯನಿಗೆ ನಾಲಿಗೆ ಮೇಲೆ ನಿಯಂತ್ರಣ ಇರುತ್ತೋ ಆತ ನಿಜವಾಗಿ ನೆಮ್ಮದಿಯಿಂದ ಇರುತ್ತಾನೆ. ಮತ್ತೊಂದೆಡೆ ಕೆಲವು ಕಡೆ ಸುಮ್ಮನೆ ಮಾತನಾಡುವ ಹವ್ಯಾಸ ಇರುತ್ತದೆ. ಇದು ಇನ್ನೊಬ್ಬರ ಬಗ್ಗೆ ಮಾನಸಿಕವಾಗಿ ಅಸೂಯೆ ತುಂಬಿಕೊಂಡು ಬೇರೊಬ್ಬರ ಜೀವನದ ಬಗ್ಗೆ ಅಪಪ್ರಚಾರ ಮಾಡಿ, ಆತ ಅನಾರೋಗ್ಯ ಪೀಡಿತನಾಗುತ್ತಿದ್ದಾನೆ. ಹಾಗಾಗಿ ನಾವು ಪರಿವರ್ತನೆ ಆಗುವುದರ ಕಡೆಗೆ ಹೆಚ್ಚು ಗಮನ ನೀಡಬೇಕು ಎಂದರು.

ಹೃದಯ ಎಂಬುದು ಮನುಷ್ಯನಿಗೆ ಮಹಾದಾನಿ ಇದ್ದಂತೆ. ತನ್ನ ಕೆಲಸಕ್ಕೆ ಶೇ.5 ರಷ್ಟು ರಕ್ತವನ್ನು ಬಳಸಿಕೊಳ್ಳುತ್ತದೆ. ಉಳಿದ ಶೇ.95 ರಷ್ಟು ರಕ್ತವನ್ನು ದೇಹದ ಇತರೆ ಭಾಗಕ್ಕೆ ಹೋಗುವಂತೆ ಮಾಡುತ್ತದೆ. ಜೊತೆಗೆ ನಾವೆಲ್ಲ ಉತ್ತಮ ಸ್ನೇಹಿತರ ಬಳಗ ಹೊಂದಬೇಕು. ಆಗ ಮಾತ್ರ ಅವರ ಆಯಸ್ಸು ಹೆಚ್ಚುತ್ತದೆ. ಸಮಸ್ಯೆ ಬಂದಾಗ ಸ್ಪಂದಿಸುವವರೇ ನಿಜವಾದ ಸಂಬಂಧಿಗಳು. ಸಂಪತ್ತಿಗಿಂತ ಸರಳತೆಯೇ ಜೀವನದ ಮುಖ್ಯವಾಗಬೇಕು ಎಂದರು.

ವೇದಿಕೆಯಲ್ಲಿ ಪ್ರಜಾಪಿತ ಬಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಡಾ.ಲಕ್ಷ್ಮೀಜಿ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಕಲಬುರಗಿ ವಿವಿ ವಿಶ್ರಾಂತ ಕುಲಪತಿ ಪ್ರೊ.ಇ.ಟಿ.ಪುಟ್ಟಯ್ಯ, ಹಿರಿಯ ಓ.ಶಾಮ್ ಭಟ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಗೌರವ ಧನ ಹೆಚ್ಚಳವೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಮಾ.2ಕ್ಕೆ 'ಬೆಂಗಳೂರು ಚಲೋ'

ಬಜೆಟ್ ಮಂಡನೆ ಹಿನ್ನೆಲೆ ಸರ್ಕಾರದ ಗಮನ ಸೆಳೆಯುವ ಉದ್ದೇಶ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಫೆ.23(ಎಂಟಿವೈ)– ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರಿಯರಿಗೆ ಗೌರವ ಧನ ಹೆಚ್ಚಳ, ಗ್ರಾಚ್ಯುಯಿಟಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮಾ.2ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು 'ಬಜೆಟ್ ಪೂರ್ವ ಬೆಂಗಳೂರು ಚಲೋ' ಹಮ್ಮಿಕೊಂಡಿದ್ದಾರೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ 6ನೇ ಗ್ಯಾರಂಟಿ ಯೋಜನೆಯಾಗಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗೌರವ ಧನ ಹೆಚ್ಚಳ ಮಾಡಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ರೂ., ಸಹಾಯಕಿಯರಿಗೆ 10 ಸಾವಿರ ಗೌರವ ಧನ ಹೆಚ್ಚಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ 2011 ರಿಂದ ನಿವೃತ್ತರಾಗಿ ರುವ ವಯೋವೃದ್ಧ ಕಾರ್ಯಕರ್ತೆಯರು ಮತ್ತು ಸಹಾಯಕಿಯಕರಿಗೆ ಗ್ರಾಚ್ಯುಯಿಟಿ ಜಾರಿಗೊಳಿಸಬೇಕು. ಅಂಗನವಾಡಿ ಕೇಂದ್ರಗಳ ಕೆಲಸಗಳ ಜವಾಬ್ದಾರಿಯೊಂದಿಗೆ ಹೆಚ್ಚುವರಿಯಾಗಿ ಬಲವಂತವಾಗಿ ಬಿಎಲ್‌ಓ ಜವಾಬ್ದಾರಿ ವಹಿಸಬಾರದು. ಬಿಎಲ್‌ಓ ಜವಾಬ್ದಾರಿ ನಿರಾಕರಿಸುವ ಕಾರ್ಯಕರ್ತೆಯರ ವಿರುದ್ಧ ಕ್ರಮ ಜರುಗಿಸಿ ಅಮಾನತುಗೊಳಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸಲು ಅವಕಾಶ ಮಾಡಿಕೊಡುತ್ತಿರುವುದರಿಂದ ಅಂಗನವಾಡಿಗಳಿಗೆ ಬರುವ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳ ಮೂಲ ಆಶಯಗಳು ಗಾಳಿ ಗೋಪುರವಾಗುತ್ತಿದೆ. ಆದ್ದರಿಂದ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಬಜೆಟ್ ಸಿದ್ಧತೆ ಮಾಡಿಕೊಳ್ಳುತ್ತಿದೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವುದಕ್ಕೆ ಈಗಲೇ ಯೋಜನೆ ರೂಪಿಸಬೇಕು. ಚುನಾವಣೆ ವೇಳೆ ತನ್ನ ಪ್ರಣಾಳಿಕೆಯಲ್ಲಿ ಗೌರವ ಧನ ಹೆಚ್ಚಳ ಮಾಡುವುದಾಗಿ ನೀಡಲಾಗಿದ್ದ ಭರವಸೆ ಹಾಗೂ 6ನೇ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸುವಂತೆ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಮಾ.2ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೆಂಗಳೂರು ಚಲೋ ಪ್ರತಿಭಟನಾ ಸಭೆ ಆಯೋಜಿಸಲಾಗಿದೆ. ಈ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಬೇಡಿಕೆ ಈಡೇರಿಸದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾ ಸಮಿತಿ ಪದಾಧಿಕಾರಿಗಳಾದ ವೈ. ಮಹದೇವಮ್ಮ, ಸಿ.ಗಿರಿಜ, ಗೀತಾ, ಭಾಗ್ಯ, ಡಿ. ಜಗನ್ನಾಥ್, ವನಜಾಕ್ಷಿ, ಅನಸೂಯ, ಸುಮಾ, ತುಳಸಿಬಾಯಿ ಇದ್ದರು.

ಶಿಲ್ಪಿ ಅರುಣ್ ಯೋಗಿರಾಜ್, ತಾರಾ ಜೋಡಿ ವಸಿಷ್ಠ ಸಿಂಹ–ಹರಿಪ್ರಿಯ, ಬಿಗ್‌ಬಾಸ್ ಸೂರಜ್ ಸಿಂಗ್, ಗಾಯಕಿ ಅನನ್ಯ ಭಟ್, ರ್ಯಾಪರ್ ಅಲೋಕ್ ಆರ್.ಬಾಬು

ಮೈಸೂರು ಸ್ವಚ್ಛತಾ ರಾಯಭಾರಿಗಳು


ಅರುಣ್ ಯೋಗಿರಾಜ್


ನಟ ವಸಿಷ್ಠ ಸಿಂಹ


ನಟಿ ಹರಿಪ್ರಿಯ


ಸೂರಜ್ ಸಿಂಗ್


ಅನನ್ಯ ಭಟ್


ಆಲೋಕ್ ಆರ್.ಬಾಬು

ಮೈಸೂರು, ಫೆ.23(ಎಂಕೆ)– ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ನಟ ವಸಿಷ್ಠ ಸಿಂಹ, ನಟಿ ಹರಿಪ್ರಿಯ, ಬಿಗ್‌ಬಾಸ್ ರಿಯಾಲಿಟಿ ಶೋ ಖ್ಯಾತಿಯ ಸೂರಜ್ ಸಿಂಗ್, ಖ್ಯಾತ ಗಾಯಕರಾದ ಅನನ್ಯ ಭಟ್ ಹಾಗೂ ರ್ಯಾಪರ್ ಆಲೋಕ್ ಆರ್.ಬಾಬು 'ಸ್ವಚ್ಛ ಸರ್ವೇಕ್ಷಣ್–2026'ನೇ ಸಾಲಿನ ಸ್ವಚ್ಛತಾ ರಾಯಭಾರಿಗಳಾಗಿ ಆಯ್ಕೆಯಾಗಿದ್ದಾರೆ.

ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ವೈಭವದಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮೈಸೂರು ನಗರದ ಸ್ವಚ್ಛತೆಯನ್ನು ಇನ್ನಷ್ಟು ಉತ್ತಮಪಡಿಸುವ ಉದ್ದೇಶದಿಂದ ಮೈಸೂರು ಮಹಾನಗರ ಪಾಲಿಕೆಯು ಆರು ಮಂದಿ ಸಾಧಕರನ್ನು 'ಸ್ವಚ್ಛತಾ ಬ್ರಾಂಡ್ ಅಂಬಾಸಿಡರ್'ಗಳನ್ನಾಗಿ ನೇಮಕ ಮಾಡಿದೆ.

ಸ್ವಚ್ಛ ಭಾರತ ಅಭಿಯಾನದಡಿ ಮೈಸೂರು ನಗರವನ್ನು ಕೇವಲ ಬಾಹ್ಯವಾಗಿ ಅಷ್ಟೇ ಅಲ್ಲದೆ, ನಾಗರಿಕರ ಮನೋಭಾವದಲ್ಲಿಯೂ ಸ್ವಚ್ಛತೆಯ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ನಗರ ಪಾಲಿಕೆ ಕ್ರಮ ಕೈಗೊಂಡಿದ್ದು, ಚಲನಚಿತ್ರ, ಸಂಗೀತ ಹಾಗೂ ಕಲೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗುರುತರ ಸೇವೆ ಸಲ್ಲಿಸಿರುವ ಗಣ್ಯರ ಜನಪ್ರಿಯತೆ ಮತ್ತು ಬದ್ಧತೆಯನ್ನು ಗಮನಿಸಿ ಸ್ವಚ್ಛತಾ ರಾಯಭಾರಿಯ ಜವಾಬ್ದಾರಿ ನೀಡಲಾಗಿದೆ.

ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಲಾದ ಬಾಲರಾಮ ಮೂರ್ತಿಯನ್ನು ರೂಪಿಸುವ ಮೂಲಕ ಮನೆ ಮಾತಾಗಿರುವ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಸ್ಯಾಂಡಲ್‌ವುಡ್‌ನಲ್ಲಿ ಹಲವಾರು ಚಲನಚಿತ್ರಗಳ ಮೂಲಕ ಅಪಾರ ಅಭಿಮಾನಿ ಬಳಗ ಹೊಂದಿರುವ ನಟ ವಸಿಷ್ಠ ಸಿಂಹ ಮತ್ತು ನಟಿ ಹರಿಪ್ರಿಯ ತಾರಾ ಜೋಡಿ, ಬಿಗ್‌ಬಾಸ್ ರಿಯಾಲಿಟಿ ಶೋ ಖ್ಯಾತಿಯ ಸೂರಜ್ ಸಿಂಗ್ ಹಾಗೂ ಶ್ರೀ ಮಲೆ ಮಹದೇಶ್ವರ ಕುರಿತು ಹಾಡಿನ ಮೂಲಕ ಅತೀವ ಜನಪ್ರಿಯತೆ ಹಿನ್ನಲೆಯಲ್ಲಿ ಗಾಯಕಿ ಅನನ್ಯ ಭಟ್ ಮತ್ತು ಆಲ್ ಒಕೆ ಖ್ಯಾತಿಯ ರ್ಯಾಪರ್ ಅಲೋಕ್ ಆರ್.ಬಾಬು ಮೈಸೂರಿನ ನೂತನ ಸ್ವಚ್ಛತಾ ರಾಯಭಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ.


ಸ್ವಚ್ಛತಾ ರಾಯಭಾರಿಗಳಾಗಿ ಆಯ್ಕೆಯಾಗಿರುವ ಗಣ್ಯರು, ಮೈಸೂರು ನಗರದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಮಹಾನಗರ ಪಾಲಿಕೆ ಹಮ್ಮಿಕೊಳ್ಳುವ ಸ್ವಚ್ಛ ಭಾರತ ಅಭಿಯಾನದ ವಿವಿಧ ಕಾರ್ಯಕ್ರಮಗಳಲ್ಲಿ ಹಾಗೂ ಜಾಥಾಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಶಾಲಾ–ಕಾಲೇಜು, ವಿವಿಧ ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಸ್ವಚ್ಛತೆ ಸಂದೇಶ ನೀಡಲಿದ್ದಾರೆ.

ಯಾವುದೇ ಗೌರವಧನ ಇಲ್ಲ: ನಗರಪಾಲಿಕೆಯು ಪ್ರತೀ ವರ್ಷದಂತೆ ಈ ವರ್ಷವೂ ಸ್ವಚ್ಛತಾ ರಾಯಭಾರಿಗಳನ್ನು ಆಯ್ಕೆ ಮಾಡಿದ್ದು, ಸಂಪೂರ್ಣವಾಗಿ ಸೇವಾ ಮನೋಭಾವದಿಂದ, ಯಾವುದೇ ಗೌರವಧನ ಅಥವಾ ಆರ್ಥಿಕ ಲಾಭದ ಅಪೇಕ್ಷೆಯಿಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ ಸಾಧಕರು ರಾಯಭಾರಿಗಳಾಗಿದ್ದಾರೆ. ಮೈಸೂರನ್ನು ಶಿಸ್ತುಬದ್ಧ ಹಾಗೂ ಮಾದರಿ ನಗರವಾಗಿ ರೂಪಿಸುವ ಪಾಲಿಕೆಯ ಆಶಯಕ್ಕೆ ಇವರ ಸಹಕಾರ ಜೊತೆಯಾಗಲಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಿಳಿಸಿದ್ದಾರೆ.

ಕಲ್ಲು ತೂರಾಟ ಸರ್ಕಾರದ ಕಾನೂನು ವೈಫಲ್ಯ

ಮೈಸೂರು, ಫೆ.23– ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ನಡೆಯುತ್ತಿರುವ ವೇಳೆ ಕಲ್ಲು ಮತ್ತು ಚಪ್ಪಲಿ ತೂರಾಟ ನಡೆಸಿರುವುದು ಕೇವಲ ಇದೊಂದು ಅಹಿತಕರ ಘಟನೆಯಲ್ಲ. ಬದಲಾಗಿ ಇದು ರಾಜ್ಯದ ಕಾನೂನು ಸುವ್ಯವಸ್ಥೆಯ ಸಂಪೂರ್ಣ ವೈಫಲ್ಯದ ಸಂಕೇತವಾಗಿದೆ ಎಂದು ಬಿಜೆಪಿ ಮುಖಂಡರಾದ ಡಾ. ಹೇಮಾ ನಂದೀಶ್ ತಿಳಿಸಿದ್ದಾರೆ.

ಈ ಘಟನೆಯ ಹಿಂದೆ ಕಾಂಗ್ರೆಸ್ ಸರ್ಕಾರದ ಅತಿಯಾದ ಓಲೈಕೆ ರಾಜಕಾರಣವು ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದು, ಒಂದು ವರ್ಗವನ್ನು ಸಮಾಧಾನಪಡಿಸುವ ಭರದಲ್ಲಿ ಸಮಾಜಘಾತಕ ಶಕ್ತಿಗಳಿಗೆ ಮಣೆ ಹಾಕುತ್ತಿರುವುದು ದುರದೃಷ್ಟಕರವಾಗಿದೆ. ಹಿಂದೂಗಳ ಧಾರ್ಮಿಕ ಭಾವನೆಗಳು ಮತ್ತು ರಾಷ್ಟ್ರ ಪುರುಷರ ದಿನಾಚರಣೆ ಮೆರವಣಿಗೆಗಳ ಮೇಲೆ ಪದೇ ಪದೆ ಇಂತಹ ದಾಳಿಗಳು ನಡೆಯುತ್ತಿದ್ದರೂ, ಸರ್ಕಾರವು ಕಣ್ಣುಮುಚ್ಚಿ ಕುಳಿತಿರುವುದು ದುಷ್ಕರ್ಮಿಗಳಿಗೆ ಪರೋಕ್ಷವಾಗಿ ಬೆಂಬಲ ನೀಡಿದಂತಿದೆ. ಹಿಂದೂ ಸಮಾಜವನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಈ ಸರಣಿ ಘಟನೆಗಳನ್ನು ಹತ್ತಿಕ್ಕುವ ಬದಲು, ಅಪರಾಧಿಗಳ ವಿರುದ್ಧ ಮೃದು ಧೋರಣೆ ತಳೆಯುತ್ತಿರುವ ಸರ್ಕಾರದ ನಿಲುವು ಖಂಡನೀಯ ಎಂದು ತಿಳಿಸಿದ್ದಾರೆ.







ಮೈಸೂರು ಮಿತ್ರ
ಒದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



